ಬೆಲೆ: ಎರಡು ಆಣೆ

ಕರ್ಮವೀರ

ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ

ಸಂಪಾದಕರು: ರಂ. ಶಾ. ಪುರೋಹಿತ ಎಂ. ಎ.

Editor: M. R. Purohit, M. A.

—(ಸಂಪುಟ ೨೭)— ಹುಬ್ಬಳ್ಳಿ ಸೋಮವಾರ ತಾರೀಖು ೯—೬—೧೯೪೭ —(ಸಂಚಿಕೆ ೩೩)—

ಸಾಮ್ರಾಜ್ಯಹೀನ ಬ್ರಿಟನ್ನು ದುರ್ಬಲವಾಗಲಾರದು

ಟ್ರೂಮನ್ನರ ಧೋರಣದಿಂದ ೩ ನೆಯ ಮಹಾಯುದ್ಧಕ್ಕೆ ಕರೆ ಕೊಟ್ಟಂತೆಯೇ ಸರಿ

ಅಧಿಕಾರದಾನದಿಂದ ಭಾರತ_ಬ್ರಹ್ಮದೇಶಗಳು ಬ್ರಿಟನ್ನಿನ ಹಿತಚಿಂತಕವಾಗಿ ಉಳಿಯುವವು

ಸಾಮ್ಯವಾದಿ ಬ್ರಿಟನ್ನು ಸಾಮ್ರಾಜ್ಯವಾದಿಯಾಗಲಾರದು— 'ಮಧ್ಯಪೂರ್ವ ರಾಷ್ಟ್ರಗಳಲ್ಲಿ ಸಶಕ್ತ ರಾಷ್ಟ್ರವೊಂದು ಉದಯವಾಗಿ ತನ್ನ ಹತ್ತಿರದ ದೇಶಗಳಿಗೆ ರಕ್ಷಣೆ ಕೊಡಲು ಸಿದ್ಧವಾದ ಹೊರತು ಆ ದೇಶಗಳು ಅಮೇರಿಕೆಯ ಒತ್ತಾಯದ ಆಶ್ರಯವನ್ನು ಸ್ವೀಕರಿಸದೆ ಗತ್ಯಂತರವಿಲ್ಲ' ಎಂದು ಇಂಗ್ಲಂಡಿನ ಸುಪ್ರಸಿದ್ಧ ಸಾಮ್ಯವಾದೀ ಧುರೀಣರಾದ ಪ್ರೊ. ಹೆರಾಲ್ಡ್ ಜೆ. ಲಾಸ್ಕಿಯವರು ಅಭಿಪ್ರಾಯಪಡುತ್ತಾರೆ.

ಅಮೇರಿಕೆಯ ಶತಮಾನವು ತಡವಿಲ್ಲದೆ ಪ್ರಾರಂಭಿಸಲ್ಪಡಲೆಂದು ಅಧ್ಯಕ್ಷ ಟ್ರೂಮನ್ನರು ಹೇಳಿದ್ದಾರೆ. ಅವರು ಬಾಯಲ್ಲಿ ಸ್ವಾತಂತ್ರ್ಯ ಮತ್ತು ಪ್ರಜಾಸತ್ತೆಯ ಬಗ್ಗೆ ಎಷ್ಟೇ ಹೇಳಲಿ ಮಧ್ಯಪೂರ್ವದಲ್ಲಿರುವ ಅಮೇರಿಕೆಯ ಎಣ್ಣೆಯ ಗಣಿಗಳ ಸಲುವಾಗಿ ಹೊಸದೊಂದು ಸಾಮ್ರಾಜ್ಯವನ್ನು ಕಟ್ಟಿ ಅದರ ಗಡಿಗಳನ್ನು ರಕ್ಷಿಸುವ ಉಪಾಯಗಳನ್ನು ಕೈಕೊಳ್ಳಬೇಕೆಂದು ಕಾಂಗ್ರೆಸ್ಸಿಗೆ ಹೇಳುತ್ತಾರೆ. ಈಗ ಮೊಟ್ಟಮೊದಲನೆಯದಾಗಿ ಟ್ರೂಮನ್ನರು ಸಹಾಯ ನೀಡಬೇಕೆನ್ನುವ ಎರಡು ರಾಷ್ಟ್ರಗಳು ಸ್ವತಂತ್ರವೂ ಅಲ್ಲ, ಪ್ರಜಾಸತ್ತಾತ್ಮಕವಾದವೂ ಅಲ್ಲ. ಎಲ್ಲಾ ರಾಜಕೀಯ ಮುಖಂಡರಂತೆ ಅವರೂ ಗ್ರೀಸಿನಲ್ಲಿ ಬ್ರಿಟನ್ನಿರುವ ಕಾಲದ ನಿಜವಾದ ಅರ್ಥವನ್ನು ಹೇಳುವದಿಲ್ಲ.

ಸಾಮ್ರಾಜ್ಯವಾದೀ ರಾಷ್ಟ್ರವಾವುದೇ ಆಗಲಿ ಇನ್ನೊಂದು ದೇಶದಲ್ಲಿ ತನ್ನ ಅರ್ಧಪ್ರಭುತ್ವವನ್ನು ಸ್ಥಾಪಿಸಿ ನಿಲ್ಲಲಾರದು. ಪ್ರಕಟವಾಗಿಯಾಗಲಿ, ಗುಪ್ತವಾಗಿಯಾಗಲಿ, ಸಂಪೂರ್ಣ ಪ್ರಭುತ್ವವನ್ನೇ ಅದು ಸ್ಥಾಪಿಸಬೇಕಾಗುವುದು.

ಅವಶ್ಯಕತೆಯ ಒತ್ತಾಯದ ಪ್ರಕಾರ ಬ್ರಿಟನ್ನು ನಿವೃತ್ತವಾದೊಡನೆ ಅಮೇರಿಕೆಯ ಪ್ರದೇಶವಾಗುವದು ಅದರ ರಾಜಕೀಯ ಧೋರಣೆಕ್ಕೆ ಸಹಜವಾದದ್ದು. ಸಂಯುಕ್ತರಾಷ್ಟ್ರ ಸಂಘವು ಗಣ್ಯವೆಂದು ತಿಳಿಯಲಾಗುತ್ತಿಲ್ಲ. ಜಗತ್ತು ಏನೆಂದರೂ ಸರಿಯೆ, ಅಮೇರಿಕೆಯು ತಾನು ಕಂಡ ದಾರಿಯಲ್ಲಿ ಹೋಗುವುದು ನಿಶ್ಚಿತವೆಂಬುದು ರಶಿಯಕ್ಕೊಂದು ಎಚ್ಚರಿಕೆಯು ಮಾತ್ರಾಗಿದೆ ಯೆನ್ನಬಹುದು. ಹತ್ತು ವರುಷಗಳ ಮೇಲಿನ ಪರಿಸ್ಥಿತಿಯನ್ನು ಗಮನಿಸುವುದಾದರೆ ಇವು ಬಹಳ ಅಪಾಯಕರವಾದ ಕಾರ್ಯಗಳೆಂದು ಯಾರೂ ಹೇಳಬಹುದು.

ಒಂದು ಹೊಸದೊಂದು ಸಾಮ್ರಾಜ್ಯವಾದವನ್ನು ಸ್ಥಾಪಿಸುವುದು ಇಲ್ಲವೆ ಸಂಯುಕ್ತ ರಾಷ್ಟ್ರಸಂಘದೊಡನೆ ಅದರ ಎಲ್ಲಾ ಕಾರ್ಯಗಳಲ್ಲಿ ಸಹಕರಿಸುವುದು ಈ ಎರಡರಲ್ಲಿ ಯಾವುದನ್ನು ಕೈಕೊಳ್ಳಬೇಕೆಂದು ಕಾಂಗ್ರೆಸ್ಸು ಈಗ ನಿರ್ಧರಿಸಬೇಕಾಗಿದೆ.

ಭಾರತದಲ್ಲಿ ಬ್ರಿಟನ್ನಿನ ಅಧಿಕಾರತ್ಯಾಗ

೧೯೪೮ ರ ಜೂನಿನಲ್ಲಿ ಭಾರತದ ಮೇಲಿನ ಅಧಿಕಾರವನ್ನು ಬ್ರಿಟನ್ನು ಬಿಟ್ಟುಕೊಡುವುದು, ಕೆಲವೇ ಕಾಲದಲ್ಲಿ ಬ್ರಹ್ಮದೇಶ ಕೂಡ ವಸಾಹತುಸ್ವರಾಜ್ಯ ಇಲ್ಲವೆ ಸಂಪೂರ್ಣ ಸ್ವರಾಜ್ಯವನ್ನು ಪಡೆಯಬಹುದು. ಮುಂದಿನ ವರ್ಷದೊಳಗೆ ಇಜಿಪ್ತದಿಂದಲೂ ಬ್ರಿಟನ್ನು ಹೊರಬೀಳುವುದು. ಪಾಲಿಸ್ತಾನದ ಬಗ್ಗೆ ಬ್ರಿಟನ್ನು ಸದ್ಯದ ಧೋರಣವನ್ನು ಬದಲಿಸಬೇಕಾಗುವದು. ಆಫ್ರಿಕದ, ಮಲಯದ ಮತ್ತು ಕ್ಯಾರಿಬಿಯನ್ನಿನ ಬ್ರಿಟಿಶ ಪ್ರದೇಶಗಳಲ್ಲಿ ಬಹಳ ಆಂದೋಲನಗಳು ನಡೆಯುತ್ತಿರುವುದರಿಂದ ಅವುಗಳ ರಾಜಕೀಯ ಸ್ಥಾನವಾದರೂ ಮಾರ್ಪಡಬಹುದು. ಈ ಎಲ್ಲ ಸಂಗತಿಗಳ ಬಗ್ಗೆ ಹೊರಜಗತ್ತು ಯಾವ ಧೋರಣೆಯನ್ನು ತಾಳುತ್ತದೆಂಬುದನ್ನು ನಿರೀಕ್ಷಿಸಬೇಕಾಗಿದೆ. ಅವು ಬ್ರಿಟಿಶ ಸಾಮ್ರಾಜ್ಯದ ಅಳಿಗಾಲದ ಸೂಚನೆಗಳೆಂದು ರಶಿಯದಲ್ಲಿಯ ಅಭಿಪ್ರಾಯ. ನಾವು ರೋಮ ಮತ್ತು ಸ್ಪೇನಗಳ ದಾರಿಯನ್ನು ಹಿಡಿದಿರುವೆವೆಂದು ಸೋವಿಯೆಟ ಪ್ರಚಾರಕರೆನ್ನುತ್ತಾರೆ. ವಾಲ್ಟರ್ ಲಿಪ್‌ಮನ್ ಮೊದಲಾದ ಅಮೇರಿಕೆಯ ಅನೇಕ ಪ್ರಮುಖರು ಬ್ರಿಟನ್ನು ಪ್ರಥಮ ಶ್ರೇಣಿಯ ರಾಷ್ಟ್ರವೆಂಬ ಮಾತು ಇಂದಿಗೆ ಮುಗಿಯಿತೆನ್ನುತ್ತಾರೆ.

ರಶಿಯದ ಪ್ರಭಾವ ತುಂಬಿಕೊಳ್ಳುವುದರ ಮೊದಲೇ ನಾವು ಹೋಗಿ ಬ್ರಿಟನ್ನು ಬರಿದು ಮಾಡಿದ ಸ್ಥಳವನ್ನು ತುಂಬಬೇಕೆಂದು ಲಿಪ್‌ಮನ್ನನ ಮತ. ಇದು ಅಮೇರಿಕೆಯ ಶತಮಾನವನ್ನು ಮುಣ್ಣುಗಾಲು ಮಾಡುವುದರಲ್ಲಿ ಸಂದೇಹವಿಲ್ಲ. ಇದೇ ಮನೋಭಾವದಿಂದ ಚರ್ಚಿಲ್ಲರು ಸಹ ಬ್ರಿಟಿಶ ಸಾಮ್ರಾಜ್ಯ ಕರಗಿ ಹೋಗುವುದರ ಬಗ್ಗೆ ಸಂತಾಪಪಟ್ಟರು; ಜಗತ್ತಿನ ಶಾಂತಿ ಸಮಾಧಾನಗಳನ್ನು ಕಾಪಾಡಲು ಉಪಯುಕ್ತವಾದ ಸಾಮ್ರಾಜ್ಯವೆಂಬ ಆಯುಧವು ಕೈಬಿಡುವುದಲ್ಲಾ ಎಂದು ಕಸವಿಸಿಪಟ್ಟರು.

ಆಟ್ಲೀಯವರ ದೃಢನಿರ್ಧಾರ

ನಾವು ಯಾವ ಅಭಿಪ್ರಾಯವನ್ನೇ ಸ್ವೀಕರಿಸಲಿ ಆಟ್ಲೀಯವರ ದೃಢನಿರ್ಧಾರದಿಂದ ಜಗತ್ತಿನ ಪ್ರಭುತ್ವಗಳ ಸಾಮರ್ಥ್ಯದಲ್ಲಿ ಬದಲಾವಣೆಯುಂಟಾಗುವುದು ಖಂಡಿತ. ಈ ನಿರ್ಣಯದಿಂದ ಅಮೇರಿಕೆಯ ಸಂಯುಕ್ತ ಸಂಸ್ಥಾನವು ಭೂಮಧ್ಯ ಸಮುದ್ರದಲ್ಲಿ ಗಟ್ಟಿಯಾಗಿ ತನ್ನ ಅಧಿಕಾರವನ್ನು ನಿಲ್ಲಿಸುವಂತಾಗುತ್ತದೆ. ಆದರಿಂದ ಆಫ್ರಿಕದಲ್ಲಿ ರಾಜಕೀಯ ಬೆಳವಣಿಗೆ ಹೇಗಾಗುತ್ತಿದೆಯೆಂಬುದನ್ನು ಎಚ್ಚರದಿಂದ ಅಮೇರಿಕನರು ನೋಡುವುದು ಸಹಜವಾಗುತ್ತದೆ; ಚೀನ ಜಪಾನುಗಳು ಸಂಯುಕ್ತ ಸಂಸ್ಥಾನದ ಗಡಿಗಳೆಂದು ತಿಳಿದು ಮುಂದೆ ಸಂಭವಿಸಬಹುದಾದ ಸಮರ ಕೇಂದ್ರಗಳೆಂದು ಗಣಿಸಬೇಕಾಗುತ್ತದೆ. ಮಧ್ಯಪೂರ್ವದ ಎಣ್ಣೆಯ ಗಣಿಗಳ ದೆಸೆಯಿಂದಾಗಿ ಗ್ರೀಸಿನ ಭವಿತವ್ಯವು ಅಮೇರಿಕೆಗೆ ಬಹಳ ಮುಖ್ಯವಾದದ್ದೆನಿಸುವುದು. ಅಧ್ಯಕ್ಷ ಟ್ರೂಮನ್ನರ ಸಲಹೆಗಾರರು ಇರಾಣಿನ ಎಣ್ಣೆಗಣಿಗಳ ಸ್ಥಳದಿಂದ ಪಾಲಿಸ್ತಾನದ ತೀರದ ಬಂದರಗಳವರೆಗಿನ ಪ್ರದೇಶವನ್ನು ಸೂಕ್ಷ್ಮವಾಗಿ ನೋಡಬೇಕಾಗಿದೆ. ಪರಿಸ್ಥಿತಿಯು ಉಳಿದೆಲ್ಲ ರಾಷ್ಟ್ರಗಳ ಸಂಬಂಧ ಕಳೆದುಕೊಂಡು ಅಮೇರಿಕೆಯು ಸ್ವತಂತ್ರವಾಗಿ ನಿಲ್ಲಲಾರದೆಂದು ಹೇಳುತ್ತದೆ.

ಇಡಿಯ ಜಗತ್ತು ಈಗ ಅಮೇರಿಕೆಯ ಹೊಸಲೆಡೆಯಲ್ಲಿ ಕಾದು ನಿಂತಿದೆ. ನಾಳಿನ ೨೦ ವರ್ಷಗಳಲ್ಲಿ ಅಮೇರಿಕೆಯ ರಾಜಕೀಯ ಮುತ್ಸದ್ದಿಗಳನ್ನು ಮಹತ್ವದ ನಿರ್ಣಯಗಳನ್ನು ಮಾಡಿ ವಿಧಿಯೊಡನೆ ಮುಖಾಮುಖಿ ಭೆಟ್ಟಿಯಾಗಬೇಕಾಗುವುದು.

ಮಧ್ಯಪೂರ್ವದ ಪ್ರಾಣಸ್ಥಾನಗಳು

ಬ್ರಿಟನ ರಶಿಯಗಳ ಸಂಬಂಧ ಮತ್ತು ರಶಿಯ ಅಮೇರಿಕೆಗಳ ಸಂಬಂಧ ಇವು ಮಧ್ಯಪೂರ್ವವನ್ನು ನಮ್ಮ ಸಾಮ್ರಾಜ್ಯಪ್ರಶ್ನೆಯ ಮುಖ್ಯ ಗುರಿಯಾಗಿ ಮಾಡುತ್ತವೆ. ಮಧ್ಯಪೂರ್ವವು ಸಮರಶಾಸ್ತ್ರದ ದೃಷ್ಟಿಯಿಂದ ಪ್ರಾಣಸ್ಥಾನವಾಗಿರುವುದರಿಂದಲೆ ನಾವು ಇನ್ನೂ ಗ್ರೀಸಿನಲ್ಲಿ ಉಳಿದಿದ್ದೇವೆ. ಮಧ್ಯಪೂರ್ವದಲ್ಲಿ ನಮಗೆ ಆಸಕ್ತಿ ಇರುವುದರಿಂದಲೆ ಯುಗೋಸ್ಲೋವಿಯದಲ್ಲಿ ಅಧಿಕಾರ ವಹಿಸಿರುವ ಮಾರ್ಶಲ್ ಟಿಟೋವಿನ ಬಗ್ಗೆ ಸಂಶಯದೃಷ್ಟಿಯಿಂದ ನೋಡುತ್ತಿದ್ದೇವೆ. ಆದರಿಂದಲೇ ನಾವು ಅರಬ ಲೀಗಿಗೆ ಆಶ್ರಯದಾತರಾಗಿದ್ದೇವೆ. ಅದಕ್ಕಾಗಿಯೇ ಗಡಿಬಿಡಿಯಿಂದ ಬೆವಿನ್ನರು ಎಲ್ಲೂ ಇಲ್ಲದ ಟ್ರಾನ್ಸ್‌ಜೋರ್ಡನ್ ರಾಜ್ಯವನ್ನು ಅಸ್ತಿತ್ವಕ್ಕೆ ತಂದರು. ಅದೇ ಕಾರಣಕ್ಕಾಗಿ (ಸೂಡಾನಿನ ಮೇಲೆ ಅದರ ಅಧಿಕಾರ ನಡೆವಂತೆ ಮಾಡುವದೊಂದನ್ನು ಬಿಡು) ಈಜಿಪ್ತವನ್ನು ಬಿಟ್ಟು ಹೊರಡಲು ನಾವು ಸಿದ್ಧರಾಗಿದ್ದೇವೆ. ಅದಕ್ಕಾಗಿಯೇ ೧೯೪೫ ರ ಮೇ ತಿಂಗಳಲ್ಲಿ ಯಹೂದಿಗಳಿಗೆ ಬ್ರಿಟಿಶ ಕೂಲಿಕಾರ ಪಕ್ಷವು ಕೊಟ್ಟ ಭಾಷೆಯನ್ನು ಆಟ್ಲೀ ಸರಕಾರವು ಮುರಿಯಬೇಕಾಯಿತು. ಅಷ್ಟಲ್ಲದೆ, ಅದರ ಮೇಲೆ ನೇರವಾಗಿ ಯುದ್ಧ ಹೂಡಲು ಮನಸ್ಸು ಬಾರದೆ ಆ ಪ್ರಶ್ನೆಯನ್ನು ಸಂಯುಕ್ತ ರಾಷ್ಟ್ರಸಂಘದ ಬಾಗಿಲಿಗೊಯ್ದಿದ್ದಾರೆ. ಇದೇ ದೃಷ್ಟಿಯಿಂದ ಅಮೇರಿಕೆಯ ಸಂಯುಕ್ತ ಸಂಸ್ಥಾನದಂತೆಯೇ ನಾವಾದರೂ ಎಣ್ಣೆಯ ಗಣಿಗಳ ಮೇಲಿನ ಅಧಿಕಾರವೊಂದನ್ನು ವಾಪಸು ಪಡೆಯಬಯಸಿದ್ದರೆ ಇರಾಣವು ಸ್ವತಂತ್ರ ರಾಷ್ಟ್ರವಾಗಿ ಅಭಿವೃದ್ಧಿಗೆ ಬರಲೆಂದು ಅಪೇಕ್ಷಿಸುವೆವು. ಮಧ್ಯಪೂರ್ವವೆಂದರೆ ನಮ್ಮ ರಹದಾರಿಗಳ ಮತ್ತು ಎಣ್ಣೆಯ ಮೂಲಸ್ಥಾನವೆಂದು ಹೇಳಬಹುದು.

ಈಯೆರಡನ್ನು ದೃಷ್ಟಿಯಲ್ಲಿಟ್ಟೇ ಬ್ರಿಟಿಶ ರಾಜಕೀಯ ಧೋರಣೆ ನಿಶ್ಚಯಿಸಲ್ಪಡುತ್ತದೆ. ಎಲ್ಲಾ ಕಠಿನವಾದ ನೀತಿತತ್ವಗಳಿಗೆ ತಕ್ಕ ಮನ್ನಣೆ ಕೊಟ್ಟ ಬಳಿಕ ಎಣ್ಣೆ ಮತ್ತು ಸಮರಶಾಸ್ತ್ರ— ಇವೇ ಇಂತಹ ನಿರ್ಣಯಗಳನ್ನು ಮಾಡಿರೆಂದು ನಮ್ಮನ್ನು ವಿಧಿಸತಕ್ಕವು. ಮುಂದಿನ ಕಲಿಮಾರಿನ ಕಡೆಯತನಕ ಯಂತ್ರಸಜ್ಜಿತ ಭೂಸೈನ್ಯ ವಿಮಾನದಳ ಮತ್ತು ನೌಕಾಪಡೆಗಳು ಎಣ್ಣೆಯ ಆಧಾರದಿಂದಲೇ ಉಳಿಯತಕ್ಕವು, ಇಲ್ಲದಿದ್ದರೆ ಅಳಿಯತಕ್ಕವು ಎಂಬುದು ಸ್ಪಷ್ಟವಾದ ಸಂಗತಿ. ಇಜಿಪ್ತದಿಂದ ಹೊರಬೀಳುವುದರಿಂದ, ಜಪಾನು ಜರ್ಮನಿಗಳು ಬಹಳ ವರ್ಷಗಳ ವರೆಗೆ ಮೂರ್ಛಾವಸ್ಥೆಯಲ್ಲಿರಬಹುದಾದುದರಿಂದ, ರಹದಾರಿಯ ದೃಷ್ಟಿಯಿಂದ ಭೂಮಧ್ಯಸಮುದ್ರದ ಮೇಲೆ ತನ್ನ ಅಧಿಕಾರ ದೃಢವಾಗಿರಬೇಕೆಂದು ಬ್ರಿಟನ್ನು ಉತ್ಸುಕವಾಗಿರುವುದು ಸ್ವಾಭಾವಿಕವಾಗಿದೆ. ರಶಿಯವು ತನ್ನ ಪ್ರಭಾವ ಬೀರೀತೆಂಬ ಹೆದರಿಕೆಯಿಲ್ಲದಿದ್ದರೆ ಅರಬರಾಷ್ಟ್ರಗಳಿಗೆ ಆಶ್ರಯ ಕೊಡುವುದು ಅಷ್ಟೇನೂ ಸಮಂಜಸವಾಗಿ ತೋರುವುದಿಲ್ಲ.

ಬ್ರಿಟನ್ನು ಹಿಡಿದ ತಪ್ಪುದಾರಿ

ಮೇಲೆ ಹೇಳಿದ ಪ್ರಕಾರ ಅರಬ ಇನಾಮುದಾರರಿಗೆ, ನಮಗೆ ಏನೂ ಲಾಭವಿಲ್ಲದಿದ್ದಾಗ ಬೆಂಬಲ ಕೊಡುವುದು ತಪ್ಪು. ಅವರು ತಮ್ಮ ಪ್ರಜೆಗಳ ಶಾಂತಿ ಸುಖಗಳ ಬಗ್ಗೆ ಎಂದೂ ಆಸಕ್ತಿ ವಹಿಸಿದವರಲ್ಲ; ಮತ್ತು ಅವರು ತಮ್ಮ ರಾಜ್ಯಗಳಲ್ಲಿ ಫ್ರೆಂಚ ಪ್ರಭಾವವನ್ನು ಕಡಿಮೆ ಮಾಡಲು ಬ್ರಿಟನ್ನನ್ನು ಉಪಯೋಗಿಸಿಕೊಂಡ ಜನರು. ಆ ಸಮಯಸಾಧಕರನ್ನು ಎಂದೂ ನಂಬಬಾರದು. ವಿಚಾರ ಮಾಡಿದರೆ ನಮ್ಮ ಮಧ್ಯಪೂರ್ವದ ಧೋರಣವು ಬೆವಿನ್ನರನ್ನು ಒಂದು ಕಡೆ ಅಮೇರಿಕೆಯ ಸ್ಟ್ಯಾಂಡರ್ಡ ಆಯಿಲ್ ಕಂಪನಿಗಳಿಗೂ ಮತ್ತೊಂದು ಕಡೆ ಗ್ರ್ಯಾಂಡ್ ಮುಫ್ತಿಗೂ ಗಂಟು ಹಾಕಿಬಿಡುತ್ತದೆ. ಪಾಲಿಸ್ತಾನದ ಯಹೂದಿಗಳಿಂದಾಗಲಿ, ಸಮಾಜವಾದಿಗಳಿಂದ ಸ್ಫೂರ್ತಿ ಪಡೆದ ಪರ್ಶಿಯದ ಸುಧಾರಕರಿಂದಾಗಲಿ, ಆ ಪ್ರದೇಶಗಳು ಆರ್ಥಿಕ ಪ್ರಗತಿಯನ್ನು ಸಾಧಿಸಲು ನೆರವಾಗುವ ಕೃತಿಯೊಂದು ರಾಷ್ಟ್ರವನ್ನು ಅವರು ವಿರೋಧಿಸುತ್ತಾರೆ. ಬ್ರಿಟಿಶ ತೆರಿಗೆದಾರರ ಖರ್ಚಿನಿಂದ ಇಟ್ಟ ಸೈನ್ಯದಿಂದ ಏನೂ ಲಾಭವಿಲ್ಲದೆ ನಮ್ಮ ಎಣ್ಣೆಯ ಗಣಿಗಳ ಜೊತೆಗೆ ಅಮೇರಿಕೆಯ ಮಧ್ಯಪೂರ್ವದ ಎಣ್ಣೆಯ ಗಣಿಗಳನ್ನೂ ರಕ್ಷಿಸಲಾಗುತ್ತದೆ!

ಬ್ರಿಟನ್ನಿನ ಸಾಮ್ಯವಾದ

ಸಾಮ್ಯವಾದಿ ಬ್ರಿಟನ್ನು ಎಂದೂ ಸಾಮ್ರಾಜ್ಯವಾದಿಯಾಗಲಾರದು. ಮೊದಲಿನಂತೆ ಅಧೀನ ರಾಷ್ಟ್ರಗಳ ಐಶ್ವರ್ಯವನ್ನು ಸ್ವಾರ್ಥಕ್ಕಾಗಿ ಉಪಯೋಗಿಸಿಕೊಳ್ಳುವ ಇಲ್ಲವೆ ಬೇರೆ ರಾಷ್ಟ್ರಗಳನ್ನು ನಮ್ಮ ನೌಕಾಬಲದಿಂದ ಅಧೀನದಲ್ಲಿಟ್ಟುಕೊಳ್ಳುವ ಸಾಮರ್ಥ್ಯದಿಂದ ನಾವು ಇಂದು ಜಗತ್ತಿನ ಶಾಂತಿರಕ್ಷಣೆಯ ಬಗ್ಗೆ ಯಾವ ನೆರವನ್ನೂ ಕೊಡಲಾರೆವು. ಅದಕ್ಕೆ ನಮ್ಮಂತೆಯೇ ಉಳಿದ ದೇಶಗಳೂ ಉದ್ಧಾರವಾಗಬೇಕೆಂಬ ಭ್ರಾತೃಭಾವದಿಂದ ಸ್ವತಂತ್ರವಾದ ಅವುಗಳೊಡನೆ ಸಹಕರಿಸುವುದೇ ನಾವು ಮಾಡಬೇಕಾದ ಕರ್ತವ್ಯ. ಆದುದರಿಂದ "ಬ್ರಿಟಿಶ ಸಾಮ್ರಾಜ್ಯದ ಕೊನೆಗಾಲ" ವೆಂದು ಅಮೇರಿಕನರು ಹೇಳುವಾಗ ಆ ಮಾತಿನ ಅರ್ಥವನು ಸ್ಪಷ್ಟಪಡಿಸಬೇಕು. ಅವರು ಬ್ರಿಟನು ಪ್ರಥಮ ಶ್ರೇಣಿಯ ರಾಷ್ಟ್ರವಾಗಿರಲಾರದೆನ್ನುವುದಾದರೆ ಆಗಲೇ ಸಂಯುಕ್ತ ಸಂಸ್ಥಾನವು ವಹಿಸಿರುವ ಧೋರಣದ ಪ್ರಕಾರ ಅದು ಮುರಿದು ಬೀಳುವುದಲ್ಲದೆ ಮೂರನೆಯ ಮಹಾಯುದ್ಧವನ್ನು ಹತ್ತಿರಕ್ಕೆಳೆದುಕೊಂಡಂತೆಯೇ ಸರಿ. ಯಾವ ಸಾಮ್ಯವಾದಿಯೇ ಆಗಲಿ ಭಾರತ ಮತ್ತು ಬ್ರಹ್ಮದೇಶಗಳನ್ನು ದಾಸ್ಯದಲ್ಲಿಟ್ಟುವದೇ ಪೌರುಷ್ಯವಾದರೆ ಬ್ರಿಟನ್ನು ರಶಿಯ ಮತ್ತು ಅಮೇರಿಕೆಯೊಡನೆ ಸಮಾನಾಧಿಕಾರ ಪಡೆಯಲು ಹೆಣಗಬೇಕೆಂದು ಹೇಳಲಾರನು. ಶಾಂತಿಯನ್ನು ಕಾಯ್ದುಕೊಳ್ಳುವುದಸಾಧ್ಯವಾದರೆ ಮತ್ತೊಂದು ಯುದ್ಧ ನಡೆದು ಬ್ರಿಟನ್ನೊಂದು ನಾಗರಿಕ ಜನಾಂಗವಾಗಿ ಉಳಿಯದಂತೆ ಅದನ್ನು ಸಂಪೂರ್ಣವಾಗಿ ನಾಶಮಾಡೀತು. ಇನ್ನು ಲಿಪ್‌ಮನ್ನರ ದಾರಿಯಲ್ಲಿ ಹೋದರೆ ಬ್ರಿಟನ್ನು ಬಿಟ್ಟಿರುವದರಿಂದ ಅಮೇರಿಕೆಯು ಜರ್ಮನಿ, ಪಶ್ಚಿಮ ಯೂರೋಪು, ತುರ್ಕಸ್ತಾನ ಮತ್ತು ಜಪಾನುಗಳಲ್ಲಿ ರಶಿಯದ ಪ್ರಭಾವ ಬೆಳೆಯದಂತೆ ತಡೆಯಬೇಕಾಗುತ್ತದೆ. ಇದರಂತೆ ನಡೆಯುವುದಾದರೆ ಚರ್ಚಿಲ್ ಹಿಟ್ಲರರಂತೆ ರಶಿಯದ ಬೊಲ್ಶೆವಿಜಮ್ಮನ್ನು ತಡೆಗಟ್ಟುವುದರ ಸಲುವಾಗಿ ಬಹಳ ವೆಚ್ಚದಿಂದ ಸೈನ್ಯವನು ಬೆಳಸಿ ಹೋರಾಟದ ಸಿದ್ಧತೆಯನ್ನು ನಡೆಸಬೇಕಾಗುವದು. ಜೆಫರ್ಸನ್, ಲಿಂಕನ್, ವುಡ್ರೋವಿಲ್ಸನ್ ಮತ್ತು ಫ್ರ್ಯಾಂಕ್ಲಿನ್ ರೂಜ್‌ವೆಲ್ಟ—ಇವರಲ್ಲಿ ಯಾರೊಬ್ಬರೂ [illegible] ಜಗತ್ತನ್ನೇ ವಿನಾಶಕ್ಕೀಡುಮಾಡಲು ಉತ್ಸುಕರಾಗಿದ್ದರೆಂದು ನಾನು ನಂಬಲಾರೆ. ಟ್ರೂಮನ್ನರು ತುರ್ಕಸ್ತಾನವನ್ನು ರಶಿಯವು ಭೂಮಧ್ಯ ಸಮುದ್ರದೆಡೆ ಚಾಚದಂತೆ ತಡೆಯಲು ಉಪಯೋಗಿಸಿಕೊಂಡರೆ, ಮಧ್ಯಪೂರ್ವದ ದೇಶಗಳನ್ನು ಅಲ್ಲಿಯ ಹಳೆಯ ಸರಕಾರಗಳ ದಾಸ್ಯದಲ್ಲೇ ಇಡಬೇಕೆಂದು ಹವಣಿಸಿದರೆ ಅಮೇರಿಕೆಯ ಒತ್ತಾಯದಿಂದ ಹೇರುವ ಆಶ್ರಯವನ್ನು [illegible] ಅಲ್ಲಿ ಯಾವುದಾದರೊಂದು ಸಮರ್ಥ ರಾಷ್ಟ್ರದ ಉದಯವಾಗದಿದ್ದರೆ ಗತ್ಯಂತರವಿಲ್ಲ.

(೨ನೇ ಪುಟ ನೋಡಿರಿ)

ಉತ್ತರ ಕನ್ನಡದ ಕೆಲವು ಸಮಸ್ಯೆಗಳು

ಉತ್ತರ ಕನ್ನಡದ ಏಳಿಗೆಯಾಗದೆ ಅಖಂಡ ಕರ್ನಾಟಕದ ಅಭಿವೃದ್ಧಿಯಾಗದು

ಲೇಖಕರು — ಶ್ರೀ. ಜಿ. ಆರ್. ಜೋಗಳೆ, ಕುಮಟಾ

ಎಲ್ಲ ಅನುಕೂಲತೆಗಳಿದ್ದು ಅವುಗಳನ್ನು ಸರಿಯಾಗಿ ಉಪಯೋಗಿಸಲಾಗದಿದ್ದಾಗಲೆ ಅದು ಅದೃಷ್ಟದ ದೈವಾಧೀನವೆನ್ನಬಹುದು. ಉತ್ತರ ಕನ್ನಡ ಜಿಲ್ಲೆಯ ಇಂದಿನ ಪರಿಸ್ಥಿತಿ ಈ ದುರದೃಷ್ಟದ ದೈವಾಧೀನಕ್ಕೊಂದು ಒಳ್ಳೆಯ ಉದಾಹರಣೆ. ಅಲ್ಲಿನ ಸ್ಥಿತಿ ವಿಚಿತ್ರವಾಗಿದೆ!

೧

ಉತ್ತರ ಕನ್ನಡದಲ್ಲಿ ಉತ್ಕೃಷ್ಟವಾದ ಸಾಗುವಾನಿ, ಗಂಧ, ಬಿದಿರು, ಖದಿರ, ಬೆತ್ತ ಇನ್ನೂ ಅನೇಕವಾದ ಒಳ್ಳೆಯ ಕಟ್ಟಿಗೆ ವಿಪುಲವಾಗಿ ಬೆಳೆಯುತ್ತದೆ. ಈ ಜಿಲ್ಲೆಯಲ್ಲಿಯೇ ಹಡಗು ಕಟ್ಟುವದಕ್ಕೆ ಅನುಕೂಲವಾದ ಸ್ಥಳಗಳಿವೆ. ಹೀಗಿದ್ದೂ ಆ ಕೈಗಾರಿಕೆ ಈ ಜಿಲ್ಲೆಯಲ್ಲಿ ನಡೆಯುವದಕ್ಕಾಸ್ಪದವಿಲ್ಲ. ಸುಖಸಾಧನಗಳನ್ನೂ ಆಟಿಗೆಗಳನ್ನು ದೊಡ್ಡ ಪ್ರಮಾಣದಲ್ಲಿ ತಯಾರಿಸಬಹುದಾದ ಎಲ್ಲ ನೈಸರ್ಗಿಕ ಅನುಕೂಲತೆಯಿದ್ದೂ ಅದರ ಸರಿಯಾದ ಉಪಯೋಗ ನಡೆಯದಾಗಿದೆ. ಇಲ್ಲಿನ ಗಂಧ, ಜೇನು ಮತ್ತು ಇಂಗ್ಲಿಷ ಪೇಟೆಗಳಲ್ಲಿ ಮಾರಾಟವಾಗುತ್ತಿತ್ತು. ಗಂಧದ ಎಣ್ಣೆಯನ್ನು ಅದರ ಕೂಳದ ದೆಸೆಗೆ ಆ ಪೇಟೆಗಳಲ್ಲಿ ಕೊಂಡು ಕೊಳ್ಳಲಾಗುತ್ತಿತ್ತು. ಖದಿರದಿಂದ ಕಾಚು ಮಾಡುವ ಕೆಲಸ ದೊಡ್ಡ ಪ್ರಮಾಣದಲ್ಲಿ ಕಾರವಾರದ ಹತ್ತಿರ ನಡೆಯುತ್ತಿತ್ತೆಂದು ಮಿ॥ ಥೋರೆಬ್ಬನು ಬಹುಕಾಲದ ಹಿಂದೆಯೇ ಉದ್ಧರಿಸಿದ್ದಾನೆ. ಬೆತ್ತದಲ್ಲಿ ಉತ್ಕೃಷ್ಟವಾದ ಹಾಲು ಬೆತ್ತದಿಂದ ಹಿಡಿದು ೮—೧೦ ಇಂಚು ಪರಿಘವುಳ್ಳ ಹಂದಿ ಬೆತ್ತದ ತನಕ ಎಲ್ಲ ಪ್ರಕಾರದ ಬೆತ್ತಗಳೂ ಇಲ್ಲಿ ದೊರಕುತ್ತವೆ. ಆದರೆ ಬೆತ್ತದ ಹೆಣಿಕೆಯ ಕೆಲಸಕ್ಕೆ ಪ್ರೋತ್ಸಾಹವಿಲ್ಲ. ಅರಗು ಬೆಳೆಸುವ ಉದ್ಯಮವನ್ನು ಯಶಸ್ವಿಯಾಗಿ ನಡೆಸಬಹುದೆಂದು ಸಿದ್ದಾಪುರದಲ್ಲಿ ಪ್ರಯೋಗ ನಡೆಸಿ ಯಶಸ್ಸನ್ನು ಪಡೆದಿದ್ದಾರೆ. ಕಾಡಿನಲ್ಲಿಯ ಬಿದಿರಿನಿಂದ ಕಾಗದದ ಕಾರಖಾನೆಗಳನ್ನು ನಡೆಸಬಹುದಾಗಿದ್ದರೂ ಯುದ್ಧಕಾಲದಲ್ಲಿ ಮುಂಬೈ ಕರ್ನಾಟಕಕ್ಕೆ ಕಾಗದದ ಕೊರತೆ ಎಷ್ಟು ತೀವ್ರವಾಗಿದೆ ಎಂಬುದರ ಅರಿವು ಆಗಿಸಿದರೂ ಆ ವಿಚಾರ ಗಮನಕ್ಕೆ ಬರುತ್ತಿಲ್ಲ. ಕಡ್ಡಿ ಪೆಟ್ಟಿಗೆ ಕಾರಖಾನೆಯನ್ನು ಯಲ್ಲಾಪುರ-ಶಿರಸಿ ಅಡವಿಯಲ್ಲಿ ತೆರೆಯಲು ಅನುವು ಕೊಡುವದ ಕ್ಕೊಸ್ಕರ ಸರಕಾರ ಕಳೆದ ವರ್ಷ ಟೆಂಡರುಗಳನ್ನು ಕರೆದಿತ್ತು. ಅದನ್ನು ಕರ್ನಾಟಕದವರು ಲಕ್ಷಕ್ಕೆ ತಂದಂತೆ ತೋರುವದಿಲ್ಲ. ಪರಪ್ರಾಂತೀಯ ಉತ್ಸಾಹಿಗಳು ಅದನ್ನು ಹೊಡೆದುಕೊಂಡು ಹೋದ ಮೇಲೆ ಪ್ರಾಂತೀಯತೆಯ ಕೂಗನ್ನೆಬ್ಬಿಸುವದು ಸಮಂಜಸವಾಗದು.

ಉತ್ತರ ಕನ್ನಡದ ಒಟ್ಟು ೧೧೧೮ ಹಳ್ಳಿಗಳಲ್ಲಿ ೧೬೫ ಹಳ್ಳಿಗಳು ನಿರ್ಜನವಾಗಿವೆ. ೫೬೦ ಹಳ್ಳಿಗಳೊಳಗೆ ೧೦೦ ಕ್ಕಿಂತ ಕಡಿಮೆ ಜನಸಂಖ್ಯೆಯುಂಟು. ೧೩೯ ಹಳ್ಳಿಗಳಲ್ಲಿ ೧೦೦ ರಿಂದ ೩೦೦ ಜನರಿದ್ದಾರೆ. ೧೧೮ ಹಳ್ಳಿಗಳಲ್ಲಿ ೩೦೦ ರಿಂದ ೫೦೦ ಜನಸಂಖ್ಯೆಯಿದೆ. ೧೧೬ ಹಳ್ಳಿಗಳಲ್ಲಿ ೫೦೧ ರಿಂದ ೧೦೦೦ ದ ವರೆಗೆ ಜನವಸತಿಯಿದೆ. ದಿನದಿನಕ್ಕೂ ಕಾಡಿನ ಪಾಳು ಹೆಚ್ಚುತ್ತಿದೆ. ಕಲೆ ತಲಾಂತರಗಳಿಂದ ಕಷ್ಟಪಟ್ಟು ಕಾಡನ್ನು ಕಡಿದು ಭೂಮಿಯನ್ನು ಹದಮಾಡಿ ಒಳ್ಳೆಯ ಬೆಳೆಬರುವ ಜನವಸತಿಯೋಗ್ಯವಾದ ಸ್ಥಳಗಳನ್ನು ಕಲ್ಪಿಸಿಕೊಂಡಿದ್ದ ಹಳ್ಳಿಗಳಿಂದ ಜನರನ್ನು ಹೊರದೂಡಿ ಕಾಡು ಹೇಗೆ ಬೆಳೆಯುತ್ತದೆಂಬುದನ್ನು ಕಂಡರೆ ಮೈ ಜುಮ್ಮೆನ್ನುವಂತಿದೆ. ಕೆಳಗೆ ಯಲ್ಲಾಪುರ ತಾಲೂಕಿನ ಜನಸಂಖ್ಯೆಯನ್ನು ಕೊಟ್ಟಿದೆ:—

ವರ್ಷ	ಜನಸಂಖ್ಯೆ	ಸನ್ ೧೮೯೧ ನೇ ಇಸ್ವಿಯಿಂದ ಇಳಿದದ್ದು
೧೮೯೧	೨೩೩೯೧೬	——
೧೯೦೧	೨೨೭೮೬	೨.೩%
೧೯೧೧	೨೦೩೪೪೪	೧೨.೭%
೧೯೨೧	೧೬೪೦೪	೨೫.೩%
೧೯೩೧	೧೫೬೪೪೪	೩೨.೮%
೧೯೪೧	೧೫೧೧೫೩	೩೫.೦೧%

೫೦ ವರ್ಷಗಳಲ್ಲಿ ಒಂದು ತಾಲೂಕಿನಲ್ಲಿಯೆ ಶೇಕಡ ೩೫ ರಷ್ಟು ಜನ ಕಡಿಮೆಯಾಗುವದಕ್ಕೆ ಯಾರು ಹೊಣೆ? ಉಳಿದೆಡೆ ಜನಸಂಖ್ಯೆ ಹೆಚ್ಚುತ್ತಿದ್ದಾಗ ನಮ್ಮ ಜಿಲ್ಲೆಯಲ್ಲಿ ಹೀಗೆ ಕುಗ್ಗುತ್ತಿದ್ದರೆ ಹೇಗೆ? ಅಡವಿಯ ಸಂಪತ್ತು ಹೋಗುತ್ತಿರಬೇಕೆ? "ಇದರಿಂದ ಸರಕಾರದ "ರಾಷ್ಟ್ರೀಯ ಸಂಪತ್ತು." ಬೊಕ್ಕಸಕ್ಕೆ ಸುಮಾರು ಅರ್ಧ ಕೋಟಿಯಷ್ಟು ಹಣ ಪ್ರತಿವರ್ಷ ಸೇರುತ್ತಿದೆ. ಈ ಆದಾಯವನ್ನು ಹೆಚ್ಚಿಸುವದಕ್ಕಾಗಿ ಉತ್ತರ ಕನ್ನಡದ ಜನ ಪ್ರಾಣತೆರಬೇಕು. ಇಲ್ಲಿಯ ಸಾಗುವಳಿ ಕ್ಷೇತ್ರ ಮತ್ತು ಅಡವಿಗಳಲ್ಲಿ ಅಡಕವಾಗಿರುವ ಕ್ಷೇತ್ರಗಳ ಸಂಬಂಧವನ್ನು ತೋರಿಸುವದಕ್ಕಾಗಿ ಇಲ್ಲಿಯ ಮೂರು ತಾಲೂಕುಗಳ ಅಂಕೆ ಸಂಖ್ಯೆಗಳನ್ನು ಕೊಡುತ್ತೇನೆ.

ತಾಲೂಕು	ಒಟ್ಟು ಕ್ಷೇತ್ರ	ಅರಣ್ಯ	ಸಾಗುವಳಿ ಕ್ಷೇತ್ರ
ಯಲ್ಲಾಪುರ	೫೦೧.೯ ಚದರ ಮೈಲು	೪೬೦.೪ ಚದರ ಮೈಲು ಅಥವಾ ೯೧.೭%	೪೪.೭ ಚ. ಮೈ. ಅಥವಾ ೬.೯%
ಸಿದ್ದಾಪುರ	೩೩೧.೮ ಚದರ ಮೈಲು	೨೬೪.೮ ಚದರ ಮೈಲು ಅಥವಾ ೭೯.೭%	೬೭.೯ ಚ. ಮೈ. ಅಥವಾ ೨೦%
ಮುಂಡಗೋಡ	೨೫೮.೦ ಚದರ ಮೈಲು	೧೯೯.೬ ಚದರ ಮೈಲು ಅಥವಾ ೭೭.೩%	೫೮.೭ ಚ. ಮೈ. ಅಥವಾ ೨೨.೭%

ಇವುಗಳಿಂದ ಏನನ್ನು ನಿರ್ಣಯಿಸಬಹುದೋ ಎಂಬುದನ್ನು ಓದುಗರಿಗೇ ಬಿಟ್ಟಿದೆ. ದಿವ್ಯವಾದ ವನೌಷಧಿಗಳಿಗೆ ಉತ್ತರ ಕನ್ನಡ ತವರೂರು. ಅವುಗಳನ್ನು ಕುರಿತು ಸಂಶೋಧನೆಗಳು ನಡೆದಂತಾದರೆ ಎಂತಹ ಕಲ್ಯಾಣವಾಗಬಹುದಿತ್ತೊ! ಆದರೆ ಅವುಗಳ ನೆರೆಯಲ್ಲಿಯೇ ವಾಸವಾಗಿದ್ದೂ ಉಪಯೋಗವನ್ನರಿಯದೆ ಸಾವಿಗೊಳಗಾಗುವದು ದುರ್ದೈವದ ದೈವಾಧೀನವಲ್ಲವೆ?

೨

ಉತ್ತರ ಕನ್ನಡದಲ್ಲಿ ಬಹುಜನರ ಮುಖ್ಯ ಆಹಾರ ಅಕ್ಕಿ, ಮೀನು, ರಾಗಿ. ಅಕ್ಕಿ ಬೆಳೆಯುವದಕ್ಕೆ ತಕ್ಕ ಹವಾಮಾನ, ಮಳೆ, ಮಣ್ಣು ಎಲ್ಲಾ ಇವೆ. ೧೬೬೦ ನೇ ಇಸವಿಯಲ್ಲಿ "ಬಾರ್ಬೋಸ್" ಎಂಬವನು ಉತ್ತರ ಕನ್ನಡದಲ್ಲಿ ಉಳಿದ ಆಹಾರ ಜಿನಸುಗಳ ಜೊತೆಗೆ ಅಕ್ಕಿಯೂ ಬಹುಚೆನ್ನಾಗಿ ಬೆಳೆಯುತ್ತಿತ್ತೆಂದು ಹೇಳಿದ್ದಾನೆ. ಇಲ್ಲಿನವರಿಗೆ ಸಾಕಾಗಿ ಹೊರಕ್ಕೆ ರಫ್ತುಮಾಡುವಷ್ಟು ಇದ್ದುದು ಹೋಗಿ ವರ್ಷದಲ್ಲಿ ಆರುತಿಂಗಳು ಅಕ್ಕಿಗಾಗಿ ಭಿಕ್ಷೆ ಬೇಡುವ ಪ್ರಸಂಗ ಬಂದಿದೆ. ಲಕ್ಷಗಟ್ಟಲೆ ಎಕರೆ ಭೂಮಿ ಬಂಜೆ ಬಿದ್ದಿರುವಾಗ, ಅದನ್ನು ಊರ್ಜಿತಕ್ಕೆ ತರುವ ಯಾವ ಪ್ರಯತ್ನವೂ ನಡೆಯುತ್ತಿಲ್ಲ. ಈ ಪಾಳು ಭೂಮಿಗಳ ಕ್ಷೇತ್ರ ಹೆಚ್ಚುತ್ತಿದೆ. ಜನ ಬಲ ಕುಗ್ಗುತಿದೆ. ಇವುಗಳಿಗೆ ಕಾರಣವೇನು? ಜನಕ್ಕೆ ಪೇಟೆಗಳ ಸವಿಹತ್ತಿ ಹಳ್ಳಿಗಳನ್ನು ಬಿಟ್ಟು ಪಟ್ಟಣ ಸೇರಿದರೆಂಬುದು ಸರಿಯಾದ ಕಾರಣವೆಂದು ಅಷ್ಟಾಯಿಂದ ಇಲ್ಲಿನ ಪರಿಸ್ಥಿತಿಯನ್ನನುಭವಿಸಿದವರಿಗೆ ಕಾಣುವದು ರೈತರು ತಾವು ಮಾಡುತ್ತಿರುವ ಉದ್ಯೋಗಕ್ಕೆ ಪುರಸ್ಕಾರವಿಲ್ಲವೆಂದು ನಿರುತ್ಸಾಹ ಹೊಂದಿದರೂ ಬಿಡಲಾರದೆ ಅದಕ್ಕೇ ಅಂಟಿಕೊಂಡು ನಾಶಹೊಂದಿದರೆಂದು ನನ್ನ ಅಭಿಪ್ರಾಯ. ಹೊಳೆಗಳ ನೆರೆಯಲ್ಲಿಯ "ಗಜನಿ" ಭೂಮಿಗಳಿಂದ ಬರುವ ಬೆಳೆ ಹೆಚ್ಚು, ಬೆಳೆಯುವದೂ ಸುಲಭವೆಂದು ಕಂಡು ಹಿಡಿದು ಅಂತಹವುಗಳನ್ನು ಉತ್ತರ ಕನ್ನಡದ ಸಾಹಸಿಗಳು ನಿರ್ಮಿಸಿದ್ದರು. ಅಂತಹ ಸಾವಿರಾರು ಎಕರೆ ಭೂಮಿ ಗಟ್ಟದ ಕೆಳಗಿನ ತಾಲೂಕುಗಳಲ್ಲಿವೆ. ಕುಮಟಾ ತಾಲೂಕಿನಲ್ಲಿಯೇ ೬೦೦೦ ಎಕರೆ "ಗಜನಿ" ಭೂಮಿಯಿದೆ. ಅದೆಲ್ಲ ಬೆಳೆ ಬರುವದಾದರೆ ಸಾಧಾರಣ ಭೂಮಿಯಲ್ಲಿಗಿಂತ ಮೂರು ಪಟ್ಟು ಬೆಳೆ, ಕಡಿಮೆ ಶ್ರಮದಲ್ಲಿ ಸಿಕ್ಕುವದು. ಆ ಆಸೆಯು ಮೇಲಿಂದಲೇ "ಗಜನಿ"ಗಳ ಒಡೆಯರನೇಕರು ಒಂದು ಸಿದ್ಧ ಭತ್ತವನ್ನೂ ಕಾಣದೆ ಬಿದ್ದಿದ್ದರೂ ಎಂದಾದರೊಮ್ಮೆ ಊರ್ಜಿತಕ್ಕೆ ಬರಬಹುದೆಂಬ ಆಸೆಯಿಂದ ತೀರ್ವೆಯನ್ನು ಅನೇಕ ವರ್ಷಗಳಿಂದ ದಂಡವಾಗಿ ಕೊಡುತ್ತಲಿದ್ದಾರೆ.

ಇಲ್ಲಿನ ರೈತರ, ಕಷ್ಟಜೀವಿಗಳ ಆಹಾರ ರಾಗಿ. ಅದನ್ನು ಕುಂಬರಿಯಂತ ಬೆಳೆಯುವರು. ಗುಡ್ಡಗಳ ಓರೆಗುಂಟ ಕಾಡು ಸವರಿ, ಸುಟ್ಟು ಉರ್ವ ಬೆಳೆಯುವದಕ್ಕೆ ಸರಕಾರದ ಅಡವಿಗಳ ಸಂರಕ್ಷಣೆಯ ಯೋಜನೆ ಅಡ್ಡಬರುತ್ತದೆ. ಅದನ್ನು ಬೆಳೆಯುವದಕ್ಕೆ ಬೇರೆ ರೀತಿಯ ವ್ಯವಸ್ಥೆಯಿಲ್ಲ. ಹೀಗಾಗಿ ಮನುಷ್ಯ ಪಶುವಿಗಿಂತಲೂ ಕೀಳಾಗಿ ಕಾಳೆಮರದ ಹೊಟ್ಟನ್ನು ತಿಂದು ಹೊಟ್ಟೆ ತುಂಬಿಸಿಕೊಳ್ಳುವ ಪ್ರಸಂಗ.

ನಮ್ಮ ಜಿಲ್ಲೆಯ ರೈತರ ಇನ್ನೊಂದು ಮುಖ್ಯ ವ್ಯವಸಾಯ ಅಡಿಕೆ ಮೆಣಸು ಯಾಲಕ್ಕಿಗಳ ತೋಟ. ಇಂದು ಈ ಉದ್ಯೋಗ ದಿನದಿನಕ್ಕೂ ಕುಗ್ಗಿದೆ.

"ಹುಬ್ಬಳ್ಳಿ ಗದಗ ಬೆಳಗಾವಿಗಳಂತಹ ಪ್ರದೇಶಗಳಲ್ಲಿ ಔದ್ಯೋಗಿಕ ಬೆಳವಣಿಗೆ ಅವಕಾಶವುಂಟು ಸಿರಸಿ ಸಿದ್ದಾಪುರಗಳಲ್ಲಿ ಅದಕ್ಕೆ ಅನುಕೂಲತೆಯಿಲ್ಲ. ಗೋಕರ್ಣ, ಕುಮಟಾ, ಹೊನ್ನಾವರಗಳಲ್ಲಿ ಅದಕ್ಕನುಕೂಲವಿದ್ದರೂ ಖರ್ಚು ಬಹಳ ಬರಬಹುದು" ಎಂದು ಸರಕಾರಕ್ಕೆ ಪರಿಸ್ಥಿತಿ ಪರಿಶೀಲನೆಯಿಂದ ತಿಳಿದು ಬಂತಂತೆ. ಸರಕಾರದ ದುರ್ಲಕ್ಷ್ಯದಿಂದಲೆ ಹಿಂದುಳಿದ ಜಿಲ್ಲೆ ಉತ್ತರ ಕನ್ನಡ. ಈಗ ಅದು ಹಿಂದುಳಿದಿದೆಯೆಂದು ಮತ್ತಿಷ್ಟು ದುರ್ಲಕ್ಷಿಸುವದಕ್ಕೆ ಕಾರಣವನ್ನು ಸರಕಾರವೇ ಮುಂದೊಡ್ಡುತ್ತಿದೆ.

ತಾ ೧೦—೨—೬೭ ರ ಕರ್ಮವೀರದಲ್ಲಿ ಶಿರಸಿಯ ಶ್ರೀ ಕೆ ಎಸ್. ರಾವ್ ಅವರು ಒಂದು ಲೇಖ ಬರೆದು ಜೋಗ ವಿದ್ಯುತ್ ಕೇಂದ್ರದಿಂದ ಉತ್ತರ ಕನ್ನಡದಲ್ಲಿ ಹೇಗೆ ವಿದ್ಯುಚ್ಛಕ್ತಿಯನ್ನು ಪೂರೈಸಬಹುದೆಂಬ ವಿಚಾರವನ್ನು ಚರ್ಚಿಸಿದ್ದಾರೆ. ಹುಟ್ಟಿಕೊಳ್ಳಬಹುದಾದ ಬೇರೆ ಬೇರೆ ಉದ್ದಿಮೆಗಳಲ್ಲಿ ಕೆಲವನ್ನು ಉಲ್ಲೇಖಿಸಿದ್ದಾರೆ. ಅದಲ್ಲದೆ ಮೆಂಗನೀಜ, ದೇವದಾರು, ಕಾಗದ, ಬೆಂಕಿಪೆಟ್ಟಿಗೆ, ಕೃತ್ರಿಮ ರೇಶಿಮೆ ಗಂಧದಕಟ್ಟಿಗೆ ಮುಂತಾದವುಗಳ ಕಾರ್ಖಾನೆಗಳನ್ನೂ, ಉತ್ತಮ ಮಣ್ಣಿನ ಪಾತ್ರೆ, ಕಾಚು, ಸಿಮೆಂಟ ಮುಂತಾದ ಇನ್ನೂ ಹಲವಾರು ಉದ್ಯೋಗಗಳನ್ನು ಹೊರಡಿಸಬರುವಂತಿದೆಯೆಂದೂ ವಿದ್ಯುಚ್ಛಕ್ತಿಯ ಅನುಕೂಲ ದೊರೆತರೆ ಈ ಎಲ್ಲ ಉದ್ದಿಮೆಗಳು ಭರದಿಂದ ಸಾಗುವಂತಿವೆಯೆಂದೂ ಅನೇಕ ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ.

ಕಾಳೀ ನದಿಗೆ ಒಡ್ಡುಹಾಕಿ ವಿದ್ಯುಚ್ಛಕ್ತಿಯನ್ನು ಹುಟ್ಟಿಸಬಹುದೇ? ಹಾಗೆ ಮಾಡಿ ಉತ್ತರ ಕನ್ನಡವನ್ನು ಬೆಳಗಬಹುದೇ? ಎಂದು ಸರಕಾರ ಯೋಚಿಸುತ್ತಿದೆ. ಆದರೆ ಈಗ ಮುಗಿದಿರುವ ಜೋಗಯೋಜನೆಯ ಲಾಭವನ್ನು (ಅದನ್ನು ಪಡೆಯಲು ಎಲ್ಲ ಹಕ್ಕುಗಳಿರುವ) ಉತ್ತರಕನ್ನಡಕ್ಕೆ ಪಡೆಯಗೊಡದೆ ಎಲ್ಲಿಯೋ ತಲೆಯಲ್ಲಿ ಸುಳಿಯುತ್ತಿರುವ ಯಾವ ಕಾಲದಲ್ಲಿಯೋ ಮುಗಿಯಬಹುದಾದ ಯೋಜನೆಯಿಂದ ನಿಮಗೆ ಹೆಚ್ಚಿಗೆ ಲಾಭವುಂಟೆಂದೂ ಅದರಿಂದ ನಿಮ್ಮ ಭಾಗ್ಯ ತೆರೆಯುವದು ನಿಶ್ಚಿತವೆಂದೂ ಸವಿಮಾತಿನಿಂದ ಆಸೆತೋರಿ ಕೈಗೆ ನಿಲುಕಬಹುದಾದುದನ್ನು ಹೆರವರಿಗೆ ಹಂಚುವ ಕೆಲಸವನ್ನು ಸರಕಾರವೇ ಮಾಡುತ್ತಿರುವದು.

ಮೊನ್ನೆ ಬಂದರುಗಳ ಅಭಿವೃದ್ಧಿ ಸಮಿತಿಯವರು ಕಾರವಾರ ಭಟ್ಕಳ ಬಂದರುಗಳನ್ನು ನೋಡಿ ಹೋದರು. ಕಾರವಾರವು ನೈಸರ್ಗಿಕ ಬಂದರವೆಂದು ಒಂದು ಅಭಿಪ್ರಾಯವಾದರೆ ಭಟ್ಕಳ ಬಂದರದ ಅಭಿವೃದ್ಧಿಯಿಂದ ಹೆಚ್ಚಿನ ಸೌಖ್ಯವುಂಟೆಂದು ಇನ್ನೊಂದು ಮತ. ಕಾರವಾರವನ್ನು ಬಹು ಸುಲಭವಾಗಿ ಮುಖ್ಯ ಬಂದರವಾಗಿ ಬೆಳೆಸಿಕೊಳ್ಳಬೇಕೆಂದು ಯೋಜನೆ ತಯಾರಿಸಿ ಕಾರ್ಯ ಕೈಕೊಳ್ಳುವ ಸಿದ್ಧತೆಯಲ್ಲಿರುವಾಗ ಏನೇನೋ ಕಾರಣಗಳನ್ನು ಮುಂದೊಡ್ಡಿ ಮುಂಬೈ ಸರಕಾರವು ಅದನ್ನು ಮದ್ರಾಸ ಪ್ರಾಂತದಿಂದ ತನ್ನ ಅಧಿಕಾರಕ್ಕೆ ಸೇರಿಸಿಕೊಂಡಿತು. ೧೮೬೨ ನೇ ಇಸವಿಯಲ್ಲಿ ಹಾಗೆ ಮುಂಬೈ ಪ್ರಾಂತಕ್ಕೆ ಅದನ್ನು ಸೇರಿಸಿಕೊಂಡ ಮೇಲೂ ಮಿ॥ ಲೆಟ್‌ಹ್ಯಾಮರು ಕಾರವಾರ ಬಂದರವನ್ನು ಅಭಿವೃದ್ಧಿಗೊಳಿಸಲು ತಾವೇ ಮುಂದೆ ಬಂದರು. ಆದರೆ ಮುಂಬೈ ಸರಕಾರವು ಆ ಕೆಲಸವನ್ನು ತಾನೇ ಮಾಡುವದಾಗಿ ಹೇಳಿ ಅವರ ಕೋರಿಕೆಯನ್ನು ಹಿಂತಿರುಗಿಸಿತು. ಹೀಗೆ ಎಲ್ಲ ಅನುಕೂಲತೆಗಳಿದ್ದೂ, ಜನರ ಉದ್ಧಾರ ಮತ್ತು ಕರ್ನಾಟಕದ ವ್ಯಾಪಾರದ ದೃಷ್ಟಿಯಿಂದ ಅತ್ಯಂತ ಅವಶ್ಯವೂ ಆಗಿದ್ದ ಕಾರವಾರ ಬಂದರ ಬೆಳೆಸುವ ಯೋಜನೆಯನ್ನು ಹಿಂದಕ್ಕೆ ತಳ್ಳಿ ೧೮೬೮ ನೆಯ ಇಸವಿಯಲ್ಲಿ ಪೋರ್ತುಗೀಜ ಸರಕಾರದೊಂದಿಗೆ ಒಪ್ಪಂದ ಮಾಡಿಕೊಂಡು ಮಾರ್ಮಗೋವಾ ಬಂದರವನ್ನು ಬೆಳೆಯುವದಕ್ಕೆ ದಾರಿ ಮಾಡಿಕೊಟ್ಟಿತು.

ಈಗಲಾದರೂ ಈ ಎರಡು ಬಂದರುಗಳಲ್ಲಿ ಯಾವುದನ್ನು ಬೆಳೆಸಬೇಕು ಎನ್ನುವದನ್ನು ಯೋಚಿಸುವದರಲ್ಲಿಯೆ ಒಂದು ತಲೆಮಾರನ್ನು ಕಳೆದು ಬಿಡುವರೋ ಎಂಬ ಭಯ ಉತ್ತರ ಕನ್ನಡಿಗರಿಗೆಲ್ಲ!

ಉತ್ತರ ಕನ್ನಡದಲ್ಲಿ ಹೊಸ ಸುಧಾರಣೆಗಳು ಪ್ರವೇಶಿಸುವದಕ್ಕೆ ದಾರಿಯಿಲ್ಲ. ಉತ್ತರ ಕನ್ನಡದ ದಾರಿಗಳದೇ ಒಂದು ಕತೆ. ಅವುಗಳಿಂದಾಗಿ ಜನರ ಕಷ್ಟಗಳೇನು ಎಂದು ಅರಿಯುವದಕ್ಕೆ ನಿಯಮಿತರಾದ ಅಧಿಕಾರಿಗಳು ಇಲ್ಲಿಗೆ ಬರುವದಕ್ಕೆ ಅಂಜುತ್ತಾರೆ. ವಾಹನ ಸೌಕರ್ಯ ಚನ್ನಾಗಿಲ್ಲ, ದಾರಿಯ ವ್ಯವಸ್ಥೆ ಪಟ್ಟಿಗಿಲ್ಲ. ಅದರಿಂದ ಪ್ರಯಾಣ ಬಹಳ ಕಷ್ಟವೆಂದು ಅವರ ದೂರು. ಸುಲಭವಾಗಿ ಸುಖಕರವಾಗಿ ಎಲ್ಲಿಯ ತನಕ ಪ್ರಯಾಣ ಮಾಡಬಹುದೋ ಅಲ್ಲಿಯ ತನಕ ಬಂದು ಎಲ್ಲವನ್ನೂ ಕಂಡು ಹೋದಂತೆ "ದೈರಿ" ತುಂಬಿ ವರದಿ ಒಪ್ಪಿಸುತ್ತಾರೆ. ಮಂತ್ರಿಗಳಂತಹ ಹೊಣೆಗಾರರು ಕೂಡ 'ಕರ್ನಾಟಕ' ಪ್ರವಾಸವನ್ನು ರೈಲು ಮಾರ್ಗವಿದ್ದಲ್ಲಿಯೆ ಮಾಡಿ ಮುಗಿಸಿ ಹೋಗುವದುಂಟು. ಯಾವ ಪ್ರದೇಶವನ್ನು ಕಣ್ಣಿನಿಂದ ನೋಡಲಿಲ್ಲವೋ ಅದನ್ನು ಕುರಿತು ಉಪೇಕ್ಷೆ ತಳೆವುದು ಸ್ವಾಭಾವಿಕ. ಅಲ್ಲಿನ ತೊಂದರೆಗಳನ್ನು ತುಸುವಾದರೂ ಕಂಡು ಅನುಭವಿಸಿದರಲ್ಲವೆ ಅದನ್ನು ನಿವಾರಿಸುವದು? ಆಹಾರ ಬಟ್ಟೆಗಳ ಹಂಚಿಕೆ, ಉದ್ಯೋಗಗಳ ಬೆಳವಣಿಗೆ, ಜೀವನಾವಶ್ಯಕ ವಸ್ತುಗಳ ಆಯಾತ ನಿರ್ಯಾತ ಮುಂತಾದ ಜಿಲ್ಲೆಯ ಮುಖ್ಯ ವಿಷಯಗಳಲ್ಲಿ ಈಗಿರುವ ರಹದಾರಿಗಳ ವ್ಯವಸ್ಥೆ ಕಾಲ್ತೊಡಕಾಗಿರುವದು.

ಇಲ್ಲಿನ ಔದ್ಯೋಗಿಕ ಉನ್ನತಿಗೆ ವಾಹನ ಸೌಕರ್ಯ ಚೆನ್ನಾಗಬೇಕಾದುದು ಅತ್ಯಗತ್ಯವೆಂದು ಸರಕಾರವು ಈ ಹಿಂದೇ ನೇಮಿಸಿದ ಔದ್ಯೋಗಿಕ ಮಂಡಳದವರು ಅಭಿಪ್ರಾಯಪಟ್ಟಿದ್ದುಂಟು. ಅವೆಲ್ಲ ಸರಕಾರಿ ಕಚೇರಿಗಳ ದಪ್ತರುಗಳಲ್ಲಿ ಧೂಳುಣ್ಣುತ್ತ ಬಿದ್ದುಕೊಂಡಿವೆ. ಈಗ ಮಳೆಗಾಲ ನಾಲ್ಕುತಿಂಗಳಲ್ಲಿ ಸುತ್ತ ಹರಿಯುತ್ತಿರುವ ಹಳ್ಳಗಳಿಂದಾಗಿ ತಮ್ಮ ಹಾಗೂ ಸುತ್ತಲಿನ ಮಾನವ ಜಗತ್ತಿನೊಡನೆ ಇರುವ ಸಂಪರ್ಕ ತಪ್ಪಿಹೋಗುವದೆಂಬ ಭಯದಿಂದ ಆ ನಾಲ್ಕು ತಿಂಗಳುಗಳ ವರೆಗೆ ಜೀವಧಾರಣ ಮಾಡಲು ದವಸಧಾನ್ಯಗಳನ್ನು ಶೇಖರಿಸಿಕೊಳ್ಳುವದಕ್ಕೆ ಕಷ್ಟಪಡುವ ಸಾವಿರಾರು ಹಳ್ಳಿಗರು ಉತ್ತರ ಕನ್ನಡದ ಪೇಟೆಗಳಲ್ಲಿ ಕಾಣುವರು.

ಮೊನ್ನೆ ಆಚಾರ್ಯ ಕಾಕಾ ಕಾಲೇಲಕರರು ನಮ್ಮ ಜಿಲ್ಲೆಗೆ ದಯಮಾಡಿಸಿದ್ದರು. ಅವರು ಹಿರಿಯ ರಾಜಕೀಯ ಮುಖಂಡರಲ್ಲೊಬ್ಬರು; ಮೇಲಾದ ಸಾಹಿತಿಗಳು; ನಿಸರ್ಗ ಪ್ರೇಮಿಗಳು. ಅವರು ನಮ್ಮ ಜಿಲ್ಲೆಯ ಚೆಲುವನ್ನು ಕಂಡು ಬಹಳ ಸಂತೋಷಪಟ್ಟು ಇಲ್ಲಿನ ಜನರಿಗೆ ಬುದ್ಧಿವಾದ ಹೇಳುತ್ತ "ನಿಮ್ಮ ಜಿಲ್ಲೆಗೆ ರೇಲು ಬಂದಿಲ್ಲವೆಂದು ಬೇಸರ ಪಡಬೇಡಿರಿ, ರಹದಾರಿ ಚೆನ್ನಾಗಿಲ್ಲವೆಂದು ವ್ಯಥೆಬೇಡ, ವಿದ್ಯುಚ್ಛಕ್ತಿ ಬಂದಿಲ್ಲವೆಂದು ಚಿಂತೆಮಾಡುವದು ಬೇಡ, ಅವು ಬರುವಾಗ 'ರೋಗಗಳನ್ನು ತರುತ್ತವೆ' ಅವುಗಳೆಲ್ಲ ಒಂದು ಕೃತ್ರಿಮನಾಗರಿಕತೆಯನ್ನು ತಂದು ಇಲ್ಲಿನ ನಿಸರ್ಗದ ಸ್ವಾಭಾವಿಕ ಸೌಂದರ್ಯ ಸಂಪತ್ತುಗಳನ್ನು ಕಡಿಮೆ ಮಾಡಿಬಿಟ್ಟಾವು" ಎಂದರು ನನಗಾಗ ಕಣ್ಮನಗಳನ್ನು ಸಂತೋಷಪಡಿಸುವ ಸೊಬಗನ್ನು ಕಾಯುವದಕ್ಕಾಗಿ ವರ್ಷ ವರ್ಷವೂ ನಾವು ಎಷ್ಟು ಕಷ್ಟನಷ್ಟಗಳನ್ನು ಅನುಭವಿಸುತ್ತಿದ್ದೇವೆ, ಎಷ್ಟು ಮಾನವರನ್ನೂ ಪ್ರಾಣಿಗಳನ್ನೂ ಆಹುತಿ ತೆಗೆದುಕೊಂಡು ಇಂಥ ನಿಸರ್ಗ ಪ್ರೇಮಿಯ ಹಸಿವನ್ನು ತಣಿಸಬೇಕಾಗಿದೆ-ಎಂಬುದನ್ನು ಅರಿಯದ ಅವರ ಆ ಮಾತಿಗಾಗಿ ಕನಿಕರವೆನಿಸಿತು.

ಗವರ್ನರರ ಏಕತಂತ್ರ ಸರಕಾರದ ಆಡಳಿತದಲ್ಲಿ ಉತ್ತರ ಕನ್ನಡದ ರಸ್ತೆಗಳನ್ನು ಸುಧಾರಿಸುವದಕ್ಕೆ ೧೦—೧೫ ಲಕ್ಷ ರೂಪಾಯಿಗಳನ್ನು ತೆಗೆದಿಡಲಾಗಿತ್ತು. ಆದರೆ ಈಗಿನ "ಹೊಣೆಗಾರ", "ಜನಪ್ರಿಯ" ಸರಕಾರ ಅಧಿಕಾರ ಸೂತ್ರಗಳನ್ನು ವಹಿಸಿದ ಕೂಡಲೆ ಆ ಹಣವನ್ನು ಬೇರೆ ಬೇರೆ ರಸ್ತೆಗಳಿಗಾಗಿ ವಿನಿಯೋಗಿಸಬೇಕೆಂದು ತೀರ್ಮಾನಿಸಿತು; ಉತ್ತರ ಕನ್ನಡದಲ್ಲಿ ರಸ್ತೆಗಳ ಅವಶ್ಯಕತೆ ಅಷ್ಟಿಲ್ಲವೆಂದು ನಿರ್ಧರಿಸಿದರೋ, ಕಾಡುಬೆಟ್ಟಗಳಲ್ಲಿ ಕಲ್ಲು ಮುಳ್ಳುಗಳನ್ನು ತುಳಿದು ತಿರುಗಾಡುವ ಈ ಜನಕ್ಕೆ ಸರಿಯಾದ ರಸ್ತೆಗಳು ಇಲ್ಲದೆ ಹೋದರೂ ನಡೆದೀತು ಎಂದು ಎಣಿಸಿದರೋ ತಿಳಿಯದು. ಇಂಥ ಪ್ರಸಂಗವೊಂದನ್ನು ಮಾನ್ಯಮಂತ್ರಿಗಳೊಬ್ಬರಲ್ಲಿ ಅರಿಕೆ ಮಾಡಿಕೊಂಡಾಗ 'ಹೆರವರಿಗೆ ಸಿಕ್ಕಿದ್ದಕ್ಕಾಗಿ ಅಸೂಯೆಪಡಬಾರದು ಎಂದು ಬುದ್ಧಿ ಹೇಳಿದರು.

೧೮೬೯ ನೆಯ ಇಸವಿಯಲ್ಲಿ ಮುಂಬೈ ಕರ್ನಾಟಕದ ಉಳಿದ ಭಾಗಗಳೊಡನೆ ರೈಲು ದಾರಿಯಿಂದ ಉತ್ತರ ಕನ್ನಡವನ್ನು ಕೂಡಿಸುವ ಯೋಜನೆಯನ್ನು ಸರಕಾರವು ವಿಚಾರಮಾಡಿತು. ಈ ಕುರಿತು ಚರ್ಚೆ ನಡೆದು ಕಾಗದ ಪತ್ರಗಳ ಓಡಾಟ ರಭಸದಿಂದ ಸಾಗಿತು. ಕೊನೆಗೆ ೧೮೭೯ ನೆ ಇಸವಿಯಲ್ಲಿ ಹುಬ್ಬಳ್ಳಿಯಿಂದ ಮಾರ್ಮಗೋವಾ ರೇಲು ಯೋಜನೆ ಕಾರ್ಯರೂಪಕ್ಕೆ ಬಂದು ಈ ವಿಚಾರದ ಕಾಗದ ಪತ್ರಗಳನ್ನು ಕಟ್ಟಿ ಜಂತಿ

—೧೬ ನೇ ಪುಟ ನೋಡಿರಿ

ಭಾರತ ಗಿರಣಿಯ ಕೂಲಿಕಾರ ಪ್ರಶ್ನೆ

ಹುಬ್ಬಳ್ಳಿಯ ಭಾರತ ಗಿರಣಿ ಕೂಲಿಕಾರರ ಪ್ರಶ್ನೆ ಬಹಳ ದಿನಗಳಿಂದ ನೆನಗುದಿಗೆ ಬಿದ್ದಂತಾಗಿದೆ. ಭಾರತ ಗಿರಣಿಯ ರಾಷ್ಟ್ರೀಯ ಗಿರಣಿ ಮಜದೂರ ಸಂಘದವರೂ ಗಿರಣಿ ಕಾಮಗಾರ ಸಂಘದವರೂ ಕೆಲಸಗಾರರ ಹಿತ ಸಂಬಂಧಗಳ ರಕ್ಷಣೆಗಾಗಿ ಪ್ರಯತ್ನಿಸುತಿರುವರು. ಗಿರಣಿಗಾರರಾದರೊ ಕೂಲಿಕಾರರ ಹಕ್ಕುಬಾಧ್ಯತೆಗಳನ್ನು ಸ್ವಲ್ಪೂ ಗಮನಿಸದೆ ತಮ್ಮ ಆಡಳಿತವನ್ನು ಸಾಗಿಸಿರುವರು. ಕೆಲಸಗಾರರಿಗೆ ಮೂರು ತಿಂಗಳ ಬೋನಸು ಕೊಡುವದಾಗಿ ವಚನವಿತ್ತಿದ್ದರೂ ಕೇವಲ ಎರಡೇ ತಿಂಗಳುಗಳ ಬೋನಸು ಕೊಟ್ಟಿರುವರು. ಇನ್ನೊಂದು ತಿಂಗಳ ಬೋನಸ್ಸನ್ನು ಕೊಡಿಸುವದರ ಸಂಬಂಧದಲ್ಲಿ ರಾಷ್ಟ್ರೀಯ ಗಿರಣಿ ಮಜದೂರ ಸಂಘದವರು ವ್ಯವಸ್ಥಾಪಕರೊಡನೆ ಎಷ್ಟೊಂದು ವಿಚಾರವಿನಿಮಯ ನಡೆಸಿದರೂ ಪ್ರಯೋಜನವಾಗಲಿಲ್ಲ. ನಿರುಪಾಯರಾಗಿ ಶ್ರೀ ದೇಶಪಾಂಡೆಯವರು ೧ ನೇ ತಾರೀಕಿನಿಂದ ಉಪವಾಸ ಪ್ರಾರಂಭಿಸಬೇಕಾಯಿತು. ಗಿರಣಿ ಕಾಮಗಾರ ಸಂಘದವರಾದರೂ ೬ ನೆಯ ತಾರೀಖಿನಿಂದ ಸಂಪುಹೂಡುವ ನೋಟಿಸನ್ನು ಕೊಟ್ಟಿರುವರು. ಈ ಟಿಪ್ಪಣಿ ವಾಚಕರ ಕೈಯಲ್ಲಿ ಮುಟ್ಟುವಹೊತ್ತಿಗೆ ಸಂಪು ಪ್ರಾರಂಭವಾದರೂ ಆಗಬಹುದು. ಗಿರಣಿಯ ಕಾಮಗಾರ ಸಂಘದವರು ಬೋನಸಲ್ಲದೆ ಇನ್ನೂ ಏಳು ಬೇಡಿಕೆಗಳನ್ನು ಮುಂದೆಮಾಡಿರುವರು. ಈ ಮೊದಲು ಅವರು ಸಂಪನ್ನು ಹೂಡಿ ಸರಕಾರದವರು ವಿಚಾರಣಾ ಮಂಡಳವನ್ನು ನೇಮಿಸುವದಾಗಿ ಹೇಳಿದ್ದರಿಂದ ಅದನ್ನು ಹಿಂತೆಗೆದುಕೊಂಡದ್ದುಂಟು. ಕೆಲಸಗಾರರೊಡನೆ ಹೀಗೆ ಮೇಲಿಂದಮೇಲೆ ತಿಕ್ಕಾಟಬರುತ್ತ ಹೋದರೆ ಗಿರಣಿಯ ಉತ್ಪಾದನೆಯೆಂತು ಹೆಚ್ಚಬಹುದು. ಇದೀಗ ಮುಂಬಯಿ ಸರಕಾರದ ಕೂಲಿಕಾರಮಂತ್ರಿಗಳು ಬೋನಸ್ಸ ವಿಷಯವನ್ನು ನ್ಯಾಯಮಂಡಲಕ್ಕೆ ಒಪ್ಪಿಸಿದ್ದರಿಂದ ಶ್ರೀ ದೇಶಪಾಂಡೆಯವರು ಉಪವಾಸದ ಪಾರಣೆ ೪ ನೇ ತಾರೀಕು ಮಧ್ಯರಾತ್ರಿಗೆ ಮಾಡಿದರು ಸರಕಾರದವರು ಕೂಡಲೆ ಈ ಬಗ್ಗೆ ತ್ವರೆಯಿಂದ ಕಾರ್ಯ ನಡೆಸಿ ಕೆಲಸಗಾರರ ನ್ಯಾಯವಾದ ಬೇಡಿಕೆಗಳನ್ನು ಪೂರಯಿಸಿ ಕೊಡಬೇಕು. ಇಂಥ ಪ್ರಶ್ನೆಗಳನ್ನು ಮುಂದೆ ಹಾಕುತ್ತ ಹೋದರೆ ಪರಿಸ್ಥಿತಿ ಹದಗೆಟ್ಟು ಆರ್ಥಿಕ ಬಿಕ್ಕಟ್ಟಿನ ದುಃಸ್ಥಿತಿಯು, ಈ ಕಾಲದಲ್ಲಿ ಉತ್ಪಾದನೆ ಮತ್ತಷ್ಟು ಕಡಮೆಯಾಗಿ ಜನತೆ ಬಳಲಬೇಕಾಗುವುದೆಂಬುದು ನಿರ್ವಿವಾದ. ಇತ್ತ ಕೆಲಸಗಾರರಾದರೂ ಸಣ್ಣಪುಟ್ಟ ಮಾತುಗಳಿಗೆ ಸಂಪುಹೂಡುವ ಇಲ್ಲವೆ ಸಮಂಜಸವಲ್ಲದ ಬೇಡಿಕೆಗಳನ್ನು ಮುಂದೆ ಮಾಡುವ ಧೋರಣವನ್ನು ತಾಳುವದು ಸರಿಯಲ್ಲ. ಗಿರಣಿಗಾರರು ಮತ್ತು ಕೆಲಸಗಾರರಲ್ಲಿ ವಿಶ್ವಾಸ ಸಹಕಾರಗಳಿಂದಲೆ ಎಲ್ಲವೂ ಸುಗಮವಾಗಿ ಸಾಗಲನುಕೂಲವಾಗುವದು.

ಹೊಸ ಯೋಜನೆ

ಬ್ರಿಟಿಶ್ ಸರಕಾರದವರು ಬರುವ ಜೂನ ೧೯೪೮ ರೊಳಗಾಗಿ ಹಿಂದುಸ್ತಾನದಿಂದ ಹೊರಡುವುದಾಗಿ ನಿರ್ಧರಿಸಿ ಅದಕ್ಕೆ ತಕ್ಕ ಕ್ರಮವನ್ನು ತೆಗೆದುಕೊಳ್ಳಲಣಿಯಾಗಿರುವರಷ್ಟೆ. ಹಿಂದುಸ್ತಾನದ ಬಿಕ್ಕಟ್ಟನ್ನು ಬಿಡಿಸುವುದಕ್ಕಾಗಿ ೧೯೪೬ ರ ಮೇ ೧೬ ಕ್ಕೆ ಮಂತ್ರಿತ್ರಯ ಯೋಜನೆಯನ್ನು ಸಾರಿದ್ದು ಸರ್ವಶ್ರುತ. ಆದರೆ ಮುಸ್ಲಿಂಲೀಗಿನವರು ಮೊದಲು ಅದಕ್ಕೊಪ್ಪಿ ಹಿಂದುಗಡೆ ಕುಂಟ ನೆವ ಮುಂದೆ ಮಾಡಿ ಅದನ್ನು ನಿರಾಕರಿಸಿದ್ದರಿಂದ ಬ್ರಿಟಿಶ್ ಸರಕಾರದವರು ಆ ಯೋಜನೆಯನ್ನು ರದ್ದು ಪಡಿಸಿ ಹೊಸ ಯೋಜನೆಯನ್ನು ಈಗ ಸಾರಿರುವರು. ಕಳೆದ ವರ್ಷದ ಯೋಜನೆಯೆ ಕೊನೆಯ ಯೋಜನೆಯಾಗಬಹುದೆಂದು ಅನೇಕರು ಬಗೆದಿದ್ದರು. ಆದರೆ ಜಿನ್ನಾರ ದುರಾಗ್ರಹಕ್ಕೆ ಮನಸೋತು ಬ್ರಿಟಿಶ್ ಸರಕಾರದವರು ಅತ್ಯಂತ ದಾರ್ಢ್ಯದಿಂದ ಸಾರಿದ್ದ ತಮ್ಮ ಯೋಜನೆಯನ್ನು ಬಿಟ್ಟುಗೊಟ್ಟರು. ಈಗ ಕೊಡಮಾಡಿದ ಯೋಜನೆಯಾದರೂ ಕೊನೆಯದೇ ಎಂಬ ಬಗ್ಗೆ ಸಂಶಯ. ಈ ಹೊಸ ಯೋಜನೆಯ ರೂಪರೇಷೆಯನ್ನು ಇದೇ ಸಂಚಿಕೆಯಲ್ಲಿ ಬೇರೆಡೆ ಕೊಟ್ಟಿದೇವೆ. ದೇಶ ವಿಚ್ಛೇದವು ಈ ಯೋಜನೆಯ ತಿರುಳೆಂದು ಹೇಳಬಹುದು. ಕಳೆದ ವರ್ಷ ಅತ್ಯಂತ ಧೈರ್ಯದಿಂದ ಮುಸ್ಲಿಂಲೀಗಿನ ದೇಶವಿಚ್ಛೇದದ ಬೇಡಿಕೆ ಅಸಮಂಜಸ ಮತ್ತು ಅವ್ಯವಹಾರ್ಯವೆಂದು ಸಾರಿದ್ದ ಸರಕಾರವೇ ಇಂದು ದೇಶವನ್ನು ತುಂಡರಿಸಲು ಯೋಜಿಸಿದ್ದು ಸಖೇದಾಶ್ಚರ್ಯ. ಕಳೆದ ಯೋಜನೆಯನ್ವಯ ಘಟನಾಸಮಿತಿಯೂ ಸೇರಿ ಹಿಂದುಸ್ತಾನದ ಘಟನೆಯನ್ನು ಸಿದ್ಧಪಡಿಸುವ ಕಾರ್ಯದಲ್ಲಿ ತೊಡಗಿದೆ. ಮುಸ್ಲಿಂಲೀಗಿನವರೊಬ್ಬರು ಅದರಲ್ಲಿ ಸೇರದಿದ್ದರೆ ಅದು ಕಾಯದೆಬದ್ಧವಾಗದೋ? ಮಂತ್ರಿತ್ರಯ ಯೋಜನೆಯನ್ವಯ ಲೀಗಿನವರು ಮೊದಲು ಘಟನಾಸಮಿತಿಯಲ್ಲಿ ಸೇರಲು ಒಪ್ಪಿ ಚುನಾವಣೆ ಮುಂತಾದ್ದರಲ್ಲಿಯೂ ಭಾಗವಹಿಸಿದ್ದುಂಟು. ಈ ರೀತಿ ಹಿಂದೀ ಪಕ್ಷ ಪಂಗಡಗಳಲ್ಲಿ ಒಮ್ಮತವಾಗದ್ದರಿಂದ ಹೊಸ ಯೋಜನೆ ಘೋಷಿಸಬೇಕಾಯಿತೆಂದು ಹೇಳಲಾಗುತ್ತದೆ. ಹಿಂದುಸ್ತಾನದಲ್ಲಿಯ ಪಕ್ಷಪಂಗಡಗಳು ಈ ಯೋಜನೆಯನ್ನು ಸ್ವೀಕರಿಸದಿದ್ದರೆ ಮುಂದೇನು ಎಂಬುದು ಈಗಲೂ ಅನಿಶ್ಚಿತವಿದೆ. ಹಿಂದುಸ್ತಾನದ ಘಟನೆಯನ್ನು ಹಿಂದೀಯರೇ ಮಾಡಿಕೊಳ್ಳಬೇಕೆಂದು ಬ್ರಿಟಿಶ್ ಸರಕಾರ ಸಾರಿ ಅದಕ್ಕಾಗಿ ಒಂದು ಅಥವಾ ಎರಡು ಘಟನಾ ಸಮಿತಿಗಳನ್ನು ಸೇರಿಸುವದೆಂದೂ ಹೇಳಲಾಗಿದೆ. ಈ ಯೋಜನೆಯ ಯಶಾಪಯಶ ಹಿಂದೀ ಧುರೀಣರ ಅಭಿಪ್ರಾಯವನ್ನೆ ಅವಲಂಬಿಸುತ್ತಿದೆಂಬುದು ನಿಶ್ಚಿತ.

ಸ್ವಾಗತಾರ್ಹ ಯೋಜನೆ

ಕಾಂಗ್ರೆಸ್ಸು ಇಡೀ ಭರತಖಂಡದ ಬಹುಸಂಖ್ಯ ಜನರು ಹಿಂದುಸ್ತಾನದ ಅಖಂಡತ್ವವನ್ನು ಪ್ರತಿಪಾದಿಸುತಿರುವಾಗ ಬ್ರಿಟಿಶ ಸರಕಾರದವರು ಸ್ಥಿರವಾಗುಳಿಯದೆ ಮುಸ್ಲಿಂಲೀಗಿನ ಪಾಕಿಸ್ತಾನ ಬೇಡಿಕೆಗೊಪ್ಪಿದರು. ಈ ಪರಿಸ್ಥಿತಿಯಲ್ಲಿ ಹಿಂದೀ ಧುರೀಣರ ಮೇಲೆ ಬಹಳ ಹೊಣೆಯಿದೆ. ಸ್ವಾತಂತ್ರ್ಯಕ್ಕಾಗಿ ಕಳೆದ ಅರವತ್ತು ವರುಷಗಳಿಂದ ಬಗೆ ಬಗೆಯ ಕಷ್ಟನಷ್ಟಗಳನ್ನು ಸಹಿಸಿದ ಭಾರತೀಯರು ಹಿಂದುಸ್ತಾನ ಒಡೆದರೂ ಚಿಂತೆಯಿಲ್ಲ ಒಮ್ಮೆ ಸ್ವಾತಂತ್ರ್ಯವನ್ನು ಸಂಪಾದಿಸಿಬಿಡುವಾ ಎಂದು ನಿರ್ಧರಿಸಬೇಕಾಗಿದೆ. ಬ್ರಿಟಿಶರು ಇಲ್ಲಿಂದ ಕಾಲ್ದೆಗೆದರೆ ನಮ್ಮ ನಮ್ಮಲ್ಲಿಯ ಜಗಳವನ್ನು ಅಲ್ಪಾವಧಿಯಲ್ಲಿ ಬಗೆಹರಿಸಿಕೊಳ್ಳಬಲ್ಲೆವೆಂಬ ಆತ್ಮಾವಿಶ್ವಾಸ ಅನೇಕ ಭಾರತೀಯ ಧುರೀಣರಿಗಿದೆ. ಅಂತೆಯೆ ಪಂಡಿತ ಜವಾಹರಲಾಲ, ಸರದಾರ ಬಲದೇವಸಿಂಗ ಪ್ರಭೃತಿಗಳು ಈ ಯೋಜನೆಯನ್ನು ಸ್ವಾಗತಿಸಿ ಭಾರತೀಯರು ಇದಕ್ಕೆ ಒಪ್ಪಿಗೆ ಕೊಟ್ಟು ಸ್ವಾತಂತ್ರ್ಯವನ್ನು ಪಡೆಯಬೇಕೆಂದು ಸಲಹೆ ಕೊಟ್ಟಿದ್ದಾರೆ. 'ಸ್ವತಂತ್ರ ಹಿಂದುಸ್ತಾನದ ಕಲ್ಪನೆ ಯಾವದೊಂದು ಭಾಗದ ಮೇಲೆ ಒತ್ತಾಯದಿಂದ ಹೇರುವ ಅಖಂಡ ಹಿಂದುಸ್ತಾನದ ಕಲ್ಪನೆಯಲ್ಲ. ಎಲ್ಲರೂ ಸ್ವಸಂತೋಷದಿಂದ ಒಪ್ಪಬಹುದಾದ ಯೋಜನೆಯನ್ನೆ ಕಾಂಗ್ರೆಸ್ಸು ಸ್ವೀಕರಿಸುವದೆಂದು' ಪಂಡಿತ ಜವಾಹರಲಾಲರು ಈ ಹೊಸ ಯೋಜನೆಯಲ್ಲಿಯ ಹಿಂದುಸ್ತಾನದ ವಿಚ್ಛೇದದ ಸಂಬಂಧದಲ್ಲಿ ಅಭಿಪ್ರಾಯ ಪಟ್ಟಿದ್ದಾರೆ. ಇದು ಯುಕ್ತಿಯುಕ್ತವಾಗಿದೆ. ಹಲವು ಹಟಮಾರಿಗಳ ಭ್ರಮನಿರಸನವಾಗುವವರೆಗೆ ಅವರ ದುರಾಗ್ರಹಕ್ಕೇ ಒಪ್ಪಿಗೆ ಕೊಡುವದು ಒಂದು ಬಗೆಯ ಮುತ್ಸದ್ದಿತನ. ಏನೇ ಇದ್ದರೂ ಕಾಂಗ್ರೆಸ್ ಮತ್ತು ಶೀಖ ಪಂಥದವರು ಸರ್ವಸಾಧಾರಣವಾಗಿ ಈ ಯೋಜನೆಗೆ ಒಪ್ಪಿಗೆ ಕೊಡುವುದಾಗಿ ತೋರುತ್ತದೆ. ಪಂಡಿತ ಜವಾಹರಲಾಲ ಮತ್ತು ಸರದಾರ ಬಲದೇವಸಿಂಗರಂತೂ ಆ ಬಗ್ಗೆ ಭಾರತೀಯರನ್ನು ಬಿನ್ನವಿಸಿಕೊಂಡದ್ದುಂಟು. ಬ್ಯಾ. ಜಿನ್ನಾರವರು ಮಾತ್ರ ಲೀಗ ಕಾರ್ಯಕಾರಿ ಮಂಡಳವೆ ಈ ಯೋಜನೆಯ ಬಗ್ಗೆ ತನ್ನ ನಿರ್ಣಯವನ್ನು ತೆಗೆದುಕೊಳ್ಳಲು ಸಮರ್ಥವಿದೆಂದು ಹೇಳಿ ತಮ್ಮ ಮೇಲಿನ ಹೊಣೆಯನ್ನು ಹಾರಿಸಿಕೊಂಡು ಬಿಟ್ಟಿದ್ದಾರೆ. ಆದರೂ ಲೀಗು ಯೋಜನೆಗೆ ಒಪ್ಪಿ ಮುಂದೆ ಮತ್ತೆ ಹೆಚ್ಚಿನದನ್ನು ಪಡೆಯಲು ಹೋರಾಡಬಹುದೆಂದು ತೋರುತ್ತದೆ. ಈ ಯೋಜನೆಯಿಂದ ಹಿಂದುಸ್ತಾನದ ಭವಿತವ್ಯವೆಂತಾಗಬಹುದೆಂಬುದು ಈಗಲೆ ಸ್ಪಷ್ಟವಾಗಿ ಹೇಳಬರುವುದಿಲ್ಲ, ಮುಂದಾಗಬಹುದಾದ ಘಟನೆಗಳನ್ನೆ ಅದು ಅವಲಂಬಿಸುತಿದೆ. ಆದರೂ ಸದ್ಯದ ಅಶಾಂತ ಪರಿಸ್ಥಿತಿ ಹೋಗಿ ದೇಶವೆಲ್ಲ ಶಾಂತ ಸಮೃದ್ಧಿ ಸ್ಥಿತಿಯನ್ನು ಮುಟ್ಟಬಹುದಾದ ಆಸೆಯಿಂದ ಸದ್ಯಕ್ಕೆ ವಿರಮಿಸುವಾ.

ರಾಮದುರ್ಗ-ಕೊಲ್ಹಾಪುರ

ಉತ್ತರ ಕರ್ನಾಟಕದ ರಾಮದುರ್ಗ ಮತ್ತು ಕೊಲ್ಹಾಪುರ ಸಂಸ್ಥಾನಿಕರು ಪ್ರಜೆಗಳಿಗೆ ಹಕ್ಕುಬಾಧ್ಯತೆಗಳನ್ನು ಕೊಡುವುದಾಗಿ ಸಾರಿ ಒಂದು ಹೆಜ್ಜೆ ಮುಂದಿಟ್ಟಿರುವರೆಂದು ಹೇಳಬಹುದು. ಈ ಎರಡು ಸಂಸ್ಥಾನ ಸರಕಾರಗಳ ಘೋಷಣೆಗಳ ಮುಖ್ಯಾಂಶವನ್ನು ಬೇರೆಕಡೆ ಕೊಟ್ಟಿದ್ದೇವೆ. ಹಿಂದುಸ್ತಾನವೀಗ ಭರದಿಂದ ಸ್ವಾತಂತ್ರ್ಯದತ್ತ ಸಾಗಿರುವಾಗ ಸಂಸ್ಥಾನಿಕರು ಇನ್ನೂ ತಮ್ಮ ಅನುದಾರ ಧೋರಣ ತಾಳುವದು ಯಾವ ರೀತಿಯಿಂದಲೂ ನ್ಯಾಯ್ಯವಾಗಲಾರದು. ಪ್ರಜೆಗಳಿಗೆ ಹೊಣೆಗಾರವಾದ ಸುಧಾರಣೆಗಳನ್ನು ಕೊಟ್ಟರೇನೇ ಇಂದು ಪ್ರಜೆಗಳು ತೃಪ್ತರಾಗುವರು. ಅಧಿಕಾರವನ್ನೆಲ್ಲ ತಮ್ಮ ಕಡೆಗೆ ಇಟ್ಟುಕೊಂಡು ನೆಪಮಾತ್ರಕ್ಕೆ ಹಲವು ಸುಧಾರಣೆಗಳನ್ನು ಕೊಟ್ಟರೆ ಯಾವ ರೀತಿಯಿಂದಲೂ ಪರಿಸ್ಥಿತಿ ಸುಧಾರಿಸದು. ಈಗ ಈ ಎರಡೂ ಸಂಸ್ಥಾನಿಕರು ಸಾರಿದ ಘೋಷಣೆಗಳು ಈ ದೃಷ್ಟಿಯಿಂದ ನೋಡಿದರೆ ತೃಪ್ತಿಕರವಾಗಿಲ್ಲೆಂದು ಸ್ಪಷ್ಟವಾಗಿ ಹೇಳಬೇಕಾಗುವದು. ನಾಮುಕರಣ ಹೊಂದಿದ ಸದಸ್ಯರನ್ನು ಶಾಸನ ಸಭೆಯಲ್ಲಿಟ್ಟಿದ್ದರ ಬಗ್ಗೆ ರಾಮದುರ್ಗ ಸರಕಾರದವರು ಮುಂದೆ ಮಾಡಿದ ನೆವಗಳು ಕೇವಲ ಕುಂಟ ನೆವಗಳೆಂದು ಸ್ಪಷ್ಟವಾಗಿದೆ. ಈ ಬಗೆಯ ಅಲ್ಪಸ್ವಲ್ಪ ಸುಧಾರಣೆಗಳನ್ನು ಕೊಟ್ಟು ಜನರನ್ನು ತೃಪ್ತಪಡಿಸಬಹುದೆಂದು ಸಂಸ್ಥಾನಿಕರು ಎಣಿಸಿದ್ದರೆ, ಅವರು ಅಡ್ಡ ದಾರಿಯನ್ನು ತುಳಿಯುತಿರುವರೆಂದು ಹೇಳಬೇಕಾಗುವದು. 'ನಮ್ಮ ರಾಷ್ಟ್ರವು ಅದರ ಜೊತೆಯಲ್ಲಿ ನಮ್ಮ ಸಂಸ್ಥಾನ ಮುಂಬರುವ ಕೆಲ ದಿನಗಳಲ್ಲಿ ಮಹತ್ವದ ಬದಲಾವಣೆಗಳನ್ನು ಕಾಣಲಿದ್ದು ಆಗ ಈ ಬದಲಾವಣೆಗಳನ್ನು ಪೂರ್ಣ ವಿಚಾರ ಮಾಡಿ ಒಪ್ಪಿಕೊಳ್ಳಲಾಗುವದೆಂದು' ಕೊಲ್ಹಾಪುರ ಮಹಾರಾಜರು ಆಶ್ವಾಸಿಸಿದ್ದಾರೆ. ಏನೇ ಇದ್ದರೂ ಸಂಸ್ಥಾನಿಕರು ಹಲಕೆಲವು ಸುಧಾರಣೆಗಳನ್ನು ಕೊಟ್ಟು ಜನತೆಯನ್ನು ತೃಪ್ತಪಡಿಸುವ ಧೋರಣವನ್ನು ಇಟ್ಟುಕೊಳ್ಳದೆ ಹೊಣೆಗಾರರಾಜ್ಯ ಪ್ರಸ್ಥಾಪಿಸುವ ಧೋರಣವನ್ನೆ ಇಟ್ಟುಕೊಳ್ಳಬೇಕು. ಅದರಿಂದ ರಾಜರಿಗೂ-ಪ್ರಜರಿಗೂ ಹಿತವಾಗುವದು.

ನೆರೆಯವರ ಹಾರಯಿಕೆ

ಹಿಂದುಸ್ತಾನ ಸ್ವತಂತ್ರವಾಗುವ ಈ ಶುಭ ಪ್ರಸಂಗದಲ್ಲಿ ನೆರೆಯ ರಾಷ್ಟ್ರವಾದ ಅಫಗಾಣಿಸ್ತಾನದ ಅರಸರು ಶುಭಾಶಯವನ್ನು ಕೋರಿದ್ದು ಅತ್ಯಂತ ಮಹತ್ವದ ಮಾತಾಗಿದೆ. ಅಫಗಾಣಿ ರಾಷ್ಟ್ರೀಯ ಸಭೆಯನ್ನುದ್ದೇಶಿಸಿ ಭಾಷಣ ಮಾಡುತ್ತ ಅಫಗಾಣಿಸ್ತಾನದ ಅರಸ ಝಹೀರ ಶಹಾರವರು 'ಸ್ವಾತಂತ್ರ್ಯ ಪ್ರಿಯರಾದ ನಾವು ಹಿಂದುಸ್ತಾನಕ್ಕೆ ಶುಭಾಶಯ ಮತ್ತು ಪರಸ್ಪರ ಸಹಕಾರದ ಆಶ್ವಾಸನ ಕೊಟ್ಟಿದ್ದಾರೆ ಹಿಂದುಸ್ತಾನಕ್ಕೆ ಜಾಗತಿಕ ರಂಗದಲ್ಲಿ ಮಹತ್ವದ ಸ್ಥಾನವನ್ನು ಈ ಮಾತು ತಂದು ಕೊಟ್ಟಿದೆಂದು ಹೇಳಬಹುದು. ಹಿಂದೀಯರು ಅಂತಃಕಲಹವನ್ನು ಬಿಟ್ಟುಗೊಟ್ಟರೆ ಅವರಿಗೂ ಅವರ ನೆರೆಯವರಿಗೂ ಒಳಿತಾಗುವದೆಂದು ಅವರು ಆಶೆ ಪ್ರದರ್ಶಿಸಿರುವರು. ಹಿಂದುಸ್ತಾನ ಅಖಂಡ ಮತ್ತು ಬಲಿಷ್ಠ ಪ್ರಗತಿಪರ ರಾಷ್ಟ್ರವಾಗುಳಿದರೆ ಅಫಗಾಣಿಸ್ತಾನ ಮತ್ತು ಅದರ ಪ್ರಜೆಗಳ ಪ್ರಗತಿ ಮತ್ತು ಭದ್ರತೆ ಬಲಗೊಳ್ಳುವುವೆಂದು ಶಹಾ ಸಾಹೇಬರಿಗೆ ಮನವರಿಕೆಯಾದ್ದರಿಂದಲೆ ಅವರು ಈ ರೀತಿ ಅಭಿಪ್ರಾಯಪಟ್ಟಿರುವರೆಂಬುದು ನಿಜ. ಅಫಗಾಣಿಸ್ತಾನ ಸ್ವತಂತ್ರ ರಾಷ್ಟ್ರವಾಗಿದ್ದುದು ಇತ್ತೀಚೆ ಮಾತ್ರ. ಅನೇಕ ಶತಮಾನಗಳಿಂದ ಅಫಗಾಣಿಸ್ತಾನ ಸಣ್ಣಪುಟ್ಟ ರಾಜ್ಯಗಳ ಸಿಥಿಲ ಆಡಳಿತದ ಭಾಗವಾಗಿತ್ತು. ಅನಂತರ ಪರಕೀಯ ಸಾಮ್ರಾಜ್ಯ ಸರಕಾರಗಳ ಕೇಂದ್ರವಾಗಿತ್ತದು. ಅನಂತರ ಅನೇಕ ಅರಸರ ಆಡಳಿತದಲ್ಲಿ ಅದರ ಭಾಗಗಳು ಹೋದುದುಂಟು. ಹಿಂದುಸ್ತಾನ ಮತ್ತು ಅಫಗಾಣಿಸ್ತಾನಗಳಲ್ಲಿಯಂತೂ ವಿಶಿಷ್ಟ ಸಂಬಂಧವಿದ್ದಿತು. ಹಿಂದುಸ್ತಾನ ಸರಕಾರದವರು ತಮ್ಮ ವಾಯವ್ಯ ಗಡಿಯಲ್ಲಿ ಬಲಿಷ್ಠ ಮಿತ್ರ ರಾಷ್ಟ್ರವೊಂದನ್ನಿಟ್ಟುಕೊಳ್ಳಲು ಯಾವಾಗಲೂ ಹವಣಿಸುತ್ತಿದ್ದರು. ಹಿಂದುಸ್ತಾನದಲ್ಲಿ ನಡೆದಿರುವ ಈ ಮಹತ್ವದ ರಾಜಕೀಯ ಬದಲಾವಣೆಗಳ ಪರಿಣಾಮ ಅಫಗಾಣದ ಮೇಲೆ ಆಗದಿರದು. ಬ್ರಿಟಿಶ್ ಮತ್ತು ರಶಿಯಗಳ ಮಧ್ಯ 'ಬಫರ' ರಾಷ್ಟ್ರವೆಂದು ಹಿಂದುಸ್ತಾನ ಮಹತ್ವದ ಪಾತ್ರವನ್ನೂ ವಹಿಸಿದ್ದುಂಟು ಅದರ ಸಾರ್ವಭೌಮತ್ವಕ್ಕೆ ಯಾವದೊಂದು ರಾಷ್ಟ್ರವು ವ್ಯತ್ಯಯತರಲು ಪ್ರಯತ್ನಿಸಿದರೆ ಮತ್ತೊಂದು ರಾಷ್ಟ್ರವು ಅದನ್ನು ತಡೆಯುವದೆಂಬ ಅರಿವು ಅಫಗಾಣರಿಗಿದ್ದುದರಿಂದ ಅದರ ಪ್ರಗತಿಗೆ ಹಿಂದು ಬಗೆಯ ಸಹಾಯವಾಗಿದೆ. ತುಂಡರಿಸಲ್ಪಟ್ಟ ಶಕ್ತಿವಿರಹಿತ ಹಿಂದುಸ್ತಾನದಿಂದ ತನಗೆ ಅಹಿತವೆಂಬುದರ ಅರಿವು ಅಫಗಾಣ ಅರಸರಿಗಿದ್ದುದರಿಂದಲೆ ಅವರು ಹಿಂದುಸ್ತಾನದ ಅಖಂಡತ್ವದ ಬಗ್ಗೆ ಶುಭಾಶಯ ಕೋರಿರುವರೆಂದು ಹೇಳಬಹುದು. ಹಿಂದೀಯರೂ ಇದೇ ಬಗೆಯ ಶುಭಾಶಯ ಮತ್ತು ಪರಸ್ಪರ ಸಹಾಯ ಸಹಕಾರಗಳನ್ನು ಹಾರಯಿಸುತಿರುವರೆಂದು ಬೇರೆ ಹೇಳಬೇಕಿಲ್ಲ. ನೆರೆ ರಾಷ್ಟ್ರಗಳಲ್ಲಿ ಈ ಬಗೆಯ ಸಹಕಾರ ಭಾವನೆ ಇರುವುದು ಎರಡೂ ರಾಷ್ಟ್ರಗಳ ಪ್ರಗತಿಗೆ ಕಾರಣವೆಂಬುದನ್ನು ಬೇರೆ ಹೇಳಬೇಕಿಲ್ಲ.

ಸಿಂಧ ಎತ್ತ ಸಾಗಿದೆ!

ಸಿಂಧ ಪ್ರಾಂತ ಮುಸಲ್ಮಾನ ಬಹುಸಂಖ್ಯಾಕ ಪ್ರಾಂತ. ಪಾಕಿಸ್ತಾನದ ಭದ್ರವಾದ ಕೋಟೆಯೆಂದು ಹೇಳಬಹುದು. ಹಲವು ಜಿಲ್ಹೆಗಳನ್ನು ಬಿಟ್ಟರೆ ಒಟ್ಟಾರೆ ಸಿಂಧ ಪ್ರಾಂತದಲ್ಲಿ ೧೦೦ ಕ್ಕೆ ೬೦ ರಷ್ಟು ಮುಸಲ್ಮಾನರ ಸಂಖ್ಯೆಯಿದೆ. ಈ ಪರಿಸ್ಥಿತಿಯಲ್ಲಿ ಮುಸಲ್ಮಾನೇತರರ ಹಕ್ಕುಬಾಧ್ಯತೆಗಳ ರಕ್ಷಣೆಯ ಭಾರ ಅವರ ಮೇಲೆಯೆ ಇದೆಂಬುದು ನಿರ್ವಿವಾದ. ಆದರೆ ಇತ್ತೀಚೆ ಸಿಂಧ ಸರಕಾರ ಬ್ಯಾ. ಜಿನ್ನಾ ಸಾಹೇಬರ ಪ್ರೇರಣೆಯಿಂದಲೊ ಸ್ವತಂತ್ರವಾಗಿಯೊ ಅನುಸರಿಸುತಿರುವ ಧೋರಣ ಅತ್ಯಂತ ಆಕ್ಷೇಪಾರ್ಹವಾಗಿದೆ. ಎಲ್ಲದರಲ್ಲಿಯೂ ಪ್ರತ್ಯಕ್ಷ ಅಪ್ರತ್ಯಕ್ಷ ರೀತಿಯಿಂದ ಮುಸಲ್ಮಾನೇತರರ ಹಕ್ಕುಬಾಧ್ಯತೆಗಳಿಗೆ ಅರೆವಾಳ ಬರೆವ ಪ್ರಯತ್ನ ನಡೆದಿದೆ. ಸಿಂಧ ಸರಕಾರದ ನವಕರಿಗಳಲ್ಲಿ ವಿಶ್ವವಿದ್ಯಾಲಯದಂಥ ಶೈಕ್ಷಣಿಕ ಸಂಸ್ಥೆಯಲ್ಲಿ ಕೂಡ ಮುಸಲ್ಮಾನರಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡುವ ಧೋರಣ ಸಿಂಧದ ಲೀಗ ಸರಕಾರ ತಾಳಿದ್ದು ಅನ್ಯಾಯದ್ದೆಂದೇ ಹೇಳಬಹುದು. ಅಲ್ಲಿನ ಮಂತ್ರಿಗಳು ಉದುರಿಸುತಿರುವ ಮುತ್ತಾಫಲಗಳು ಎಂಥ ಶಾಂತಮನುಷ್ಯನ ಮನಸ್ಸನ್ನೂ ಕದಲಿಸದೆ ಬಿಡವು. 'ಪ್ರಾಂತದಲ್ಲಿ ನಮ್ಮ ಬಹುಸಂಖ್ಯೆಯದೆ ನಾವು ಆಳತಕ್ಕವರು ನಮ್ಮ ಆಳಿಕೆಗೆ ಒಳಗಾಗಿ ಇರುವ ಇಚ್ಛೆ ನಿಮಗೆ ಇದ್ದರೆ ಇರ್ರಿ. ಇಲ್ಲದಿದ್ದರೆ ನಿಮ್ಮ ಮನಸ್ಸಿಗೆ ಬಂದಲ್ಲಿಗೆ ಹೋಗಿರಿ' ಎಂದು ಹೊಣೆಗಾರ ಮಂತ್ರಿಗಳು ಹೇಳುತಿರುವದನ್ನು ನೋಡಿದರೆ ಮುಸಲ್ಮಾನ ಬಹುಮತ ಪ್ರಾಂತದಲ್ಲಿ ಮುಸಲ್ಮಾನೇತರರ ಹಕ್ಕು ಬಾಧ್ಯತೆಗಳು ಎಷ್ಟರಮಟ್ಟಿಗೆ ಸುರಕ್ಷಿತ ಉಳಿಯುವವೆಂಬದರ ಬಗ್ಗೆ ಎಲ್ಲರಿಗೂ ಮನವರಿಕೆಯಾಗುವದು. ಪಾಕಿಸ್ತಾನ ಬೇಡುವ ಮುಸ್ಲಿಂಲೀಗಿನವರು ತಮ್ಮ ಆಡಳಿತದಲ್ಲಿ ಎಲ್ಲರಿಗೂ ನ್ಯಾಯದೊರಕುವಂತೆ ನೋಡಿಕೊಳ್ಳುವದು ಕರ್ತವ್ಯವಲ್ಲವೇ? ಸಾವಿರಾರು ವರ್ಷಗಳಿಂದ ಮನೆ ಮಾರು ಮಾಡಿಕೊಂಡಿರುವವರಿಗೆ ಗಂಟು ಮೊಟ್ಟೆ ಕಟ್ಟಿಕೊಂಡು ಹೊರಟುಹೋಗಿರೆಂದು ಹೇಳುವದು ಯಾವ ನ್ಯಾಯ? ಮುಸ್ಲಿಂ ಲೀಗಿನವರು ತಮ್ಮ ಅನ್ಯಾಯದ ಧೋರಣೆಯ ಬಗ್ಗೆ ಶಾಂತ ಮನಸಿನಿಂದ ವಿಚಾರಮಾಡಿ ಅದನ್ನು ತಿದ್ದಿಕೊಳ್ಳಬೇಕೆಂದು ಸೂಚಿಸುತ್ತೇವೆ.

ಪ್ರಾಥಮಿಕ ಶಿಕ್ಷಣದಲ್ಲಿ ಪ್ರಗತಿ

ಮುಂಬಯಿ ಸರಕಾರದವರು ಪ್ರಾಥಮಿಕ ಶಿಕ್ಷಣದಲ್ಲಿ ಒಳ್ಳೇ ಪ್ರಗತಿಪರ ಧೋರಣವನ್ನು ವಹಿಸಿರುವರೆಂದು ಸರಕಾರದ ಪ್ರಕಟನೆಯಿಂದ ಗೊತ್ತಾಗುತ್ತದೆ. ಬರುವ ೧೦—೧೨ ವರ್ಷಗಳಲ್ಲಿ ಪ್ರಾಂತದಲ್ಲೆಲ್ಲ ಸಕ್ತಿಯ ಕಡ್ಡಾಯದ ಪ್ರಾ. ಶಿಕ್ಷಣವನ್ನು ಜಾರಿಯಲ್ಲಿ ತರಬೇಕೆಂದು ಗೊತ್ತುಪಡಿಸಿರುವರು. ಮೊದಲಿನ ಐದು ವರುಷಗಳಲ್ಲಿ ೧೦೦೦ ಕ್ಕಿಂತ ಹೆಚ್ಚು ಜನಸಂಖ್ಯೆಯುಳ್ಳ ಹಳ್ಳಿಗಳಲ್ಲಿ ಒತ್ತಾಯದ ಶಿಕ್ಷಣವನ್ನು ಪ್ರಾರಂಭಿಸಲಿರುವರು. ೬೦೦ರಿಂದ ೧೦೦೦ದ ವರೆಗೆ ಜನಸಂಖ್ಯೆಯುಳ್ಳ ಹಳ್ಳಿಗಳಲ್ಲಿ ೩೦೦ ರಷ್ಟು ಸಾಲೆಗಳನ್ನು ಸ್ಥಾನಿಕ ಸಂಸ್ಥೆಯವರು ಹೊರಡಿಸಲು ಗ್ರ್ಯಾಂಟು ಕೊಡುವದಾಗಿಯೂ ನಿರ್ಧರಿಸಲಾಗಿದೆ. ಖಾಸಗಿ ಸಂಸ್ಥೆಯವರು ೧೪೫೦ ಸಾಲೆಗಳನ್ನು ಹೊರಡಿಸಬಹುದು; ಸರಕಾರದವರು ಸಹಾಯಮಾಡುವರು. ೪೦೦—೬೦೦ ರ ವರೆಗೆ ಜನಸಂಖ್ಯೆಯುಳ್ಳ ಹಳ್ಳಿಗಳಲ್ಲಿ ಈ ಖಾಸಗಿ ಸಂಸ್ಥೆಯವರು ಸಾಲೆಗಳನ್ನು ತೆಗೆಯಬಹುದಾಗಿದೆ. ಈ ರೀತಿ ಯೋಜನೆ ಮಾಡಿಕೊಂಡು ಪ್ರಾಂತದಲ್ಲೆಲ್ಲ ಪ್ರಾಥಮಿಕ ಶಿಕ್ಷಣದ ಪ್ರಚಾರ ಮಾಡಲು ಸರಕಾರದವರು ಅಣಿಯಾಗಿದ್ದು ಅಭಿನಂದನೀಯವಾಗಿದೆ. ಆದರೆ ಇದೆಲ್ಲ ಹಣದ ಅಪವ್ಯಯವಾಗದಂತೆ ನೋಡಿಕೊಳ್ಳುವದೂ ಸರ್ಕಾರದ ಕರ್ತವ್ಯವಾಗಿದೆ. ಶಿಕ್ಷಣ ಪ್ರಸರಣ ಮಾಡದೆ ಹಣವನ್ನು ಪಡೆಯುವ ಜನರೂ ಇದ್ದುದು ಅನುಭವದ ಮಾತಾಗಿದೆ. ಅಲ್ಲದೆ ಸ್ಥಾನಿಕ ಸಂಸ್ಥೆಗಳ ಕೈಯಲ್ಲಿ ಪ್ರಾಥಮಿಕ ಶಿಕ್ಷಣವಿರುವ ವರೆಗೆ ಅದರ ಪ್ರಗತಿ ಭರದಿಂದ ಆಗದೆಂಬುದೂ ಅನುಭವ. ಈ ಬಗ್ಗೆ ಸರಕಾರದವರು ಹೆಚ್ಚು ಲಕ್ಷ್ಯ ವಹಿಸಿ ಹಣ ವೆಚ್ಚ ಮಾಡಿದ್ದಕ್ಕೆ ತಕ್ಕ ಪ್ರತಿಫಲ ದೊರೆತು ಪ್ರಾಂತದಲ್ಲೆಲ್ಲ ಶಿಕ್ಷಣ ಪ್ರಗತಿಯಾಗುವಂತೆ ದಕ್ಷತೆ ವಹಿಸಬೇಕೆಂದು ಸೂಚಿಸಬಯಸುತ್ತೇವೆ.

ಜಿನ್ನಾ ಸಾಹೇಬರಿಗೆ "ರಾಜಾಜಿಯ ಪಾಕಿಸ್ತಾನ"

ವಾಯಿಸರಾಯರ ಹೊಸ ಯೋಜನೆಗೆ ಮುಖಂಡರ ಸ್ವಾಗತ—

ಹಿಂದುಸ್ತಾನ ಪಾಕಿಸ್ತಾನಗಳೆರಡಕ್ಕೂ ಬೇಗನೆ ಸಾಮಂತ ಸ್ವರಾಜ್ಯ

ಪಂಜಾಬ ಬಂಗಾಲಗಳನ್ನೊಳಗೊಂಡ ಹಿಂದುಸ್ತಾನದ ವಿಭಜನೆ. ಗಡಿನಾಡು ಪ್ರಾಂತ ಹಿಂದುಸ್ತಾನಕ್ಕೆ ಸೇರುವದೋ ಪಾಕಿಸ್ತಾನಕ್ಕೋ ಎಂಬುದನ್ನು ನಿರ್ಣಯಿಸಲು ಮತ್ತು ಆಸಾಮದ ಸಿಲ್ಹೆಟ ಜಿಲ್ಹೆ ಬಂಗಾಲಕ್ಕೆ ಸೇರಬೇಕೋ ಆಸಾಮದಲ್ಲೇ ಉಳಿಯಬೇಕೋ ಎಂಬ ಬಗ್ಗೆ ಆ ಪ್ರದೇಶಗಳಲ್ಲಿ ಸಾರ್ವತ್ರಿಕ ಮತಗಣನೆ. ಅಧಿಕಾರತ್ಯಾಗದ ಪೂರ್ವಸಿದ್ಧತೆಗಾಗಿ ಪಾಕಿಸ್ತಾನ ಹಿಂದುಸ್ತಾನಗಳಿಗೆ ಬೇಗನೆ ಸಾಮಂತ ಸ್ವರಾಜ್ಯ— ಇವು ಜೂನ ೩ಕ್ಕೆ ವಾಯಿಸರಾಯರು ಘೋಷಿಸಿದ ಹೊಸ ಯೋಜನೆಯ ಮುಖ್ಯಾಂಶಗಳು.

ಈ ಯೋಜನೆಗೆ ಕಾಂಗ್ರೆಸ್ಸಿನ ಪರವಾಗಿ ಪಂ. ನೆಹರೂರವರು ಮುಸ್ಲಿಂ ಲೀಗಿನ ಪರವಾಗಿ ಬ್ಯಾ. ಜಿನ್ನಾ, ಮತ್ತು ಸೀಖರ ಪರವಾಗಿ ಸರದಾರ ಬಲದೇವಸಿಂಗರು ತಾತ್ಪೂರ್ತಿಕವಾಗಿ ಒಪ್ಪಿಗೆಯಿತ್ತಿದ್ದಾರೆ.

ಬ್ರಿಟಿಶ ಮಂತ್ರಿಮಂಡಲದ ಮೇ ೧೬ ರ ಯೋಜನೆಯನ್ನು ಭಾರತದ ಎಲ್ಲ ಪಕ್ಷಗಳೂ ಸ್ವೀಕರಿಸುವವೆಂಬ ನಂಬಿಗೆಯಿತ್ತು. ಆದರೆ ಮುಸ್ಲಿಂ ಲೀಗು ಆ ಯೋಜನೆಯ ಅನುಸಾರ ಘಟನಾಸಮಿತಿಯಲ್ಲಿ ಸೇರಿ ಸಹಕರಿಸದೆ ದೂರ ನಿಂತು ವಿರುದ್ಧ ಚಳವಳಿಹೂಡಿ ತನ್ನ ಅತೃಪ್ತಿಯನ್ನು ನಾನಾವಿಧದಿಂದ ವ್ಯಕ್ತಪಡಿಸಿದುದು ಸುವೇದ್ಯವಾಗಿದೆ. ಆದುದರಿಂದ ಹೊಸ ಯೋಜನೆಯನ್ನು ತರಬೇಕಾದುದರ ಕಾರಣವನ್ನು ವಿವರಿಸುತ್ತ ಹಿಂದೀ ರಾಜಕೀಯ ಪಕ್ಷಗಳಲ್ಲಿ ಒಡಂಬಡಿಕೆಯಾಗದುದರಿಂದ ಹಿಂದೀ ಜನರ ಇಚ್ಛೆಯನ್ನು ಅರಿತುಕೊಳ್ಳುವ ಉಪಾಯವನ್ನು ಚಕ್ರವರ್ತಿ ಸರಕಾರವು ಯೋಜಿಸಬೇಕಾಗಿ ಬಂದು ಇಲ್ಲಿಯ ಎಲ್ಲ ರಾಜಕೀಯ ಧುರೀಣರೊಡನೆ ಪೂರ್ಣ ವಿಚಾರಮಾಡಿ ಕೆಳಗಿನ ಯೋಜನೆಯನ್ನು ಅನುಸರಿಸುವ ನಿರ್ಣಯಕ್ಕೆ ಬರಬೇಕಾಯಿತೆಂದು ವಾಯಿಸರಾಯರು ಹೇಳಿದರು. ಯೋಜನೆ ಹೀಗಿದೆ:

ವಿಚ್ಛೇದನ ಕ್ರಮ

ಬಂಗಾಲ ಹಾಗು ಪಂಜಾಬಗಳ ಪ್ರಾಂತಿಕ ಶಾಸನ ಸಭೆಗಳಿಗೆ (ಯುರೋಪಿಯನ್ ಸಭಾಸದರನ್ನು ಬಿಟ್ಟು) ಎರಡು ಭಾಗಗಳಲ್ಲಿ ಬಿಂಗಡವಾಗಿ ಅಂದರೆ ಮುಸ್ಲಿಂ ಬಹುಸಂಖ್ಯಾಕ ಜಿಲ್ಹೆಗಳ ಪ್ರತಿನಿಧಿಗಳಿಗೆ ಒಂದು ಗುಂಪಿನಲ್ಲಿ ಪ್ರಾಂತಗಳ ಉಳಿದ ಭಾಗಗಳ ಪ್ರತಿನಿಧಿಗಳಿಗೆ ಮತ್ತೊಂದು ಗುಂಪಿನಲ್ಲಿ ಕೂಡಲು ಹೇಳಲಾಗುವದು. ಜಿಲ್ಹೆಗಳ ಜನಸಂಖ್ಯೆಯನ್ನು ನಿರ್ಣಯಿಸಲು ೧೯೪೧ ನೇ ಜನಗಣತಿಯ ಅಂಕಿಗಳನ್ನು ಅಧಿಕೃತವಾಗಿ ಹಿಡಿಯಲಾಗುವದು. ಈ ಎರಡೂ ಪ್ರಾಂತಗಳಲ್ಲಿಯ ಮುಸ್ಲಿಮ ಬಹುಸಂಖ್ಯಾಕ ಜಿಲ್ಹೆಗಳನ್ನು ಈ ಘೋಷಣೆಯ ಪರಿಶಿಷ್ಟದಲ್ಲಿ ಕೊಡಲಾಗಿದೆ. ಪ್ರತಿಯೊಂದು ಶಾಸನ ಸಭೆಯ ಸಭಾಸದರು ಪ್ರತ್ಯೇಕ ಎರಡು ಭಾಗಗಳಲ್ಲಿ ಕೂಡಿದ ಮೇಲೆ ಪ್ರಾಂತವನ್ನು ವಿಚ್ಛೇದಿಸಬೇಕೋ ಬಾರದೋ ಎಂಬ ಬಗ್ಗೆ ಮತಕೊಡಲು ಅವರಿಗೆ ಅಧಿಕಾರ ಕೊಡಲಾಗುವದು. ಯಾವದೇ ಭಾಗದವರು ಸಾದಾ ಬಹುಮತದಿಂದ ವಿಚ್ಛೇದನೆಗೆ ಅನುಕೂಲ ಮತ ಕೊಟ್ಟಲ್ಲಿ ವಿಭಜನೆಯು ನಡೆಯುವದು. ಹಾಗು ಅದರಂತೆ ಏರ್ಪಾಟುಗಳು ಕೈಕೊಳ್ಳಲ್ಪಡುವವು. ವಿಚ್ಛೇದನ ಸಂಬಂಧದ ಪ್ರಶ್ನೆಯು ನಿರ್ಣಯಿಸಲ್ಪಡುವ ಮೊದಲು ಎರಡೂ ಭಾಗಗಳು ಹಿಂದಿನಂತೆ ಸಂಯುಕ್ತವಾಗಿ ಉಳಿಯಲು ನಿಶ್ಚಯಿಸಿದಲ್ಲಿ ಇಡೀ ಪ್ರಾಂತವು ಯಾವ ಘಟನಾಸಮಿತಿಯಲ್ಲಿ ಸೇರಬಯಸುವದೆಂಬುದನು ಪ್ರತಿಯೊಂದು ಭಾಗದ ಪ್ರತಿನಿಧಿಗಳು ಮುಂಗಡ ಅರಿತುಕೊಳ್ಳುವದು ಇಷ್ಟವಿರುವದು ಆದ್ದರಿಂದ ಎರಡೂ ಶಾಸನ ಸಭೆಗಳ ಯಾವದೇ ಸಭಾಸದನು ಹಾಗೆ ಇಚ್ಛಿಸಿದಲ್ಲಿ ಶಾಸನ ಸಭೆಯ ಎಲ್ಲ ಸಭಾಸದರ (ಯುರೋಪಿಯನರನ್ನು ಬಿಟ್ಟು) ಸಭೆಯನ್ನು ಕೂಡಿಸಿ ಎರಡೂ ಭಾಗಗಳು ಸಂಯುಕ್ತವಾಗಿ ಉಳಿಯಲು ನಿಶ್ಚಯಿಸಿದಲ್ಲಿ ಇಡೀ ಪ್ರಾಂತವು ಯಾವ ಘಟನಾ ಸಮಿತಿಯಲ್ಲಿ ಸೇರಬಯಸುವದೆಂಬ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳಲಾಗುವದು.

ಮುಸ್ಲಿಂ ಬಹುಸಂಖ್ಯಾಕ ಜಿಲ್ಹೆಗಳು

೧೯೪೧ ನೇ ಜನಗಣತಿ ಪ್ರಕಾರ ಪಂಜಾಬ ಹಾಗು ಬಂಗಾಲಗಳ ಮುಸ್ಲಿಂ ಬಹುಸಂಖ್ಯಾಕ ಜಿಲ್ಹೆಗಳು ಈ ರೀತಿ ಇರುವವು.

ಪಂಜಾಬ:— ಲಾಹೋರ ವಿಭಾಗ— ಗುಜರಾನವಾಲಾ, ಗುರುದಾಸಪುರ, ಲಾಹೋರ

ವಿಚ್ಛೇದನೆಯು ನಿರ್ಣಯಿಸಲ್ಪಟ್ಟದ್ದೇ ಆದರೆ ಪ್ರಾಂತಿಕ ಶಾಸನ ಸಭೆಯ ಪ್ರತಿಯೊಂದು ಭಾಗದವರು ತಮ್ಮ ಪ್ರದೇಶಗಳ ಪರವಾಗಿ ಯೋಜನೆಯ ಪರಿಚ್ಛೇದದಲ್ಲಿ ಯಾವುದನ್ನು ಸ್ವೀಕರಿಸಬೇಕೆಂಬುದನ್ನು ನಿರ್ಣಯಿಸುವರು.

ಗಡಿ ನಿರ್ಣಯ ಪ್ರಶ್ನೆ

ವಿಚ್ಛೇದನೆಯ ತಾತ್ಕಾಲಿಕ ಮುದ್ದೆಯನ್ನು ನಿರ್ಣಯಿಸುವ ಸಲುವಾಗಿ ಬಂಗಾಲ ಹಾಗು ಪಂಜಾಬಗಳ ಪ್ರಾಂತಿಕ ಶಾಸನ ಸಭಾಸದರು ಮುಸ್ಲಿಂ ಬಹುಸಂಖ್ಯಾಕ ಜಿಲ್ಲೆಗಳು (ಪರಿಶಿಷ್ಟದಲ್ಲಿ ಕಾಣಿಸಿದ ಪ್ರಕಾರ) ಹಾಗು ಮುಸಲ್ಮಾನೇತರ ಬಹುಸಂಖ್ಯಾಕ ಜಿಲ್ಲೆಗಳು ಹೀಗೆ ಎರಡು ಭಾಗಗಳಲ್ಲಿ ಬಿಂಗಡವಾಗಿ ಕೂಡುವರು ಇದು ಕೇವಲ ತಾತ್ಪೂರ್ತಿಕ ಸ್ವರೂಪದ ಪ್ರಾಸ್ತಾವಿಕ ಹೆಜ್ಜೆಯಿರುವದು. ಯಾಕಂದರೆ ಈ ಪ್ರಾಂತಗಳ ಕೊನೆಯ ವಿಚ್ಛೇದನ ಸಂಬಂಧದಲ್ಲಿ ಗಡಿಗಳ ಪ್ರಶ್ನೆಯ ಸವಿಸ್ತರ ಪರಿಶೀಲನೆ ಮಾಡಬೇಕಾಗುವದು. ಈ ಎರಡೂ ಪ್ರಾಂತಗಳಲ್ಲಿ ಯಾವದೇ ಪ್ರಾಂತದ ವಿಭಜನೆಯ ನಿರ್ಣಯವು ಕೈಕೊಳ್ಳಲ್ಪಟ್ಟ ಕೂಡಲೆ ಗವ್ಹರ್ನರ ಜನರಲರಿಂದ ಗಡಿ ವಿಚಾರಣಾಸಮಿತಿಯು ನೇಮಿಸಲ್ಪಡುವದು. ಅದರ ಸಭಾಸದರು ಹಾಗು ವಿಚಾರಣೆ ಅಂಶಗಳನ್ನು ಸಂಬಂಧಿಸಿದವರೊಂದಿಗೆ ವಿಚಾರ ಮಾಡಿ ಗೊತ್ತುಮಾಡಲಾಗುವದು. ಪಂಜಾಬದಲ್ಲಿ ಮುಸಲ್ಮಾನ ಬಹುಸಂಖ್ಯಾಕರ ಹಾಗು ಮುಸಲ್ಮಾನೇತರರ ಭಾಗಗಳಲ್ಲಿ ಯಾವವು ನಿಕಟವಾಗಿ ಹೊಂದಿಕೊಂಡಿರುವವೆಂಬುದನ್ನು ಲಕ್ಷಿಸಿ ಹಾಗು ಇತರ ವಿಷಯಗಳನ್ನು ಗಣನೆಗೆ ತಂದುಕೊಂಡು ಗಡಿ ನಿರ್ಣಯಿಸಲು ಅದಕ್ಕೆ ತಿಳಿಸಲಾಗುವದು. ಇದರಂತೆ ಬಂಗಾಲ ಗಡಿ ವಿಚಾರಣಾ ಸಮಿತಿಗೂ ಸಲಹೆ ಕೊಡಲಾಗುವದು. ಗಡಿ ವಿಚಾರಣೆ ಸಮಿತಿಯ ವರದಿಯು ಜಾರಿಯಲ್ಲಿ ಬರುವ ವರೆಗೆ ಪರಿಶಿಷ್ಟದಲ್ಲಿ ನಿರ್ದೇಶಿಸಲಾದ ತಾತ್ಪೂರ್ತಿಕ ಗಡಿಗಳನ್ನೇ ಉಪಯೋಗಿಸಲಾಗುವದು.

ಸಿಂಧ

ಸಿಂಧದ ಶಾಸನ ಸಭೆಯು [ಯುರೋಪಿಯನ್ ಸಭಾಸದರನ್ನು ಬಿಟ್ಟು] ವಿಶೇಷ ಸಭೆಯಲ್ಲಿ ಸೇರಿ ಯೋಜನೆಯ ೪ ನೇ ಪರಿಚ್ಛೇದದಲ್ಲಿಯ ಯಾವುದನ್ನು ಸ್ವೀಕರಿಸಬೇಕೆಂಬದರ ಬಗ್ಗೆ ನಿರ್ಣಯ ತೆಗೆದುಕೊಳ್ಳುವದು.

ಗಡಿನಾಡು

ಗಡಿನಾಡ ಪ್ರಾಂತದ ಪರಿಸ್ಥಿತಿಯು ಅಪವಾದಾತ್ಮಕವಿರುವದು. ಈ ಪ್ರಾಂತದ ಮೂವರು ಪ್ರತಿನಿಧಿಗಳಲ್ಲಿ ಇಬ್ಬರು ಸಧ್ಯದ ಘಟನಾ ಸಮಿತಿಯಲ್ಲಿ ಈಗಾಗಲೆ ಭಾಗ ತೆಗೆದುಕೊಂಡಿರುವರು. ಆದರೆ ಅದರ ಭೌಗೋಲಿಕ ಪರಿಸ್ಥಿತಿ ಹಾಗು ಇತರ ದೃಷ್ಟಿಗಳಿಂದ ವಿಚಾರ ಮಾಡಿದಲ್ಲಿ ಇಡೀ ಪಂಜಾಬವಾಗಲಿ ಪಂಜಾಬದ ಭಾಗವಾಗಲಿ ಸಧ್ಯದ ಘಟನಾ ಸಮಿತಿಯಲ್ಲಿ ಭಾಗ ವಹಿಸದಿರಲು ನಿಶ್ಚಯಿಸಿದ್ದೇ ಆದರೆ ಗಡಿನಾಡ ಪ್ರಾಂತಕ್ಕೆ ಪರಿಸ್ಥಿತಿ ಪುನರ್ವಿಚಾರಿಸಲು ಅವಕಾಶ ಕೊಡಬೇಕಾಗುವದೆಂಬುದು ಸ್ಪಷ್ಟವಿದೆ. ಅಂಥ ಪ್ರಸಂಗ ಬಂದಲ್ಲಿ ಗಡಿನಾಡ ಪ್ರಾಂತದ ಸಧ್ಯದ ಶಾಸನ ಸಭೆಯ ಮತದಾರರ ಅಭಿಪ್ರಾಯವನ್ನು ಮೇಲಿನ ೪ ನೇ ಪರಿಚ್ಛೇದದಲ್ಲಿ ಯಾವುದನ್ನು ಸ್ವೀಕರಿಸಲಾಗುವದು ಎಂಬ ಬಗ್ಗೆ ಕೇಳಲಾಗುವದು. ಗವ್ಹರ್ನರ ಜನರಲರು ಪ್ರಾಂತಿಕ ಸರಕಾರದ ವಿಚಾರ ವಿನಿಮಯದೊಂದಿಗೆ ಈ ಮತಗಣನೆ ನಡೆಸುವರು.

ಬ್ರಿಟಿಶ ಬಲುಚಿಸ್ತಾನ

ಬ್ರಿಟಿಶ ಬಲುಚಿಸ್ತಾನವು ಘಟನಾ ಸಮಿತಿಗೆ ಓರ್ವ ಸಭಾಸದನನ್ನು ಆರಿಸಿರುವದು ಆದರೆ ಆತನು ಸಧ್ಯದ ಘಟನಾ ಸಮಿತಿಯಲ್ಲಿ ತನ್ನ ಸ್ಥಾನವನ್ನು ವಹಿಸಿರುವದಿಲ್ಲ. ಭೌಗೋಲಿಕ ಪರಿಸ್ಥಿತಿಯನ್ನು ಅನುಲಕ್ಷಿಸಿ ಈ ಪ್ರಾಂತಕ್ಕೂ ಪರಿಸ್ಥಿತಿ ಪುನರ್ವಿಚಾರಿಸಲಿಕ್ಕೂ ಮೇಲಿನ ೪ನೇ ಪರಿಚ್ಛೇದದಲ್ಲಿ ಬೇಕಾದುದನ್ನು ಆರಿಸಿಕೊಳ್ಳಲಿಕ್ಕೂ ಅವಕಾಶ ಕೊಡಲಾಗುವದು. ಇದನ್ನು ಯಾವ ಯೋಗ್ಯ ರೀತಿಯಿಂದ ನೆರವೇರಿಸಬೇಕೆಂಬುದನ್ನು ಗವರ್ನರ ಜನರಲರು ಪರಿಶೀಲಿಸುತ್ತಿರುವರು.

ಸಿಲ್ಹೆಟ ಜಿಲ್ಹೆ

ಸಿಲ್ಹೆಟ ಜಿಲ್ಹೆಯಲ್ಲಿ ಮುಸಲ್ಮಾನರ ಬಹುಮತವಿದೆ. ಅದು ಆಸಾಮ ಪ್ರಾಂತದಲ್ಲಿರಬೇಕೊ ಹೊಸ ಪೂರ್ವ ಬಂಗಾಲದಲ್ಲಿ ಸೇರಬೇಕೋ ಎಂಬದನ್ನು ಸಾರ್ವತ್ರಿಕ ಮತದಾನದಿಂದ ನಿರ್ಧರಿಸಲಾಗುವದು. ಮತ್ತು ಇದಕ್ಕಾಗಿ ಪಂಜಾಬ ಬಂಗಾಲಗಳಲ್ಲಿಯಂತೆ ಗಡಿ ನಿರ್ಣಯ ಸಮಿತಿ ನೇಮಿಸಲಾಗುವದು. ಈ ಬಗ್ಗೆ ಗವರ್ನರ ಜನರಲ್‌ರು ಎಲ್ಲವನ್ನು ಪರಿಶೀಲಿಸುವರು.

ಹೊಸ ಚುನಾವಣೆ

ಬಂಗಾಲ ಹಾಗು ಪಂಜಾಬಗಳು ವಿಚ್ಛೇದಿಸಲ್ಪಡಬೇಕೆಂದು ನಿರ್ಣಯವಾದಲ್ಲಿ ೧೯೪೬ ನೇ ಮೇ ೧೬ ನೇ ತಾರೀಖಿನ ಮಂತ್ರಿಮಂಡಳ ಶಿಷ್ಟಮಂಡಳದ ಯೋಜನೆಯಲ್ಲಿರು ತತ್ವದ ಪ್ರಕಾರ ೧೦ ಲಕ್ಷ ಜನಸಂಖ್ಯೆಗೊಬ್ಬರಂತೆ ಅವರ ಪ್ರತಿನಿಧಿಗಳನ್ನಾರಿಸಲು ಹೊಸ ಚುನಾವಣೆಗಳನ್ನು ಜರುಗಿಸಬೇಕಾಗುವದು. ಇದರಂತೆ ಸಿಲ್ಹೆಟ ಜಿಲ್ಹೆಯು ಪೂರ್ವ ಬಂಗಾಲದಲ್ಲಿ ಸೇರ್ಪಡೆ ಹೊಂದಬೇಕೆಂದು ನಿರ್ಣಯವಾದರೆ ಸಿಲ್ಹೆಟ ಜಿಲ್ಹೆಯಲ್ಲಿಯೂ ಚುನಾವಣೆ ನಡೆಸಬೇಕಾಗುವದು ಆ ಆ ಭಾಗಗಳು ಆರಿಸತಕ್ಕ ಪ್ರತಿನಿಧಿಗಳ ಸಂಖ್ಯೆಯನ್ನು ಕೆಳಗೆ ಕೊಡಲಾಗಿದೆ.

ಸಿಲ್ಹೆಟ ಜಿಲ್ಹೆ— ಸಾಮಾನ್ಯ ೧, ಮುಸಲ್ಮಾನ ೨ ಒಟ್ಟು ೩.

ಪಶ್ಚಿಮ ಬಂಗಾಲ— ಸಾಮಾನ್ಯ ೧೫, ಮುಸಲ್ಮಾನ ೪. ಒಟ್ಟು ೧೯.

ಪೂರ್ವ ಬಂಗಾಲ— ಸಾಮಾನ್ಯ ೧೨, ಮುಸಲ್ಮಾನ ೨೯, ಒಟ್ಟು ೪೧.

ಪಶ್ಚಿಮ ಪಂಜಾಬ— ಸಾಮಾನ್ಯ ೩, ಮುಸಲ್ಮಾನ ೧೨, ಸೀಖ ೨, ಒಟ್ಟು ೧೭.

ಪೂರ್ವ ಪಂಜಾಬ— ಸಾಮಾನ್ಯ ೬, ಮುಸಲ್ಮಾನ ೪, ಸೀಖ ೨. ಒಟ್ಟು ೧೨.

ತಮಗೆ ದೊರೆತ ಅಜ್ಞೆ ಮೇರೆಗೆ ಬೇರೆ ಬೇರೆ ಭಾಗಗಳ ಪ್ರತಿನಿಧಿಗಳು ಸಧ್ಯದ ಘಟನಾ ಸಮಿತಿಯಲ್ಲಿ ಕೂಡುವರು ಇಲ್ಲವೆ ಹೊಸ ಘಟನಾ ಸಮಿತಿ ರಚಿಸುವರು.

ಒಡಂಬಡಿಕೆ ವಿಷಯಗಳು

ನಿಶ್ಚಯಿಸಲ್ಪಟ್ಟ ಯಾವದೇ ವಿಚ್ಛೇದನ ಸಂಬಂಧದ ಆಡಳಿತ ಪರಿಣಾಮಗಳ ಸಂಬಂಧದಲ್ಲಿ ಸಾಧ್ಯವಿದ್ದಷ್ಟು ಬೇಗನೆ ಮಾತುಕತೆ ನಡೆಸಬೇಕಾಗುವದು.

(ಅ) ಸಂರಕ್ಷಣ, ಹಣಕಾಸು, ಮಾರ್ಗ ಸೌಕರ್ಯಗಳನ್ನು ಒಳಗೊಂಡು ಈಗ ಕೇಂದ್ರ ಸರಕಾರವು ನಿರ್ವಹಿಸುವ ಎಲ್ಲ ವಿಷಯಗಳ ಸಂಬಂಧದಲ್ಲಿ ಆ ಆ ಭಾವೀ ಸರಕಾರಗಳ ಪ್ರತಿನಿಧಿಗಳ ನಡುವೆ.

(ಬ) ಅಧಿಕಾರ ವರ್ಗೀಕರಣದಿಂದ ಉದ್ಭವವಾಗುವ ವಿಷಯಗಳ ಒಡಂಬಡಿಕೆ ಸಂಬಂಧವಾಗಿ ಬೇರೆ ಬೇರೆ ಭಾವೀ ಸರಕಾರಗಳು ಹಾಗು ಚಕ್ರವರ್ತಿ ಸರಕಾರದ ನಡುವೆ.

(ಕ) ವಿಚ್ಛೇದಿಸಲ್ಪಡಬಹುದಾದ ಪ್ರಾಂತಗಳ ಸಂಬಂಧದಲ್ಲಿ ಉತ್ಪನ್ನ ಹಾಗು ಹೊಣೆಗಳ ಹಂಚುವಿಕೆ, ಪೋಲೀಸ ಹಾಗು ಇತರ ಸರ್ವಿಸಗಳು, ಹಾಯಕೋರ್ಟ, ಪ್ರಾಂತಿಕ ಸಂಸ್ಥೆಗಳು ಇವೇ ಮೊದಲಾದ ಎಲ್ಲ ಪ್ರಾಂತಿಕ ವಿಷಯಗಳ ಆಡಳಿತ ಸಂಬಂಧದಲ್ಲಿ.

ಹಿಂದುಸ್ತಾನದ ವಾಯವ್ಯ ಗಡಿಯ ಗುಡ್ಡಗಾಡು ಜನರೊಡನೆ ಭಾವೀ ಯೋಗ್ಯ ಅಧಿಕಾರಿಗಳು ಮಾತುಕತೆ ನಡೆಸಿ ಒಡಂಬಡಿಕೆ ಮಾಡಿಕೊಳ್ಳಬೇಕಾಗುವದು.

ಸಂಸ್ಥಾನ ಸಂಬಂಧದ ಧೋರಣದಲ್ಲಿ ಬದಲಿಲ್ಲ

ಮೇಲೆ ಘೋಷಿಸಿದ ನಿರ್ಣಯಗಳು ಕೇವಲ ಬ್ರಿಟಿಶ ಹಿಂದುಸ್ತಾನಕ್ಕೆ ಸಂಬಂಧಿಸುವವೆಂದೂ ಹಿಂದಿ ಸಂಸ್ಥಾನಗಳ ಸಂಬಂಧದ ಚಕ್ರವರ್ತಿ ಸರಕಾರದ ಧೋರಣವು ಮೇ ೧೬ ನೇ ತಾರೀಖಿನ ಮಂತ್ರಿ ಮಂಡಳ ಶಿಷ್ಟ ಮಂಡಳದ ಪ್ರಕಟನೆಯಲ್ಲಿದ್ದಂತೆಯೆ ಇರುವದೆಂದೂ ಚಕ್ರವರ್ತಿ ಸರಕಾರದವರು ಸ್ಪಷ್ಟಮಾಡಬಯಸುತ್ತಾರೆ.

ಭಾವೀ ಸರಕಾರಗಳು ಅಧಿಕಾರ ಗ್ರಹಿಸಲು ಸಿದ್ಧವಾಗಬೇಕಾದರೆ ಅವುಗಳಿಗೆ ಆ ಬಗ್ಗೆ ಅವಕಾಶ ಕೊಡುವದು ಅವಶ್ಯವಿದ್ದುದರಿಂದ ಮೇಲಿನ ಎಲ್ಲ ಕ್ರಮಗಳನ್ನು ಅದಷ್ಟು ಬೇಗ ಮುಗಿಸುವದು ಅವಶ್ಯವಿರುವದು. ವಿಲಂಬವನ್ನು ತಪ್ಪಿಸುವದಕ್ಕಾಗಿ ಬೇರೆ ಬೇರೆ ಪ್ರಾಂತಗಳು ಅಥವಾ ಭಾಗಗಳು ಈ ಯೋಜನೆಯ ಕರಾರುಗಳಿಗನುಸರಿಸಿ ಶಕ್ಯವಿದ್ದಷ್ಟು ಮಟ್ಟಿಗೆ ಸ್ವತಂತ್ರ ರೀತಿ ಸಾಗುವವು. ಸಧ್ಯದ ಘಟನಾ ಸಮಿತಿ ಹಾಗು ಹೊಸ ಘಟನಾ ಸಮಿತಿಗಳು (ರಚಿತವಾದರೆ) ತಮ್ಮ ತಮ್ಮ ಭಾಗಗಳ ಘಟನೆ ರಚಿಸುವವು ತಮ್ಮ ನಿಯಮಗಳನ್ನೂ ಮಾಡಿಕೊಳ್ಳಲಿಕ್ಕೆ ಅವು ಸ್ವತಂತ್ರವಿರುವವು.

ಸಾಮಂತ ಸ್ವರಾಜ್ಯ

ಅಧಿಕಾರವನ್ನು ಅದಷ್ಟು ಬೇಗ ವರ್ಗಾಯಿಸಲು ಅನುಕೂಲ ಮಾಡಿಕೊಡಲು ಒಂದು ಇಲ್ಲವೆ ಎರಡು ಭಾವೀ ಸರಕಾರಗಳಿಗೆ ಶೀಘ್ರದಲ್ಲಿ ಸಾಮಂತ ಸ್ವರಾಜ್ಯವನ್ನು ಕೊಡಲಾಗುವುದು. ಈ ಬಗ್ಗೆ ಚಕ್ರವರ್ತಿ ಸರಕಾರವು ಸಧ್ಯದ ಅಧಿವೇಶನದಲ್ಲಿ ಕಾಯಿದೆ ತೆಗೆದುಕೊಂಡು ಬರುವದು. ಆದರೆ ತಮ್ಮ ತಮ್ಮ ಅಧಿಕಾರದಲ್ಲಿರುವ ಹಿಂದುಸ್ತಾನದ ಭಾಗಗಳು ಬ್ರಿಟಿಶಸಾಮ್ರಾಜ್ಯದಲ್ಲುಳಿಯಬೇಕೋ ಬೇಡವೋ ಎಂಬುದನ್ನು ಯೋಗ್ಯ ಸಮಯದಲ್ಲಿ ನಿರ್ಣಯಿಸುವ ಹಕ್ಕು ಹಿಂದೀಯ ಘಟನಾ ಸಮಿತಿಗಳಿಗಿರುವದು.

ಮುಸ್ಲಿಂ ಬಹುಸಂಖ್ಯಾಕ ಜಿಲ್ಹೆಗಳು

ಪಂಜಾಬ:—

ಲಾಹೋರ ವಿಭಾಗದಲ್ಲಿ ಗುಜರಾನವಾಲಾ, ಗುರುದಾಸಪುರ, ಲಾಹೋರ, ಶೇಖುಪುರಾ, ಸಿಯಾಲಕೋಟ.

ರಾವಳಪಿಂಡಿ ವಿಭಾಗದಲ್ಲಿ ಅಟಕ, ಗುಜರಾತ, ಝೇಲಂ, ಮಿಯಾನವಾಲಿ, ರಾವಳಪಿಂಡಿ, ಶಾಹಪುರ.

ಮುಲ್ತಾನ ವಿಭಾಗದಲ್ಲಿ ಡೇರಾಗಾಝಿಖಾನ, ಝುಂಗ, ಲ್ಯಾಲಪುರ, ಮೊಂಟಗೊಮರಿ, ಮುಲ್ತಾನ, ಮುಝಫರಗಡ.

ಬಂಗಾಲ:—

ಚಿತಗಾಂಗ ವಿಭಾಗದಲ್ಲಿ ಚಿತಗಾಂಗ, ನವಖಾಲಿ, ತಿಪ್ಪೇರಾ.

ಡಾಕಾ ವಿಭಾಗದಲ್ಲಿ ಬಾಕೇರಗಂಜ, ಡಾಕಾ, ಫರೀದಪುರ, ಮೈಮನಸಿಂಗ.

ಇಲಾಖಾ ವಿಭಾಗದಲ್ಲಿ ಜೆಸ್ಸೂರ, ಮುರ್ಶಿದಾಬಾದ, ನಾದಿಯಾ.

ರಾಜಶಾಹೀ ವಿಭಾಗದಲ್ಲಿ ಬೋಗ್ರಾ, ದಿನಾಜಪುರ, ಮಾಲ್ಡಾ, ಪಾವನಾ, ರಾಜಶಾಹಿ, ರಂಗಪುರ.


ಮುಖಂಡರ ಅಭಿಪ್ರಾಯ

ಬ್ರಿಟಿಶ ಸರಕಾರದ ಪರವಾಗಿ ವಾಯಿಸರಾಯರು ಮಾಡಿದ ಘೋಷಣೆಯಲ್ಲಿ ಅಡಕವಾದ ಯೋಜನೆ ಭಾರತದ ಕೆಲವು ಭಾಗಗಳಿಗೆ ಸ್ವಯಂ ನಿರ್ಣಯದ ತತ್ವವನ್ನು ಅನ್ವಯಿಸಲಿದೆಯೆಂದೂ ಅದೇ ಕಾಲಕ್ಕೆ ಸ್ವಾತಂತ್ರ್ಯದ ಮಾರ್ಗದಲ್ಲಿ ಭಾರತವು ಒಂದು ಹೆಜ್ಜೆ ಮುಂದಿಟ್ಟಂತಾಗುವುದೆಂದೂ ಇಂತಹ ಅಲಭ್ಯ ಸೌಲಭ್ಯವನ್ನು ಜನರು ಉತ್ಸಾಹದಿಂದ ಕಾಣಬೇಕೆಂದೂ ಪಂ. ನೆಹರೂರವರು ಬಾನುಲಿಯಲ್ಲಿ ಮಾತಾಡುತ್ತ ಹೇಳಿದರು. ದಿಲ್ಲಿಯಲ್ಲಿರುವ ಮುಸ್ಲಿಂಲೀಗಿನ ವರ್ಗದ ಪ್ರತಿಕ್ರಿಯೆ ಆಶಾದಾಯಕವಾಗಿದೆಯೆಂದೂ ಉಕ್ತ ಸೂಚನೆಗಳ ಬಗ್ಗೆ ಕೊನೆಯ ನಿರ್ಣಯವನ್ನು ಕೊಡಲು ಲೀಗ ಕೌನ್ಸಿಲ್ಲು ೯ನೇ ತಾರೀಕು ಸೇರುವುದೆಂದೂ ಬ್ಯಾ. ಜಿನ್ನಾರು ಅನಂತರ ಹೇಳಿದರು. ಕೊನೆಯದಾಗಿ ಮಾತನಾಡುತ್ತ ಸ್ವಾತಂತ್ರ್ಯವು ನಮಗೀಗ ದೊರೆಯುತಾದರೂ ಭಾರತವಿಂದು ಪ್ರತ್ಯಕ್ಷ ಎರಡು ಹೋಳಾಗಿರುವುದರಿಂದ ನಾವಿಂದು ಸುಖಿಗಳಾದೆವೆಂದು ಹೇಳಿದರೆ ತಪ್ಪಾದೀತೆಂದು ಸರದಾರ ಬಲದೇವಸಿಂಗರು ನುಡಿದರು. ಆದರೆ ಹಿಂದೀಯರು ಈಗ ಪ್ರತ್ಯೇಕ ಉಳಿಯಲಿಚ್ಛಿಸಿದರೂ ಆರ್ಥಿಕ ಹಾಗು ಭೌಗೋಲಿಕ ದೃಷ್ಟಿಯಿಂದ ಈ ಯೋಜನೆಯ ಸಹಾಯದಿಂದಾದರೂ ಮತ್ತೆ ಒಂದುಗೂಡುವ ಹಾರೈಕೆಯಿದೆಯೆಂದೂ ಅವರು ಅಭಿಪ್ರಾಯಪಟ್ಟರು.

ಸೀಮಾಸಮಿತಿಯಲ್ಲಿ ಸಂಯುಕ್ತ ರಾಷ್ಟ್ರಸಂಘದ ಪ್ರತಿನಿಧಿಗಳು

ಹಿಂದುಸ್ತಾನ ಮತ್ತು ಪಾಕಿಸ್ತಾನಗಳು ಒಬ್ಬರೇ ಗವರ್ನರಜನರಲ್ಲರನ್ನೊಪ್ಪದಿದ್ದರೆ

— ೧೩ ನೇ ಪುಟಕ್ಕೆ



ಅಮೇರಿಕೆಯ ಸನ್ನಾಹ

ಜಗತ್ತಿನಲ್ಲಿ ಅತಿ ಪ್ರಬಲ ರಾಷ್ಟ್ರವಾದ ಅಮೇರಿಕೆಗೆ ತನ್ನ ಶಕ್ತಿಸಾಲದೆಂದು ತೋರಹತ್ತಿದೆ. ಕೆಳೆದವಾರ ತನ್ನ ಶಕ್ತಿಯನ್ನು ಅಜಯ್ಯ ಮಾಡಿಕೊಳ್ಳಲು ಅದು ಕೆಲ ಯೋಜನೆಗಳನ್ನು ಮಾಡಿತು. ಅಮೇರಿಕೆ ಮುಂದಿನ ಯುದ್ಧಕ್ಕೆ ಮುಚ್ಚುಮರೆಯಿಲ್ಲದೆ ಸನ್ನಾಹ ಮಾಡಹತ್ತಿದೆ.

✻ ಅಧ್ಯಕ್ಷ ಟ್ರೂಮನ್ನರಿಗೆ ಅವರ ಸಲಹೆ ಸಮಿತಿ "ರಾಷ್ಟ್ರೀಯ ಸುರಕ್ಷಿತತೆ" ಯ ಬಗ್ಗೆ ವಿಸ್ತಾರವಾದ ಯೋಜನೆಯೊಂದನ್ನೊಪ್ಪಿಸಿದೆ. ಅದರಲ್ಲಿ ಅಮೇರಿಕೆಯ ೧೮ ವರ್ಷ ಮೇಲ್ಪಟ್ಟ ಯುವಕರಿಗೆಲ್ಲ ಸೈನಿಕ ಶಿಕ್ಷಣವನ್ನು ಕೊಡಬೇಕು; "ಆಕ್ರಮಣಮೂಲಕ ಆತ್ಮರಕ್ಷಣೆ" ಮಾಡಿಕೊಳ್ಳಲು ಸಮರ್ಥವಾದ ಪ್ರಚಂಡ ವಿಮಾನಪಡೆಯನ್ನು ಸಿದ್ಧಗೊಳಿಸಬೇಕು; ಮಹತ್ವದ ಕಾರಖಾನೆಗಳನ್ನು ವಿಕೇಂದ್ರೀಕರಿಸಬೇಕು ಇಲ್ಲವೆ ನೆಲಮಾಳಿಗೆಗಳಿಗೆ ವರ್ಗಾಯಿಸುವದೇ ಮೊದಲಾದ ಕ್ರಮಗಳಿಂದ ಸುರಕ್ಷಿತಗೊಳಿಸಬೇಕು ಎಂದು ಈ ವರದಿಯಲ್ಲಿ ಸೂಚಿಸಲಾಗಿದೆ.

ಈ ಸನ್ನಾಹಕ್ಕೆ ಕಾರಣ: ಆಕ್ರಮಣ ಮಾಡಬೇಕೆನ್ನುವವರಿಗೆ ಭಯವುಂಟು ಮಾಡುವಷ್ಟು ಪ್ರಚಂಡ ಶಕ್ತಿ ಅಮೇರಿಕೆಗೆ ಇದ್ದರೇನೆ ಯುಕ್ತರಾಷ್ಟ್ರ ಸಂಘದ ಸಾಮರ್ಥ್ಯದ ಬಗ್ಗೆ ಜಗತ್ತಿನಲ್ಲಿ ವಿಶ್ವಾಸ ಹುಟ್ಟೀತು. ಹೀಗೆ ಮಾಡುವದರಿಂದಲೇ ಜಗತ್ತಿನಲ್ಲಿ ಶಾಂತಿ ಉಳಿದೀತೆಂದು ಆ ಸಮಿತಿಯ ಹೇಳಿಕೆ.

ಹೆಸರಿಲ್ಲದ ಆ "ಆಕ್ರಮಣಶೀಲ"ನ ವಿರುದ್ಧ ಅಮೇರಿಕೆ ನಡೆಸುತ್ತಿರುವ ಸನ್ನಾಹಗಳಲ್ಲಿ ಇನ್ನು ಕೆಲವು:

✻ಪಶ್ಚಿಮಾರ್ಧಗೋಲ (ದಕ್ಷಿಣ ಅಮೇರಿಕೆ ಮತ್ತು ಉತ್ತರ ಅಮೇರಿಕೆಯ ಇತರ ರಾಷ್ಟ್ರಗಳು) ದ ರಾಷ್ಟ್ರಗಳಿಗೆ ಮಿಲಿಟರಿ ಸಹಾಯ ನೀಡುವದು; ಅವುಗಳ ಯುದ್ಧ ಸಾಮುಗ್ರಿಗಳನ್ನು ಒಂದೇ ಪ್ರಮಾಣದವುಗಳಾಗಿ ಪರಿವರ್ತಿಸುವದು (ಅಂದರೆ ಒಂದು ರಾಷ್ಟ್ರದ ಮದ್ದುಗುಂಡು ಮೊದಲಾದವು ಇನ್ನೊಂದರ ತೋಪು ತುಪಾಕಿ ಮೊದಲಾದವುಗಳಿಗೂ ಸರಿಹೋಗುವಂತೆ ಒಂದೇ ಆಕಾರಕ್ಕೆ ತರುವದು.) ಅಲ್ಲಿನ ಸೈನಿಕರಿಗೆ ಆಧುನಿಕ ಯುದ್ಧಶಿಕ್ಷಣ ಕೊಡುವದು; ಅವುಗಳಿಗೆ ಆರ್ಥಿಕ ಸಹಾಯ ನೀಡುವದು.

ಇವೆಲ್ಲ ಸಹಾಯಗಳನ್ನು ತಾರತಮ್ಯ "ಭೇದವಿಲ್ಲದೆ ಕೊಡಲಾಗುವದಿಲ್ಲೆಂದು ಸ್ಪಷ್ಟಗೊಳಿಸಲಾಗಿದೆ. ಅಂದರೆ ಆ ಹೆಸರಿಲ್ಲದ "ಆಕ್ರಮಣಶೀಲ" ನೊಡನೆ ಗೆಳೆತನ ಬಯಸುವವರಿಗೆ ಇದಾವದೂ ದೊರೆಯಲಾರದೆಂದರ್ಥ.

✻ಠಾಣೆಗಳ ಸ್ಥಾಪನೆ: ಶಾಂತಸಾಗರದಲ್ಲಿ ಮೊದಲೇ ಅಮೇರಿಕೆಯ ವಶದಲ್ಲಿದ್ದ ದ್ವೀಪಗಳಲ್ಲದೆ ಜಪಾನದಿಂದ ಕಸಿದುಕೊಂಡ ದ್ವೀಪಗಳಲ್ಲಿಯೂ ಪ್ರಬಲ ಠಾಣೆಗಳನ್ನು ಸ್ಥಾಪಿಸುವದು ನಡೆದಿದೆ. ಡೆನ್ಮಾರ್ಕಿಗೆ ಸೇರಿದ್ದು ೧೯೪೧ ರಲ್ಲಿ ಹಿಟ್ಲರನ ವಿರುದ್ಧ ಠಾಣೆಗಳನ್ನು ಸ್ಥಾಪಿಸಲು ಅಮೇರಿಕೆಗೆ ಒಪ್ಪಿಸಿದ್ದ ಗ್ರೀನಲ್ಯಾಂಡ್ ದ್ವೀಪದ ಮೇಲೆ ಶಾಶ್ವತ ಮಿಲಿಟರಿ ಠಾಣೆಯ ಹಕ್ಕನ್ನು ಅಮೇರಿಕೆ ಬೇಡುತಿದೆ.

✻ ಗೃಹರಂಗದಲ್ಲಿ ಕೂಲಿಕಾರರ ಚಳವಳಿಯಲ್ಲಿ ಕಮ್ಯುನಿಸ್ಟರ ಕೈವಾಡವಿದೆಯೆಂಬ ನೆವದಿಂದ ಆ ಚಳವಳಿಯನ್ನು ದುರ್ಬಲಗೊಳಿಸಲು ಕೂಲಿಕಾರ ವಿರೋಧಿ ಕಾಯಿದೆಗಳನ್ನು ಅಮೇರಿಕನ್ ಶಾಸನ ಸಭೆ ಜಾರಿಯಲ್ಲಿ ತರಲು ತಯಾರು ಮಾಡುತಿದೆ. ಆ ಮೂಲಕ ಸಂಪು ಹೂಡುವ ಅಧಿಕಾರಕ್ಕೆ ಅನೇಕ ಮಿತಿಗಳನ್ನು ಕಲ್ಪಿಸಬಹುದು. ಇದು ಅಮೇರಿಕನ್ ಬಂಡವಳಗಾರರ ಮನವಲಿದ ಕೆಲಸ. ಈ ಮಾದರಿಯನ್ನನುಸರಿಸಿ ಅಮೇರಿಕೆಯ ಉಭಯಖಂಡಗಳಲ್ಲೂ ಕೂಲಿಕಾರ ವಿರೋಧಿ ಕಾಯದೆಗಳು ಬರಬಹುದು.

ಇನ್ನೊಂದು ಬಂಡವಳಗಾರ ಮುಗ್ಗಟ್ಟು ?

ಈ ಸನ್ನಾಹಗಳನ್ನು ಬರಲಿರುವ ಆರ್ಥಿಕ ಘಟನೆಗಳೊಡನೆ ತೆಗೆದುಕೊಂಡರೆ ಹೆಚ್ಚು ಅರ್ಥವಾಗಬಹುದು:

ಬಂಡವಳಶಾಹಿ ಪದ್ಧತಿಯ ರಾಜ್ಯಗಳಲ್ಲಿ ಕಳೆದ ಯುದ್ಧಾನಂತರ ಬಂದಂತೆ ಈ ಬಾರಿಯೂ ದೊಡ್ಡ ಆರ್ಥಿಕ ಮುಗ್ಗಟ್ಟು ಬರುವದೆಂಬ ಸಾಮ್ಯವಾದಿಗಳ ವಾದ ಸತ್ಯವಾಗುವ ಲಕ್ಷಣಗಳು ಹೆಚ್ಚು ಹೆಚ್ಚು ನಿಚ್ಚಳವಾಗುತಿವೆ. ಅಮೇರಿಕೆಯಲ್ಲಿ ಈಗಾಗಲೆ ನಿರುದ್ಯೋಗ ಹೆಚ್ಚತೊಡಗಿದ್ದು ನಿರುದ್ಯೋಗಿಗಳ ಸಂಖ್ಯೆ ಬೇಗನೆ ೮೦ ಲಕ್ಷಕ್ಕೆ ಮುಟ್ಟಬಹುದೆಂದು ಭಯಪಡಲಾಗಿದೆ. ಗೃಹರಂಗದಲ್ಲೊದಗುವ ಮುಗ್ಗಟ್ಟಿನಿಂದ ಪಾರಾಗಲು ಬಂಡವಳಗಾರ ರಾಜ್ಯಗಳು ಹಿಟ್ಲರ ಜರ್ಮನಿನಂತೆ ಯುದ್ಧಗಳನ್ನು ಕೆದರುವದು ಸಹಜವೆಂದೂ ಸಾಮ್ಯವಾದಿಗಳು ಹೇಳುತ್ತಾರೆ. ಗೃಹರಂಗದ ಅಸಂತುಷ್ಟಿಯನ್ನು ಮರೆಸಲು ಬಂಡವಳಗಾರರಿಗೆ ಯುದ್ಧವೊಂದೇ ಹಾದಿ. ಅಧ್ಯಕ್ಷ ರೂಜವೆಲ್ಟರು ದೇಶವನ್ನು ಮುಗ್ಗಟ್ಟಿನಿಂದ ಪಾರುಮಾಡಲು ಶಾಂತಿಪೂರ್ಣ "ನ್ಯೂ ಡೀಲ" ಯೋಜನೆ ಮಾಡಿದ್ದರು. ಆದರೆ ಅಣುಬಾಂಬಿನಿಂದ ಉನ್ಮತ್ತವಾದ ಅಮೇರಿಕೆಗಿಂದು ಅದು ರುಚಿಸುವಂತೆ ತೋರುವದಿಲ್ಲ.

ಬ್ರಿಟಿಶ ಸರಕಾರದಲ್ಲಿ ವಿಶ್ವಾಸ

ಮಾರ್ಗೇಟನಲ್ಲಿ ಸೇರಿದ ಬ್ರಿಟಿಶ ಕೂಲಿಕಾರ ಸಮ್ಮೇಲನವೆಂಬದು ಬ್ರಿಟಿಶ ಕೂಲಿಕಾರ ಸರಕಾರಕ್ಕೊಂದು ಪ್ರಚಂಡ ವಿಜಯವೆಂದು ಹೇಳಲು ಯಾವ ಆತಂಕವೂ ಇಲ್ಲ. ಬ್ರಿಟಿಶ ಕೂಲಿಕಾರರಲ್ಲಿ ಅಧಿಕಾಂಶ ಜನರು ಬ್ರಿಟಿಶ ಸರಕಾರದ ಸ್ವದೇಶ ವಿದೇಶ ಧೋರಣೆಯಲ್ಲಿ ಅಚಲ ವಿಶ್ವಾಸವನ್ನು ವ್ಯಕ್ತಗೊಳಿಸಿದರೆಂದು ಹೇಳಬಹುದು.

✻ ಕೂಲಿಕಾರ ಸರಕಾರದವರು ಪಾರ್ಲಮೆಂಟಿನಲ್ಲಿ ತಂದಿರುವ ಸಾರ್ವತ್ರಿಕ ಯುದ್ಧಶಿಕ್ಷಣ ಮತ್ತು ಶಾಂತಿಕಾಲದ ಸೈನ್ಯ ಸಂಗ್ರಹದ ಮಸೂದೆಗೆ ಸಮ್ಮೇಲನದ ಬೆಂಬಲ ದೊರಕಿತು. ಈ ಮಸೂದೆಗೆ ಪಾರ್ಲಮೆಂಟಿನಲ್ಲಿ ಕೂಲಿಕಾರ ಸದಸ್ಯರಲ್ಲಿ ಕಡಿಮೆಯೆಂದರೆ ೧೦೦ ಜನರ ವಿರೋಧವಿತ್ತು.

✻ ರಾಷ್ಟ್ರೀಕರಣ ವಿಷಯದಲ್ಲಿ ನೆಲನೋಡಿ ಅಡಿಯಿಡುವ ಸರಕಾರಿ ಧೋರಣಕ್ಕೆ ಬೆಂಬಲ ಸಿಕ್ಕಿತು. ಸದ್ಯದ ಯೋಜನೆಯಂತೆ ಕಲ್ಲಿದ್ದಲಿ, ಉಕ್ಕು ಮೊದಲಾದ ಉದ್ಯೋಗಗಳ ರಾಷ್ಟ್ರೀಕರಣವಾದ ನಂತರ ದೇಶದ ಆರ್ಥಿಕ ಶಕ್ತಿಗೆ ಒಮ್ಮೆಲೆ ಧಕ್ಕೆ ತಾರದಂತೆ ರಾಷ್ಟ್ರೀಕರಣವನ್ನು ಸಾವಧಾನದಿಂದ ಮಾಡಬೇಕೆಂದು ಸರಕಾರದ ಅಭಿಪ್ರಾಯ. ಇಲ್ಲದಿದ್ದರೆ ಉತ್ಪಾದನೆ ಕುಗ್ಗಿ ತಿರುಗಿ ಕೂಲಿಕಾರರ ಮೇಲೆಯೆ ದುಷ್ಪರಿಣಾಮವಾಗಬಹುದೆಂಬದನ್ನು ಕೂಲಿಕಾರರು ಮನಗಂಡರು. ಅರ್ಥಾತ್ ಸಮಾಜದಲ್ಲಿಯ ಇತರ ವರ್ಗಗಳ, ಮುಖ್ಯವಾಗಿ ಮಧ್ಯಮ ವರ್ಗದ, ಬಗ್ಗೆ ಔದಾರ್ಯ ತೋರಿಸಿರೆಂದು ಸರಕಾರಿ ಪಕ್ಷದವರು ಕೇಳಿಕೊಂಡರು. ಅವರ ವಿರೋಧವನ್ನು ಒಮ್ಮೆಲೆ ಕಟ್ಟಿಕೊಂಡರೆ ಇಂದಿನ ಆರ್ಥಿಕ ಮುಗ್ಗಟ್ಟು ಬಿಗಿಯಾಗಿ ಕೂಲಿಕಾರ ಸರಕಾರದ ಹೆಸರು ಕೊಡಬಹುದು. ಈ ಮಾತು ಕೂಲಿಕಾರರಿಗೆ ಮನದಟ್ಟಾಯಿತು.

✻ ಎಲ್ಲಕ್ಕಿಂತ ಮಿಗಿಲಾಗಿ ಬೆವಿನ್ನರ ವಿದೇಶ ಧೋರಣೆಗೆ ಕೂಲಿಕಾರರ ಪ್ರಚಂಡ ಸಹಮತಿ ಸಿಕ್ಕಿತು. "ನನ್ನ ಧೋರಣೆಯ ಬಗ್ಗೆ ನಿಮ್ಮ ವಿಚಾರವನ್ನು ದಾಕ್ಷಿಣ್ಯವಿಲ್ಲದೆ ಹೇಳಿಬಿಡಿರಿ" ಎಂದು ಬೆವಿನ್ನರು ಕೇಳಿದರು. "ಅಮೇರಿಕೆಯೊಡನೆ ನಮ್ಮ ವಿದೇಶ ಧೋರಣೆಯನ್ನು ತಳಕು ಹಾಕಿಕೊಂಡರೆ ಬಂಡವಳಗಾರ ರಾಷ್ಟ್ರವಾದ ಅವಕ್ಕೊದಗುವ ಆರ್ಥಿಕ ಮುಗ್ಗಟ್ಟಿನ ಜಳ ನಮಗೂ ತಟ್ಟೀತು. ಅದ್ದರಿಂದ ನಮ್ಮಂತೆ ಸಾಮ್ಯವಾದಿಗಳಾದ ರಶಿಯಾ ಮೊದಲಾದವುಗಳೊಡನೆ ಹೆಚ್ಚು ಸಖ್ಯ ಬೆಳೆಸೋಣ" ಎಂದರು. ಬೆವಿನ್ ಧೋರಣೆಯ ಪ್ರಮುಖ ವಿರೋಧಿ ಝಿಲ್ಲಿಕಸ್ ಮೊದಲಾದವರು. ಆದರೆ ಬೆವಿನ್ನರ ಧೋರಣೆಗೆ ಹೇಳಿಕೊಳ್ಳುವ ವಿರೋಧ ತೋರಿಬರಲಿಲ್ಲ.

ಇಟೆಲಿಯಲ್ಲಿ ಕಮ್ಯುನಿಸ್ಟರಿಗೆ ಅರ್ಧಚಂದ್ರ

ಪಶ್ಚಿಮ ಯುರೋಪಿನ ಒಂದೊಂದೇ ರಾಷ್ಟ್ರದಲ್ಲಿ ಕಮ್ಯುನಿಸ್ಟರನ್ನು ಸರಕಾರದಿಂದ ಹೊರತಳ್ಳಲು ಪ್ರಾರಂಭವಾಗಿದೆ. ನಿನ್ನೆ ಫ್ರಾನ್ಸಿನಲ್ಲಾದುದು ಇಂದು ಇಟೆಲಿಯಲ್ಲಾಯಿತು. ಎರಡು ವಾರ ಹಿಂದೆ ತಮ್ಮ ಮಂತ್ರಿಮಂಡಲದ ರಾಜೀನಾಮೆಯನ್ನೊಪ್ಪಿಸಿದ್ದ ಕ್ರಿಶ್ಚಿಯನ್ ಡೆಮಾಕ್ರೆಟಿಕ್ ಪಕ್ಷದ ಮುಖ್ಯಮಂತ್ರಿ ಗಾಸ್ಪೇರಿಯವರು ಕಳೆದವಾರ ಕಮ್ಯುನಿಸ್ಟರನ್ನೂ ತೀವ್ರಗಾಮಿ ಸಾಮ್ಯವಾದಿಗಳನ್ನೂ ಹೊರಗಿಟ್ಟು ಕ್ರಿಶ್ಚಿಯನ್ ಡೆಮೋಕ್ರೆಟಿಕ ಒಂದೇ ಪಕ್ಷದ ಮಂತ್ರಿಮಂಡಲವನ್ನು ರಚಿಸಿದರು.

ಕ್ರಿಶ್ಚನ್ ಡೆಮಾಕ್ರೆಟಿಕ್ ಪಕ್ಷಕ್ಕೆ ೮೦ ಲಕ್ಷ ಮತದಾರರ ಬೆಂಬಲವಿದ್ದರೆ ಕೂಲಿಕಾರ ಚಳವಳಿಯನ್ನು ಹೆಚ್ಚು ಕಡಿಮೆ ಪೂರ್ತಿಯಾಗಿ ಕೈಲಿಟ್ಟುಕೊಂಡ ಕಮ್ಯುನಿಸ್ಟ್ ಮತ್ತು ತೀವ್ರಗಾಮಿ ಸಾಮ್ಯವಾದಿಗಳು ೯೦ ಲಕ್ಷ ಮತಗಳ ಬೆಂಬಲವುಳ್ಳವರು. ಆದರೆ ಅಮೇರಿಕನ್ ಅಧ್ಯಕ್ಷ ಟ್ರೂಮನ್ನರ ಕಮ್ಯುನಿಸ್ಟ್ ವಿರೋಧಿಗಳಿಗೆ ಸಹಾಯ ಮಾಡುವ ಧೋರಣೆಯ ಬೆಂಬಲ ಗಾಸ್ಪೇರಿಯವರಿಗಿತ್ತು. ಗಾಸ್ಪೇರಿಯವರನ್ನು ಈದಾರಿ ಹಿಡಿಸಿದ ಕಾರಣಗಳು ಹೀಗಿರಬಹುದು.

✻ ಯುದ್ಧವಿಧ್ವಸ್ತ ದೇಶಗಳಿಗೆ ಅಮೇರಿಕೆ ಕೊಡಮಾಡಿದ ೩೫ ಕೋಟಿ ಡಾಲರ ಸಹಾಯದಲ್ಲಿ ಇಟೆಲಿಗೂ ಪಾಲುದೊರೆಯುವದು—ಅದು ದೊರೆಯಬೇಕೆಂದರೆ ಕಮ್ಯುನಿಸ್ಟರನ್ನು ತಳ್ಳಿ ಹಾಕಬೇಕೆಂದು ಅಮೇರಿಕೆ ಸೂಚಿಸಿರಬಹುದು.

✻ ಯುಕ್ತರಾಷ್ಟ್ರ ಸಂಘದ ಸದಸ್ಯತ್ವಕ್ಕೆ ಇಟೆಲಿ ಅರ್ಜಿ ಹಾಕಿದೆ. ಅಮೇರಿಕನ್ನರ ಬೆಂಬಲವಿಲ್ಲದೆ ಅದು ಮಾನ್ಯವಾಗಲಿಕ್ಕಿಲ್ಲ.

✻ ಇಟೆಲಿಯ ಭೂಮಧ್ಯ ಸಮುದ್ರತೀರದ ವಸಾಹತುಗಳಾದ ಲೀಬಿಯಾ, ಎರಿಟ್ರಿಯಾ ಮತ್ತು ಇಟಾಲಿಯನ್ ಸೋಮಾಲಿಲ್ಯಾಂಡ ಇವುಗಳ ಮೇಲಿನ "ವಿಶ್ವಸ್ತಿಕೆ"ಯನ್ನು ತಾನೇ ಪಡೆಯಬೇಕೆಂದು ಇಟೆಲಿಯ ಹಂಚಿಕೆಯುಂಟು. ವಿಶ್ವಸ್ತಿಕೆ ಇಟೆಲಿಗೆ ಸೇರುವದು ಅನ್ಯಾಯ ಅದನ್ನು ಚತುರ್‍ರಾಷ್ಟ್ರ ವಿಶ್ವಸ್ತಿಕೆಗೊಪ್ಪಿಸಬೇಕೆಂದು ರಶಿಯಾ ವಾದಿಸುತ್ತದೆ. ಹೀಗೆ ಮಾಡಿದರೆ ಭೂಮಧ್ಯ ಸಮುದ್ರದಲ್ಲಿ ರಶಿಯಾಕ್ಕೆ ಮೂಗು ಹಾಕಲು ಅಸ್ಪದ ದೊರೆತೀತೆಂದು ಅಮೇರಿಕೆ ಬ್ರಿಟನ್‌ಗಳು ಅದನ್ನು ವಿರೋಧಿಸಬಹುದು. ಈ ತಿಕ್ಕಾಟದಲ್ಲಿ ಇಟೆಲಿಗೆ ಅಮೇರಿಕನ್ ಬೆಂಬಲವಿದ್ದರೆ ಅದರ ಕಸಿದುಕೊಳ್ಳಲ್ಪಟ್ಟ ವಸಾಹತುಗಳು ತಿರುಗಿ ದೊರೆಯುವ ಆಸೆ ಅದಕ್ಕಿದೆ.

ಹಂಗೆರಿಯಲ್ಲಿ ಬದಲಾವಣೆ

ಇದರ ಪ್ರತಿಕ್ರಿಯೆಯೋ ಎಂಬಂತೆ ಅನತಿದೂರದಲ್ಲಿರುವ ಹಂಗೆರಿಯಲ್ಲಿಯೂ ಸರಕಾರದಲ್ಲಿ ಬದಲಾವಣೆಗಳಾದವು. ರಜೆಯ ಮೇಲೆ ಸ್ವಿಝರ್ಲಂಡಿಗೆ ಹೋಗಿದ್ದ ಮುಖ್ಯ ಮಂತ್ರಿ ಫೆರೆಂಕ ನಾಗಿ ಅಲ್ಲಿಂದಲೆ ತನ್ನ ಪದವಿಗೆ ರಾಜೀನಾಮೆ ಕಳಿಸಿದ. ಈಗಿನ ಯುದ್ಧಮಂತ್ರಿ ಲಾಜಾಸ ಡಿನ್ನೀಸನು ಹೊಸ ಮಂತ್ರಿ ಮಂಡಲ ರಚಿಸಲು ಅಧಿಕಾರ ಪಡೆದಿದ್ದಾನೆ. ಇದಿ ಕಾರ್ಯವನ್ನು ಬಹಳ ಸುಲಭವಾಗಿ ಸಾಧಿಸಲಾಯಿತು: ಹಂಗೆರಿಯನ್ನು ಆಕ್ರಮಿಸಿರುವ ರಶಿಯನ್ ಸೇನೆ ಕಮ್ಯುನಿಸ್ಟ್ ವಿರೋಧಿ ಚಿಕ್ಕ ಜಮೀನದಾರರ ಪಕ್ಷದ ಕಾರ್ಯದರ್ಶಿಯನ್ನು ಬಂಧಿಸಿತು. ಜಪ್ತ ಮಾಡಲಾದ ಕಾಗದಪತ್ರಗಳಿಂದ ಮುಖ್ಯಮಂತ್ರಿ ನಾಗಿಯೂ "ಹಂಗೇರಿಯನ್ ಪ್ರಜಾತಂತ್ರ"ದ ವಿರುದ್ಧ ಹೂಡಲಾದ ಒಳಸಂಚಿನಲ್ಲಿ ಸೇರಿದ್ದು ತಿಳಿದುಬಂತೆಂದು ರಶಿಯನ್ನರು ಪ್ರಸಿದ್ಧಿಸಿದರು. ಇಷ್ಟರಿಂದಲೆ ಸ್ವಿಝರ್ಲಂಡಿನಿಂದ ನಾಗಿ ತನ್ನ ರಾಜೀನಾಮೆ ಕಳಿಸಿದ. ಇದಕ್ಕೆ ಪ್ರತಿಯಾಗಿ ಅವನ ೫ ವರ್ಷದ ಮಗ ಮತ್ತು ಕೌಟುಂಬಿಕ ಸಂಪತ್ತಿಯನ್ನು ಅವನಿದ್ದಲ್ಲಿಗೆ ಕಳಿಸಲಾಯಿತು. ಇನ್ನು ಕಮ್ಯುನಿಸ್ಟರ ಅವಿಚ್ಛಿನ್ನ ಪ್ರಭಾವವುಳ್ಳ ಮಂತ್ರಿಮಂಡಲ ಸ್ಥಾಪಿಸಲ್ಪಡುವದೆಂದು ಭಾವಿಸಲಾಗಿದೆ.

ಇದರಿಂದ ಹಂಗೆರಿಯಲ್ಲಿನ ಪ್ರಜಾತಂತ್ರವನ್ನು ಕೊಂದು ರಶಿಯನ್ನರು ಆ ದೇಶವನ್ನು ಪೋಲಂಡ, ಬಲ್ಗೇರಿಯಾ, ರುಮಾನಿಯಾ, ಯುಗೊಸ್ಲಾವಿಯಾ, ಅಲ್ಬೇನಿಯಾಗಳಂತೆ ರಶಿಯನ್ ಪ್ರಭಾವದಲ್ಲಿ ಕೆಡಹಿದಂತಾಯಿತೆಂದು ಅಮೇರಿಕನ್ನರು ವಾದಿಸುತ್ತಾರೆ. ಹಂಗೆರಿಗೆ ಕೊಟ್ಟಿದ್ದ ಸಾಲವನ್ನು ಅಮೇರಿಕೆ ತಡೆಹಿಡಿದು ತನ್ನ ಡಾಲರ ಶಕ್ತಿಯ ಕೈ ತೋರಿಸಲು ಮರೆಯಲಿಲ್ಲ.

ತುರ್ಕಿಯ ಭಯ

ಕಳೆದ ವಾರ ತುರ್ಕಿಯ ಮುಖ್ಯ ಮಂತ್ರಿ ರಿಸೆಪ ಪೆಕರರು ತುರ್ಕಿಯ ಪಾರ್ಲಿಮೆಂಟಿನಲ್ಲಿ "ಯಾವುದೋ ಒಂದು ರಾಷ್ಟ್ರ" ತುರ್ಕಿಯಲ್ಲಿ ಠಾಣೆಗಳನ್ನು ಬೇಡಿ ಒಂದು ರಾಯಸ ಕಳಿಸಿದೆಯೆಂದು ತಿಳಿಸಿದರು. "ಉಭಯ ಸಾಮಾನ್ಯ ಸಂರಕ್ಷಣ ವ್ಯವಸ್ಥೆಗಾಗಿ" ಎಂಬ ನೆವದಿಂದ ಈ ಬೇಡಿಕೆ ಮುಂದೊಡ್ಡಲ್ಪಟ್ಟಿದ್ದರೂ ಇದರಿಂದ ತುರ್ಕಿಯ ಸುರಕ್ಷಿತತೆಗೆ ಗಂಡಾಂತರವುಂಟಾಗುವ ಪ್ರಸಂಗವುಂಟೆಂದು ಅವರು ಹೇಳಿದರು. ಅದು ಕಾರಣ ೧೯೪೦ ರಿಂದಲೂ ತುರ್ಕಿಯ ಕೆಲಭಾಗಗಳಲ್ಲಿ, ಮುಖ್ಯವಾಗಿ ಅದರ ಯುರೋಪಿಯನ್ ಭಾಗದಲ್ಲಿ, ಸಾರಲ್ಪಟ್ಟಿರುವ "ಮುತ್ತಿಗೆಯ ಪರಿಸ್ಥಿತಿ"ಯನ್ನು ಹಾಗೆಯೆ ಸಾಗಿಸಿಕೊಂಡು ಹೋಗಬೇಕೆಂದು ನಿರ್ಧರಿಸಲ್ಪಟ್ಟಿತು. "ನಮ್ಮ ರಾಜ್ಯದೊಳಗೆ ಯಾವಾಗ ಪರಕೀಯ ಸೈನ್ಯಗಳು ನುಗ್ಗುವವೆಂಬ ಭಯವುವಿಲ್ಲ" ಎಂದು ಹೇಳಿದರು ಮುಖ್ಯ ಮಂತ್ರಿ. ಮೇಲೆ ಹೇಳಿದ "ಯಾವುದೋ ಒಂದು ರಾಷ್ಟ್ರ" ಎಂದರೆ ರಶಿಯಾ ಎಂದು ಬೇರೆ ಹೇಳಬೇಕಿಲ್ಲ. ಕಳೆದ ವರ್ಷ ಎಪ್ರಿಲದಲ್ಲಿ ಠಾಣೆಗಳನ್ನೂ ಅಗಸ್ಟ ಸಪ್ಟೆಂಬರಗಳಲ್ಲಿ ಡಾರ್ಡೆನೆಲ್ಸ ಜಲಸಂಧಿಯ ರಕ್ಷಣೆಯಲ್ಲಿ ಪಾಲನ್ನೂ ಬೇಡಿ ರಾಯಸಗಳನ್ನು ಕಳಿಸಿದ ರಾಷ್ಟ್ರ ಅದೇ ಎಂದು ಗೊತ್ತಾಗಿದೆ. ರಶಿಯಾದ ವಿರುದ್ಧ ಸಂರಕ್ಷಣೆ ಮಾಡಿಕೊಳ್ಳಲು ಅಮೇರಿಕೆ ತುರ್ಕಿಗೆ ಯುದ್ಧಸಾಮುಗ್ರಿ ಮತ್ತು ಹಡಗಗಳನ್ನು ಕೊಡಲು ನಿರ್ಧರಿಸಿದೆ.

ಇಂಡೋನೇಶಿಯಾಕ್ಕೆ ಕೊನೆ ಮಾತು

ಇಂಡೋನೇಶಿಯಾ ಪ್ರಜಾರಾಜ್ಯಕ್ಕೆ ಡಚ್ ಸರಕಾರ ೧೪ ದಿನಗಳ ಅವಧಿ ಕೊಟ್ಟು ಕೊನೆ ಮಾತೊಂದನ್ನು ಕಳಿಸಿದೆ. ಅಷ್ಟರೊಳಗೆ ಅದನ್ನು ಸ್ವೀಕರಿಸದಿದ್ದರೆ "ಬೇರೆ ಮಾರ್ಗ" ಅನುಸರಿಸಬೇಕಾದೀತೆಂದು ಡಚ್ಚರ ಬೆದರಿಕೆ. ಈ ಕೊನೆ ಮಾತಿನಲ್ಲಿ ಇಂಡೋನೇಶಿಯಾದಲ್ಲಿ ಹೋರಾಟವನ್ನು ಕೊನೆಗೊಳಿಸಿ, ಶಾಂತಿ ಸುವ್ಯವಸ್ಥೆಗಳನ್ನುಂಟುಮಾಡಲು, ಮತ್ತು ದೇಶದ ಸಂರಕ್ಷಣ ವ್ಯವಸ್ಥೆ ಮಾಡಿ ಉಭಯ ಪಕ್ಷಗಳ ಸೈನ್ಯವನ್ನು ಕಡಿಮೆ ಮಾಡಲು ಮತ್ತು ವಿದೇಶ ವ್ಯಾಪಾರ ಹಾಗು ಆಹಾರ ಪೂರೈಕೆಯನ್ನು ವ್ಯವಸ್ಥಿತಗೊಳಿಸಲು ಸೂಚನೆಗಳು ಅಡಕವಾಗಿವೆ. ಇದಕ್ಕೋಸ್ಕರ ಬೇಗನೆ ಇಂಡೋನೇಶಿಯಾದ ಎಲ್ಲ ಘಟಕಗಳನ್ನು ಸೇರಿಸಿ ಸಂಯುಕ್ತ ತಾತ್ಪೂರ್ತಿಕ ಸರಕಾರ ಸ್ಥಾಪಿಸಬೇಕೆಂದೂ ಮಧ್ಯಕಾಲದಲ್ಲಿ ಇಂಡೋನೇಶಿಯಾದ ವಿದೇಶ ವ್ಯವಹಾರ ಡಚ್ಚರ ಕೈಲಿರಬೇಕೆಂದೂ ಅದರ ಸೂಚನೆ.

ಈ ಸೂಚನೆಗಳನ್ನು ಇಂಡೋನೇಶಿಯಾ ಪ್ರಜಾರಾಷ್ಟ್ರ ಒಪ್ಪುವದು ಸಂಶಯಾಸ್ಪದವಾಗಿದೆ. ವಿದೇಶ ನೀತಿ ಮತ್ತು ವಿದೇಶ ವ್ಯಾಪಾರದ ಅಧಿಕಾರ ಇಂಡೋನೇಶಿಯಾಕ್ಕೇ ಸೇರಬೇಕೆಂದು ಅದರ ವಾದ. ಮೇಲಾಗಿ ಪಶ್ಚಿಮ ಜಾವಾದಲ್ಲಿ ದಂಗೆಯೆದ್ದ ಪ್ರತ್ಯೇಕತಾವಾದಿಗಳು ತಾವು ಆಕ್ರಮಿಸಿದ ಪ್ರದೇಶವನ್ನು ಡಚ್ಚರ "ಸಂರಕ್ಷಣೆ" ಗೊಪ್ಪಿಸಿದ್ದರಿಂದ ಇಂಡೋನೇಶಿಯನ್ನರಲ್ಲಿ ಮತ್ತಷ್ಟು ಶಂಕೆ ಉತ್ಪನ್ನವಾಗಿದೆ. ಇದೆಲ್ಲ ಡಚ್ಚರದೇ ಕೈವಾಡವೆಂಬಲ್ಲಿ ಸಂಶಯವಿಲ್ಲ. ಈಗ ಇಂಡೋನೇಶಿಯಾದಲ್ಲಿ ಡಚ್ಚರ ೧೪೦,೦೦೦ ಸೈನ್ಯವಿರುವದರಿಂದ ಅವರ ದಿಟ್ಟತನ ಅಷ್ಟು ಬೆಳೆದಿದೆ. ಕಾಲುಕೆದರಿ ಜಗಳಾಡಲು ಅವರು ಸಿದ್ಧರಾದಂತಿದೆ.

× × ×

ಚುಟುಕು ಸುದ್ದಿ

ಪಾಲಿಸ್ತಾನ ಸತ್ಯಶೋಧಕ ಸಮಿತಿಯ ಪ್ರಥಮ ಸಭೆ ಜರಗಿ ವಿಚಾರಣೆಗಾಗಿ ಸದಸ್ಯರು ಪಾಲಿಸ್ತಾನಕ್ಕೆ ಹೊರಟಿದ್ದಾರೆ. ಹಿಂದುಸ್ತಾನದ ಪರವಾಗಿ ಸಮಿತಿಗೆ ಲಾಹೋರ ಹಾಯಕೋರ್ಟಿನ ನ್ಯಾಯಾಧೀಶರಾಗಿದ್ದ ಸರ್ ಅಬ್ದುರ್ರಹ್ಮಾನರು ನೇಮಿಸಲ್ಪಟ್ಟಿದ್ದಾರೆ. ಸಮಿತಿಗೆ ಸ್ವೀಡಿಶ ಪ್ರತಿನಿಧಿ ಅಧ್ಯಕ್ಷನಾಗಿ ಆರಿಸಲ್ಪಟ್ಟಿದ್ದಾನೆ.

× × ×

ರಶಿಯಾದಲ್ಲಿ ಮರಣ ದಂಡನೆಯನ್ನು ರದ್ದುಗೊಳಿಸಲಾಗಿದೆ. ಬದಲಿಗೆ ೨೫ ವರ್ಷ ಸಕ್ರಮ ಶಿಕ್ಷೆಯೇ ಪರಮಾವಧಿ ಶಿಕ್ಷೆಯೆಂದು ನಿರ್ಧರಿಸಲಾಗಿದೆ.

× × ×

ಚೀನದ ವರಿಷ್ಠ ಸಂಸ್ಥೆಯಾದ ಲೋಕ ರಾಜಕೀಯ ಸಮಿತಿಯವರು ಯುದ್ಧ ನಿಲ್ಲಿಸಿ ಶಾಂತಿಯಿಂದ ಚೀನದ ರಾಜಕೀಯ ಸಮಸ್ಯೆ ಬಿಡಿಸಲು ಮಾತುಕತೆ ನಡೆಸಲಿಕ್ಕೆ ಬರಬೇಕೆಂದು ಕಮ್ಯುನಿಸ್ಟರಿಗೆ ಬಿನ್ನವಿಸಿದ್ದಾರೆ.

× × ×

ಬ್ರಹ್ಮದೇಶ-ಹಿಂದುಸ್ತಾನ ಗಡಿಯಲ್ಲಿರುವ ಬ್ರಹ್ಮಕ್ಕೆ ಸೇರದ ಅರಾಕಾನ ಅರಣ್ಯದಲ್ಲಿ "ಪಾಕಿಸ್ತಾನ" ಚಳವಳಿ ಪ್ರಬಲನಾಗಿದ್ದು ಅರಾಜಕತೆ ಹಬ್ಬಿದೆ. ಅನೇಕ ಹಳ್ಳಿಗಳಿಗರು ಸಂಪು ಹೂಡಿದ್ದಾರೆ. ಅರಾಕಾನ ಭಾಗದಲ್ಲಿ ಮುಸ್ಲಿಮರ ಬಹುಮತವಿದೆ. ಅಲ್ಲಿ ಮುಸ್ಲಿಮರ ರಾಜ್ಯ ಸ್ಥಾಪಿಸುವದಾಗಿ ೧೯೪೩ ರಲ್ಲಿ ಬ್ರಿಟಿಶ ಸೇನಾನಾಯಕರು ಮಾತು ಕೊಟ್ಟಿದ್ದರೆಂದು ಹೇಳಲಾಗಿತ್ತು. ಪೂರ್ವ ಪಾಕಿಸ್ತಾನದಲ್ಲಿ ಅದನ್ನು ಸೇರಿಸಬೇಕೆಂದು ಚಿತಗಾಂವ ಮುಸ್ಲಿಂ ವಣಿಕ್ಸಂಘದವರು ಬೇಡಿದ್ದರು. ಆದರೆ ಬ್ರಹ್ಮದೇಶದ ಉಪಾಧ್ಯಕ್ಷ ಆಂಗಸಾನರು ಹಿಂದುಸ್ತಾನಕ್ಕೆ ಬಂದಿದ್ದಾಗ ಜಿನ್ನಾ ಸಾಹೇಬರು ಈ ಬೇಡಿಕೆಯನ್ನು ಬಿಟ್ಟುಕೊಟ್ಟಿದ್ದರು.

ನಾಲ್ಕು ಮಾತು — ರಂಗನಾಥ ದಿವಾಕರ

ಸೇವಾದಲದ ಪುರಾತನರು

ಕಾಂಗ್ರೆಸ್ ಸೇವಾದಲದ ಪುನರ್ರಚನೆ ನಡೆ ಬಂದಿನಿಂದ ಹಿಂದುಸ್ತಾನಿ ಸೇವಾದಲದ ಹಳೆಯ ಕಾರ್ಯಕರ್ತರನ್ನು ಡಾ. ಹರ್ಡೀಕರರು ಅಲ್ಲಲ್ಲಿ ಭೆಟ್ಟಿಯಾಗುತ್ತಿರುವರು. ಮೊನ್ನೆ ಬೆಂಗಳೂರಲ್ಲಿ ಶ್ರೀ ಭಾಷ್ಯಂರವರು ಅಲ್ಲಿಯ ಸೇವಾದಲದ 'ಪುರಾತನರನ್ನು' ಆಮಂತ್ರಿಸಿ ಡಾ. ಹರ್ಡೀಕರರನ್ನು ಹಾಗೂ ನನ್ನನ್ನು ಅಲ್ಲಿಗೆ ಕರೆದಿದ್ದರು. ೩೦ ಜನರಷ್ಟು ಬಂದಿರಬಹುದು. ದೈನಂದಿನದ ಹಾಗೂ ನೈಮಿತ್ತಿಕ ಸೇವಾದಲದ ಕಾರ್ಯವು ಸ್ಥಗಿತವಾಗಿ ಬಹಳ ದಿನಗಳಾಗಿ ಹೋಗಿದ್ದರೂ ಈ ಪುರಾತನರು ಈಗ ತಮ್ಮ ತಮ್ಮ ಉದ್ಯೋಗ ವ್ಯವಸಾಯದಲ್ಲಿ ತೊಡಗಿದ್ದರೂ ಸೇವಾದಲದ ಬಗ್ಗೆ ಅವರ ನಿಷ್ಠೆಯನ್ನು ನಿರೀಕ್ಷಿಸಿದರೆ ಅದು ಅತ್ಯಂತ ಶ್ಲಾಘ್ಯವೆಂದೇ ಹೇಳಬೇಕಾಗುವದು. ತಾವು ಡಾ. ಹರ್ಡೀಕರರ ನೇತೃತ್ವದಲ್ಲಿ ಸೇವಾದಲದ ಕಾರ್ಯವನ್ನು ಮಾಡಿದವರು ಎಂಬುದೊಂದು ಅಭಿಮಾನ ಅವರಲ್ಲಿ ತುಂಬಿ ತುಳುಕುತ್ತಿದೆ. ಅದಲ್ಲದೆ ತಾವು ತಮ್ಮ ಕೈಲಾದಷ್ಟು ಸೇವೆಯನ್ನು ಈಗಲೂ ಸಲ್ಲಿಸಬೇಕೆಂಬ ಆತುರ ಅವರೆಲ್ಲರಲ್ಲಿಯೂ ಕಂಡು ಬರುತ್ತಿದೆ. ಇದು ಬಹಳ ನಿಸ್ಸೃಹತೆಯುವಾದ ಮಾತು. ಸೇವಾದಲ ಕಾರ್ಯವು ಕೇಂದ್ರದಿಂದ ಅಂದರೆ ವರ್ಕಿಂಗ ಕಮಿಟಿಯವರಿಂದ ಅಥವಾ ಅಖಿಲ ಭಾರತೀಯ ಕಾಂಗ್ರೆಸ್ ಕಮಿಟಿಯಿಂದ ನಡೆಯಬೇಕು ಎಂಬುದು ಡಾ. ಹರ್ಡೀಕರರ ಹಟವಿತ್ತು. ಹಾಗೆ ನಡೆಯದೆ ಹೋದರೆ ಅದು ಸುವ್ಯವಸ್ಥಿತವಾಗಿ ನಡೆದು ರಾಷ್ಟ್ರದಲ್ಲಿ ಒಂದು ಪ್ರಚಂಡ ಶಕ್ತಿ ನಿರ್ಮಾಣವಾಗದು ಎಂಬುದೆ ಅವರ ಅಭಿಪ್ರಾಯ. ಆ ಅಭಿಪ್ರಾಯಕ್ಕೆ ಅಂಟಿಕೊಂಡೇ ಅವರು ಈ [illegible] ಕೇಂದ್ರದವರು ಮಾರ್ಗದರ್ಶನದ ಕೆಲಸವನ್ನು ಕೈಕೊಂಡದ್ದರಿಂದ ಸೇವಾದಲದ ಪುರಾತನರಿಗೆ ಆ ಕಾರ್ಯದಲ್ಲಿ ಪ್ರೋತ್ಸಾಹ ಕೊಡುವ ಕೆಲಸವನ್ನು ಅವರು ಕೈಕೊಂಡದ್ದು ಸ್ಪಷ್ಟವು. ಆದರೆ ಎಲ್ಲ ಕಡೆಗೆ ಅವರು ಹೋಗುವದು ಸಾಧ್ಯವಿಲ್ಲ. ಹೋದಾಗ ಹೋದಲ್ಲಿ ಎಲ್ಲರೂ ಕೂಡುವದೂ ಸಾಧ್ಯವಿಲ್ಲ. ಆದುದರಿಂದ ಯಾರೂ ಯಾರ ಹಾದಿಯನ್ನೂ ನೋಡದೆ ಈ 'ಪುರಾತನರು' ಕೂಡಲೆ ಸೇವಾದಲದ ಪುನರ್ರಚನೆಯ ಕಾರ್ಯದಲ್ಲಿ ಕಾಂಗ್ರೆಸ್ ಸಂಸ್ಥೆಗಳಿಗೆ ಸಹಾಯ ಮಾಡುವದು ಅತ್ಯಾವಶ್ಯಕ.

ಅತ್ಯಂತ ಸುಸಂಧಿ

ಈ ಕ್ಷಣಕ್ಕೆ ಇಡೀ ಹಿಂದುಸ್ತಾನದಲ್ಲಿ ಮೈಸೂರ ಸಂಸ್ಥಾನಕ್ಕೆ ಇದ್ದ ಸುಸಂಧಿ ಇನ್ನಾವ ಸಂಸ್ಥಾನಕ್ಕೂ ಇಲ್ಲ. ಮೈಸೂರು ಸಂಸ್ಥಾನವು ಸಾಧಾರಣವಾಗಿ ಕರ್ನಾಟಕದ ಅರ್ಧದಷ್ಟು ಇರುವದು. ಇಡೀ ಕರ್ನಾಟಕವು ಒಂದೇ ಒಂದು ಅಖಂಡ ಪ್ರಾಂತವಾಗಬೇಕೆಂದು ಹಾತೊರೆಯುತ್ತಿದೆ. ಇದೊಂದು ಕ್ಷಣಿಕ ಭಾವನೆಯಲ್ಲ. ದಾವಣಗೇರಿಯಲ್ಲಿ ಅಖಿಲ ಕರ್ನಾಟಕದ ಪ್ರತಿನಿಧಿಗಳೆಲ್ಲ ಕೂಡಿ ತಮ್ಮ ಸ್ಪಷ್ಟವಾದ ಅಭಿಮತವನ್ನು ವ್ಯಕ್ತಗೊಳಿಸಿ ಬಹಳ ದಿನಗಳಾಗಿ ಹೋದವು. ಈ ಮಹಾಕಾರ್ಯವನ್ನು ಸಾಧಿಸುವ ವಿಷಯದಲ್ಲಿ ಮೈಸೂರ ಸಂಸ್ಥಾನವು, ಅಲ್ಲಿಯ ರಾಜ್ಯಕರ್ತರು ಬಹಳ ದೊಡ್ಡ ಪಾತ್ರವನ್ನು ವಹಿಸಬಲ್ಲರು. ಈ ಮಾತನ್ನು ಸಾಧಿಸಿ ದಿಗಂತ ಕೀರ್ತಿಯನ್ನು ಪಡೆಯುವದಲ್ಲದೆ ಕರ್ನಾಟಕವೆಂಬ ದೊಡ್ಡ ಪ್ರಾಂತವನ್ನು ಕಟ್ಟಿ ಕನ್ನಡಿಗರಿಗೆ ಪ್ರತ್ಯಕ್ಷ ಲಾಭವನ್ನು ಕಲ್ಪಿಸಿಕೊಟ್ಟಂತಾಗುವದು ಹಾಗೂ ಬಹಳ ಮೇಲ್ತರಗತಿಯ ಮುತ್ಸದ್ದಿತನವನ್ನು ತೋರಿಸಿದಂತಾಗುವದು. ಆದರೆ ಹೀಗಾಗಬೇಕಾದರೆ ಮುಖ್ಯವಾಗಿ ಮೂರು ಮಾತುಗಳಾಗಬೇಕು— ದೂರ ದೃಷ್ಟಿಯಿಂದ ಅಖಂಡ ಏಕೀಕೃತ ಕರ್ನಾಟಕದ ದಿವ್ಯಚಿತ್ರವನ್ನು ಮೈಸೂರು ಮುತ್ಸದ್ದಿಗಳು ಕಾಣಬೇಕು, ಸಂಪೂರ್ಣ ಹೊಣೆಗಾರ ರಾಜ್ಯಪದ್ಧತಿಯನ್ನು ಮೈಸೂರಲ್ಲಿ ಸ್ಥಾಪಿಸಬೇಕು, ಮತ್ತು ಹಿಂದುಸ್ತಾನದ ಸಂಯುಕ್ತ ರಾಜ್ಯಘಟನೆಯಲ್ಲಿ ಭಾಗವಹಿಸುವ ಉದ್ದೇಶದಿಂದ ಘಟನಾ ಸಮಿತಿಗೆ ತಮ್ಮ ಪ್ರತಿನಿಧಿಗಳನ್ನು ಕಳಿಸಬೇಕು. ಈ ಮೂರು ಮಾತುಗಳನ್ನು ಮಾಡಿ ಇಡೀ ಕರ್ನಾಟಕವನ್ನು ಮೈಸೂರವರು ಆಮಂತ್ರಿಸಿ ಅಖಂಡ ಕರ್ನಾಟಕವನ್ನು ಕಟ್ಟುವ, ಬನ್ನಿರಿ ಎಂದು ಕೇಳಿಕೊಂಡರೆ ಪ್ರತಿಯೊಬ್ಬ ಕರ್ನಾಟಕಸ್ಥನು ತಾನು ಧನ್ಯನೆಂದು ತಿಳಿಯದೆ ಇರಲಾರನು. ಈ ವರೆಗೆ ಮೈಸೂರಿನ ರಾಜ್ಯಸೂತ್ರ ವಹಿಸಿದವರು ಕಾಲಹರಣ ಮಾಡಿದ್ದನ್ನು ನೋಡಿದರೆ ಇನ್ನೂ ಸದ್ಯದಲ್ಲಿ ಈ ಮೇಲಿನ ಮೂರು ಮಾತುಗಳನ್ನು ಅವರು ಸಕಾಲದಲ್ಲಿ ಮಾಡಿಯಾರು ಎಂದು ನಂಬಲು ಆಸ್ಪದವಿಲ್ಲ. ಆದುದರಿಂದ ಇನ್ನೂ ಈ ಪ್ರಶ್ನೆಯನ್ನು ಮೈಸೂರ ಪ್ರಜೆಗಳೇ ತಮ್ಮದಾಗಿ ಮಾಡಿಕೊಂಡು ಈ ಬಗ್ಗೆ ಹೋರಾಡಿ ಬಲಿದಾನ ಕೊಡಲು ಸಿದ್ಧರಾಗಲಿಕ್ಕೆ ಬೇಕು. ಒಂದು ವಿಶಿಷ್ಟವಾದರೂ ಸಮೀಪದ ದಿನಾಂಕವನ್ನು ನೇಮಿಸಿ ಅಷ್ಟರಲ್ಲಿ ಈ ಮೇಲಿನ ಮಾತುಗಳಾಗದೆ ಹೋದರೆ ತಾವು ನಿರ್ವಾಣಿಯ ಶಸ್ತ್ರವಾದ ಸತ್ಯಾಗ್ರಹವನ್ನು ಹೂಡುವೆವೆಂದು ಸಾರಬೇಕು. ಅಂದರೆ ಕೇವಲ ಮೈಸೂರಿನವರಷ್ಟೇ ಅಲ್ಲ. ಇಡೀ ಕರ್ನಾಟಕದವರೇ ಈ ಹೋರಾಟದಲ್ಲಿ ಭಾಗವಹಿಸಲು ಸಿದ್ಧರಾಗುವರೆಂಬಲ್ಲಿ ಸಂಶಯವಿಲ್ಲ.

ತಡವೇ ಅಪರಾಧ

ಮೈಸೂರು ಪಾಕಿಸ್ತಾನಕ್ಕೆ ಸೇರತಕ್ಕ ಸಂಸ್ಥಾನವಲ್ಲ. ಕೊನೆಯ ವರೆಗೆ ನಿರಂಕುಶವಾಗಿ ಆಳಬೇಕೆನ್ನುವ ರಾಜರಲ್ಲಿಲ್ಲ. ಕೇವಲ ಸೈನ್ಯಶಕ್ತಿಯಿಂದ ಸ್ವತಂತ್ರ ದೇಶವಾಗಿ ಉಳಿಯುವ ಸಾಮರ್ಥ್ಯ ಅದರಲ್ಲಿಲ್ಲ. ಹೀಗಿರಲು ಮೈಸೂರ ಸರಕಾರದವರು ಇನ್ನೂ ಘಟನಾ ಸಮಿತಿಗೆ ಪ್ರತಿನಿಧಿಗಳನ್ನು ಏಕೆ ಕಳಿಸಿಲ್ಲ? ಹೊಣೆಗಾರ ರಾಜ್ಯಪದ್ಧತಿಯನ್ನು ಅದೇಕೆ ಸ್ಥಾಪಿಸಿಲ್ಲ? ಸಂಯುಕ್ತ ರಾಜ್ಯಘಟನೆಯಲ್ಲಿ ತಾವು ಭಾಗ ವಹಿಸುವರೆಂದು ಏಕೆ ಜಾಹೀರಪಡಿಸಿಲ್ಲ? ಈ ಮೂರು ಪ್ರಶ್ನೆಗಳು ನಮ್ಮನ್ನೆದುರಿಸುವವು. ಈ ಮೂರೂ ಪ್ರಶ್ನೆಗಳಿಗೆ ಸಮಾಧಾನಕರವಾದ ಉತ್ತರವು ಸಿಕ್ಕುವದಿಲ್ಲ. ನೋಡುವಾ, ಮಾಡುವಾ, ಎಂದು ಅಲ್ಲಿಯ ಸಚಿವರಾದ ಅರ್ಕಾಟ ರಾಮಸ್ವಾಮಿಯವರು ಹೇಳುತ್ತಿರುವದು [illegible] 'ಕಾಲಹರಣಂ' ಎಂಬುದೊಂದು ನಾಣ್ಣುಡಿಯಿದೆ. ಅದೇ ಕಾಲಕ್ಕೆ 'ಶುಭಸ್ಯ ಶೀಘ್ರಂ' ಎಂಬ ನಾಣ್ಣುಡಿಯೂ ಇದೆ. ಶುಭವಾದುದನ್ನು ಮಾಡಲು ಮೈಸೂರ ಸರಕಾರದವರು ಹಿಂದೆ ಮುಂದೆ ನೋಡುತ್ತಿರುವದು ಸಂಶಯಕ್ಕೆ ಕಾರಣವಾಗಿದೆ. ಈಗಿನ ಸಂದರ್ಭದಲ್ಲಿ ತಡವೇ ತಪ್ಪು, ತಡಮಾಡುತ್ತಿರುವದೇ ಮಹಾಪರಾಧ ಎಂದು ಹೇಳಿದರೆ ತಪ್ಪಲ್ಲ. ಒಂದೊಪ್ಪತ್ತು ಮೈಸೂರನ್ನು ಸ್ವತಂತ್ರ ಮಾಡಬೇಕೆಂಬ ಭಾವನೆ ಶ್ರೀಮನ್ಮಹಾರಾಜರಲ್ಲಿದ್ದರೆ ಅದು ಕೂಡ ತಮ್ಮ ಪ್ರಜೆಗಳ ಬೆಂಬಲವಿಲ್ಲದೆ ಅವರು ಮಾಡುವದು ಸಾಧ್ಯವಿಲ್ಲ ಎಂಬುದನ್ನು ಅವರು ಅರಿತಿರುವರೊ ಇಲ್ಲವೊ! ಬನ್ನಿರಿ, ನಿಮಗೆ ಪೂರ್ಣ ಹೊಣೆಗಾರ ರಾಜ್ಯಪದ್ಧತಿ ಕೊಟ್ಟುಬಿಡುವ ನಾವೂ ನೀವೂ ಸ್ವತಂತ್ರರಿರುವ, ಎಂದರೆ ಮಾತ್ರ ಮೈಸೂರ ಪ್ರಜೆಗಳು ಈ ಮಾತನ್ನು ಯೋಚಿಸಲು ಸಿದ್ಧರಾಗಬಹುದು. ಆದರೆ ಈ ಯಾವ ವಿಚಾರಗಳನ್ನು ಸ್ಪಷ್ಟಗೊಳಿಸದೆ ಸುಮ್ಮನೆ ಕಾಲಹರಣ ಮಾಡುತ್ತಿರುವದನ್ನು ನೋಡಿದರೆ ಅತ್ಯಂತ ಆಶ್ಚರ್ಯವಾಗುತ್ತಿದೆ. ಅಲ್ಲಿಯ ಪ್ರಜೆಗಳಿಗಂತೂ ಇದೊಂದು ಅಸಹ್ಯವಾದ ಪರಿಸ್ಥಿತಿ ಎಂದೇ ಹೇಳಬಲ್ಲೆ.

ಹಿಂಸೆ ಅಹಿಂಸೆ

ಕೂಲಿಕಾರ ಕ್ಷೇತ್ರದಲ್ಲಿ ಕಾರ್ಯ ಕೊಡುವ ಕಾರ್ಯಕರ್ತರು ಹಿಂಸೆ ಅಹಿಂಸೆಯ ಬಗ್ಗೆ ಸ್ಪಷ್ಟಾಭಿಪ್ರಾಯವುಳ್ಳವರಿರುವದು ಅತ್ಯವಶ್ಯವು. ಯಾವದೇ ಸುಧಾರಿಸಿದ ಸಮಾಜವು ಅಹಿಂಸೆಯ ತಳಹದಿಯ ಮೇಲೆಯೆ ನಿಂತಿರುತ್ತದೆ. ಆಯಾ ಸಮಾಜದಲ್ಲಿಯ ವ್ಯಕ್ತಿಗಳು ಪರಸ್ಪರರ ಘಾತಪಾತ ಮಾಡದೆ ಜೀವಿಸಬೇಕು. ವಿರೋಧ, ಕಲಹ, ಮುಂತಾದವುಗಳು ಉಂಟಾದರೆ ಅವುಗಳನ್ನು ಕೋರ್ಟು ಕಚೇರಿಗಳ ಮುಖಾಂತರ ಬಗೆಹರಿಸಿಕೊಳ್ಳಬೇಕು, ಎಂಬ ಸಿದ್ಧಾಂತವು ಪ್ರತಿಯೊಂದು ಸಮಾಜದಲ್ಲಿಯೂ ಸ್ವೀಕೃತವಾದ ಒಂದು ಸಿದ್ಧಾಂತವು. ಹೀಗಿರುವಾಗ ಸಮಾಜದಲ್ಲಿಯ ಕೂಲಿಕಾರರೆಂಬ ಅಥವಾ ಶ್ರಮಜೀವಿಗಳೆಂಬ ಒಂದು ದೊಡ್ಡ ಗುಂಪನ್ನು ವ್ಯವಸ್ಥಿತ ರೀತಿಯಿಂದ, ಬಹಿರಂಗವಾಗಿ ಕ್ರಮಬದ್ಧವಾದ ಪದ್ಧತಿಯಿಂದ ಕಟ್ಟಬೇಕಾಗಿದ್ದರೆ, ಸಂಘಟಿಸಬೇಕಾಗಿದ್ದರೆ ಅದನ್ನು ನಾವು ಶಾಂತರೀತಿಯಿಂದಲೆ ಕಟ್ಟಬಲ್ಲೆವು ಎಂಬುದನ್ನು ಎಲ್ಲರೂ ಲಕ್ಷದಲ್ಲಿಡತಕ್ಕ ಸಂಗತಿಯಾಗಿದೆ. ಹೊಡೆತ ಬಡೆತದ ಭಯದಿಂದ ಇಲ್ಲವೆ ಮಾಲಿಕರನ್ನು ಕೊಲ್ಲುವ ಇಲ್ಲವೆ ಹೊಡೆಯುವ ಭಯದ ಆಧಾರದ ಮೇಲೆ ಯಾರಾದರೂ ಕೂಲಿಕಾರರ ಚಳವಳಿಯನ್ನು ಕಟ್ಟುವ ಪ್ರಯಾಸ ಮಾಡುತ್ತಿದ್ದರೆ ಅದು ವ್ಯರ್ಥವು, ಅಶಕ್ಯವು, ಭಂಗುರವು. ಸಂಪು, ಸತ್ಯಾಗ್ರಹ ಈ ನಿರ್ವಾಣಿಯ ಉಪಾಯಗಳು ಶಾಂತ ಉಪಾಯಗಳಲ್ಲಿಯೆ ಒಳಗೊಂಡಿರುವವು. ಹೊರತು ಇವು ಹಿಂಸಾತ್ಮಕ ಉಪಾಯಗಳಲ್ಲ. ಸಿಟ್ಟಿನ ಭರದಲ್ಲಿ ಇಲ್ಲವೆ ದ್ವೇಷೋದ್ರೇಕವಾದಾಗ ಹಲವರು ಕಟ್ಟು ಮೀರಿ ಹಿಂಸೆಮಾಡುವ ಮಾತು ಬೇರೆ, ಒಂದು ಚಳವಳಿಯನ್ನು ಹಿಂಸೆಯ ತಳಹದಿಯ ಮೇಲೆ ಕಟ್ಟುವ ಮಾತು ಬೇರೆ. ಆದುದರಿಂದ ಪ್ರತಿಯೊಬ್ಬ ಕೂಲಿಕಾರ ಕಾರ್ಯಕರ್ತನು ಈ ವಿಷಯವನ್ನು ಪರಿಶೀಲಿಸಿ ಹಿಂಸೆಯು ತ್ಯಾಜ್ಯವೆಂಬ ನಿರ್ಧಾರವನ್ನು ದೃಢಪಡಿಸಿಕೊಳ್ಳಲಿಕ್ಕೆ ಬೇಕು.

ಕೂಲಿಕಾರ ಕಾರ್ಯಕರ್ತರು

ಕೂಲಿಕಾರರ ಕ್ಷೇತ್ರ ಎಂಬುದು ಬಹಳ ದೊಡ್ಡ ಕ್ಷೇತ್ರ. ಬೇಸಾಯದ(ಅ್ಯಗ್ರಿಕಲ್ಚರಲ್) ಕೂಲಿಕಾರರ ಸಂಖ್ಯೆಯನ್ನು ಕೂಡಿಸಿದರಂತೂ ಹಿಂದುಸ್ತಾನದ ಕೂಲಿಕಾರರ ಸಂಖ್ಯೆ ಕೋಟಿಗಟ್ಟಲೆ ಆಗುವದು. ಬೇಸಾಯದ ಕೂಲಿಕಾರರಲ್ಲಿ ಸದ್ಯಕ್ಕೆ ಯಾವ ಸಂಘಟನೆಯೂ ಇಲ್ಲ. ಆ ಕೆಲಸವೂ ನಡೆಯಲಿಕ್ಕೆ ಬೇಕು. ರಾಷ್ಟ್ರೀಯ ಮಜೂರ ಕಾಂಗ್ರೆಸ್ಸಿನವರು ಆ ಕೆಲಸವನ್ನೂ ಕೈಕೊಳ್ಳಬೇಕೆಂದು ನಿರ್ಧರಿಸಿರುವರು. ಸದ್ಯಕ್ಕೆ ಕೇವಲ ಔದ್ಯೋಗಿಕ ರಂಗದಲ್ಲಿ ಕೆಲಸ ಮಾಡುತ್ತಿರುವ (ಇಂಡಸ್ಟ್ರಿಯಲ್ ಲೇಬರ) ಕೂಲಿಕಾರರನ್ನು ಅನುಲಕ್ಷಿಸಿದರೂ ಅವರ ಸಂಖ್ಯೆ ಲಕ್ಷಾಂತರವಿರುವದು. ಕರ್ನಾಟಕ ಪ್ರಾಂತದ ವಿಷಯವನ್ನು ನೋಡಿದರೆ ಇಲ್ಲಿ ಸುಮಾರು ೧೨೫೦೦೦ ದಷ್ಟು ಔದ್ಯೋಗಿಕ ಕೂಲಿಕಾರರಿರುವರು. ಅಲ್ಲಿ ಇಲ್ಲಿ ನಡೆಯುತ್ತಿರುವ ಬೀಡಿ ಕಟ್ಟುವ ಇಲ್ಲವೆ ಇತರ ಸಣ್ಣ ಪುಟ್ಟ ಉದ್ಯೋಗಗಳನ್ನು ಲೆಕ್ಕಕ್ಕೆ ಹಿಡಿದರೆ ೨ ಲಕ್ಷದ ವರೆಗೆ ಸಂಖ್ಯೆ ಆದೀತು. ವಿವಿಧ ಉದ್ಯೋಗಗಳಲ್ಲಿ ತೊಡಗಿದ ಈ ಕೂಲಿಕಾರ ಬಾಂಧವರ ಸಂಘಟನೆಯನ್ನು ಭದ್ರವಾದ ತಳಹದಿಯ ಮೇಲೆ ಮಾಡುವದು ಅವಶ್ಯವು. ಹಾಗೆ ಮಾಡುವದು ಕೇವಲ ಹಂಗಾಮಿ ಕಾರ್ಯಕರ್ತರಿಂದ ಆಗದು. ಅದೇ ಕೆಲಸ ಮಾಡುವ ಉದ್ದೇಶದಿಂದ ತಮ್ಮ ಜೀವನವನ್ನೇ ಮೀಸಲಿಡುವ ತರುಣ ಕಾರ್ಯಕರ್ತರು ಈ ಕೆಲಸಕ್ಕೆ ಕೈಹಾಕಲಿಕ್ಕೆ [illegible] ಲಿಕ್ಕೆ ಬೇಕು. ಇದಲ್ಲದೆ ಅವರಿಗೆ ಕಾಲಕಾಲಕ್ಕೆ ಯೋಗ್ಯವಾದ ಮಾರ್ಗದರ್ಶನವು ದೊರೆಯಲಿಕ್ಕೆಬೇಕು. ಹೀಗೆ ಕೆಲಸವು ಆದರೆ ಮಾತ್ರ ಕರ್ನಾಟಕದಲ್ಲಿಯ ಕೂಲಿಕಾರರ ಸಂಘಟನೆಯು ಯೋಗ್ಯರೀತಿಯಿಂದ ನಡೆಯಬಲ್ಲದು. ಈ ವರೆಗೆ ಈ ಕೂಲಿಕಾರರ ಕ್ಷೇತ್ರದತ್ತ ಕಾಂಗ್ರೆಸ್ ಸಂಸ್ಥೆಯು ಎಷ್ಟು ಲಕ್ಷಗೊಡಬೇಕಿತ್ತೋ ಅಷ್ಟೊಂದು ಕೊಟ್ಟಿಲ್ಲವೆಂದರೆ ತಪ್ಪಾಗಲಿಕ್ಕಿಲ್ಲ. ಮೈಸೂರು ಕಾಂಗ್ರೆಸ್ ಕಾರ್ಯಕರ್ತರು ಈ ಮಾತಿಗೆ ಅಪವಾದವೆನ್ನಬಹುದು. ಏನೇ ಇರಲಿ. ಇನ್ನು ಮುಂದೆ ಆಸ್ಥೆ ವಹಿಸಬಲ್ಲ ತರುಣ ಕಾರ್ಯಕರ್ತರು ಈ ಕೆಲಸಕ್ಕೆ ಕೈಹಾಕುವದು ಅತ್ಯವಶ್ಯವೆಂದು ಹೇಳಬಲ್ಲೆನು.

ಮೈಸೂರಿನ ಶ್ರಮಜೀವಿಗಳು

ಕರ್ನಾಟಕದಲ್ಲಿ ಶ್ರಮಜೀವಿಗಳ ಸಂಖ್ಯೆ (ಇಂಡಸ್ಟ್ರಿಯಲ್ ಲೇಬರ) ಎಲ್ಲಕ್ಕೂ ಹೆಚ್ಚು ಇದ್ದುದು ಮೈಸೂರು ಸಂಸ್ಥಾನದಲ್ಲಿಯೆ. ಕೋಲಾರ ಗಣಿಗಳು, ಭದ್ರಾವತಿ, ಬೆಂಗಳೂರಲ್ಲಿಯ ಗಿರಣಿಗಳು, ಮಂಡ್ಯ, ಇವೆಲ್ಲವುಗಳಲ್ಲಿ ಕೂಡಿ ಸುಮಾರು ಒಂದು ಲಕ್ಷ ಜನ ಇರುವರು. ಅವರಲ್ಲಿ ತಮಿಳು ಬಹಳ. ಇದೊಂದು ಲಕ್ಷ್ಯದಲ್ಲಿಡತಕ್ಕ ಸಂಗತಿ. ೧೯೪೦ ರಿಂದೀಚೆಗೆ ಕಾಂಗ್ರೆಸ್ ಕಾರ್ಯಕರ್ತರು ವಿಶೇಷತಃ ಶ್ರೀ ಭಾಷ್ಯಂರವರ ನೇತೃತ್ವದಲ್ಲಿ ಶ್ರಮಜೀವಿಗಳ ಸಂಘಟನೆಗಾಗಿ ಚನ್ನಾಗಿ ಪ್ರಯತ್ನ ಪಡುತ್ತಿರುವರು. ಪ್ರತ್ಯಕ್ಷ ಕಾರ್ಯ ನಡೆಸುತ್ತಿರುವ ೩೫ ಯುನಿಯನ್ನುಗಳಾದರೂ ಈ ದಿನ ಅಲ್ಲಿ ಅಸ್ತಿತ್ವದಲ್ಲಿವೆ. ಹಲವು ಯುನಿಯನ್ನುಗಳನ್ನು ಬಿಟ್ಟರೆ ಉಳಿದವುಗಳೆಲ್ಲ ಆ ಸಂಸ್ಥಾನದಲ್ಲಿರುವ ಲೇಬರ ಫೆಡರೇಶನ್ನಿಗೆ ಸೇರಿಕೊಂಡಿವೆ. ಈ ಪ್ರಕಾರ ಆ ಸಂಸ್ಥಾನದಲ್ಲಿಯ ಕೂಲಿಕಾರರು ಎಷ್ಟೋ ಮಟ್ಟಿಗೆ ಸಂಘಟಿತ ಸ್ಥಾಯಿಯಲ್ಲಿರುವರು. ಈ ಮಾತು ಅಲ್ಲಿಯ ಕಾಂಗ್ರೆಸ ಕಾರ್ಯಕರ್ತರಿಗೂ ಶ್ರಮಜೀವಿಗಳಿಗೂ ಭೂಷಣಾಸ್ಪದವೇ ಇರುವದು. ಆದರೆ ಈಗ ಇಷ್ಟೇ ಸಾಲದು. ಅಲ್ಲಿಯ ಶ್ರಮಜೀವಿಗಳು ಹಾಗೂ ಅವರ ಮುಖಂಡರು ಮುಂದಿನ ಹೆಜ್ಜೆ ಇಡುವ ಸಂದರ್ಭ ಈಗ ಉಂಟಾಗಿದೆ. ಸುವ್ಯವಸ್ಥಿತವಾಗಿ ಯೋಗ್ಯ ಹಾಗೂ ಶಾಂತಿಮಯ ಮಾರ್ಗಗಳಿಂದ ಸಂಘಟನೆಯನ್ನು ಕಟ್ಟಿ ಕೂಲಿಕಾರರ ತಾತ್ಕಾಲಿಕ ಸಮಸ್ಯೆಗಳನ್ನು ಬಿಡಿಸುವದಲ್ಲದೆ ಶೋಷಣೆ ಇಲ್ಲದ ಹಾಗೂ ವ್ಯಕ್ತಿವಿಕಾಸಕ್ಕೆ ಪೂರ್ಣ ಅವಕಾಶವನ್ನು ಕೊಡಬಲ್ಲ ಒಂದು ಸಮಾಜವನ್ನು ನಿರ್ಮಿಸುವ ಮಹಾಕಾರ್ಯದಲ್ಲಿ ಮೈಸೂರು ಶ್ರಮಜೀವಿಗಳು ಇನ್ನು ಭಾಗವಹಿಸುವದು ಅವಶ್ಯ. ಆ ರೀತಿ ಕೆಲಸಮಾಡಲು ಅಖಿಲ ಹಿಂದುಸ್ತಾನದಲ್ಲಿ 'ರಾಷ್ಟ್ರೀಯ ಮಜೂರ ಕಾಂಗ್ರೆಸ್' ಎಂಬ ಸಂಸ್ಥೆ ಹುಟ್ಟಿದೆ. ಅದರ ಧ್ಯೇಯ ಧೋರಣೆಗಳನ್ನೆಲ್ಲ ಪರಿಶೀಲಿಸಿ, ವಿಮರ್ಶಿಸಿ ಅದಕ್ಕೆ ಹೊಂದಿಕೊಂಡು ನಡೆದರೆ ಅದರಿಂದ ಆ ಸಂಸ್ಥೆಯು ಬಲಪಡುವದಲ್ಲದೆ ಮೈಸೂರಿನಲ್ಲಿಯ ಶ್ರಮಜೀವಿಗಳ ಸಂಘಗಳಿಗೆ ಅಖಿಲ ಭಾರತೀಯ ಸಂಸ್ಥೆಯ ಬೆಂಬಲವು ಸಿಕ್ಕಿ ಅಲ್ಲಿಯ ಸಮಸ್ಯೆಗಳ ಪರಿಹಾರಕ್ಕೆ ದೊಡ್ಡ ಸಹಾಯವಾಗಬಲ್ಲದು.

ರಾಮದುರ್ಗದಲ್ಲಿ ಹೊಸ ರಾಜಕೀಯ ಘೋಷಣೆ

ರಾಮದುರ್ಗದ ಅಧಿಪತಿಗಳು ಜೂನ ೧ಕ್ಕೆ ಹೊಸಘಟನಾತ್ಮಕ ಸುಧಾರಣೆಗಳನ್ನು ಘೋಷಿಸಿದ್ದಾರೆ. ಅರಸರ ನೇತೃತ್ವದಲ್ಲಿ ಹೊಣೆಗಾರ ಸರಕಾರ ಸ್ಥಾಪಿಸುವ ಧ್ಯೇಯಕ್ಕನುಸಾರವಾಗಿ ರಾಜಕೀಯ ಪ್ರಗತಿಯನ್ನು ಹೆಚ್ಚಿಸಲು ಸಂಸ್ಥಾನದ ಪ್ರಾತಿನಿಧಿಕ ಶಾಸನ ಸಭೆಯಿಂದ ಚುನಾಯಿತ ಸದಸ್ಯರಲೊಬ್ಬರನ್ನು ಮಂತ್ರಿಯಾಗಿ ನೇಮಿಸಿಕೊಳ್ಳಲಾಗಿದೆ; ಮತ್ತು ಶಾಸನ ಸಭೆಗೆ ಹೆಚ್ಚಿನ ಆರ್ಥಿಕ ಅಧಿಕಾರವನ್ನು ಕೊಡಲಾಗಿದೆ.

ಸದ್ಯದ ಶಾಸನ ಸಭೆಯೇ ಉಳಿಯುವದೆಂದೂ ಹೊಸ ಚುನಾವಣೆಗಳನ್ನು ಹೂಡಲಾಗುವುದಿಲ್ಲವೆಂದೂ ಗೊತ್ತಾಗಿದೆ.

ಮಂತ್ರಿಮಂಡಲದಲ್ಲಿ ಮೂವರು ಮಂತ್ರಿಗಳನ್ನು ನೇಮಿಸಲಾಗುವುದು. ಈ ಮೂವರಲ್ಲಿ ಅಧ್ಯಕ್ಷರಾದ ದಿವಾಣರೊಬ್ಬರು. ಉಳಿದಿಬ್ಬರು ಶಾಸನ ಸಭೆಯ ಚುನಾಯಿತ ಸದಸ್ಯರೊಳಗಿಂದ ಆರಿಸಿ ನಿಯಮಿಸಲ್ಪಡುವರು. ಅವರು ಶಾಸನ ಸಭೆಗೆ ಹೊಣೆಗಾರರಾದರೂ ಅವರನ್ನು ತೆಗೆಯುವ ಅಧಿಕಾರ ಅರಸರಿಗಿದೆ. ಶಾಸನ ಸಭಾ ಸದಸ್ಯರು ಅವಿಶ್ವಾಸದ ಗೊತ್ತುವಳಿಯನ್ನು ಪಾಸು ಮಾಡಿದಾಗ ಅವರು ರಾಜೀನಾಮೆಯನ್ನು ಕೊಡಬೇಕಾಗುವುದು. ಅದನ್ನು ಒಬ್ಬ ಮಂತ್ರಿಯ ಮೇಲಾಗಲಿ ಇಡಿಯ ಮಂತ್ರಿಮಂಡಲದ ಮೇಲಾಗಲಿ ತರಬಹುದು. ಶಾಸನ ಸಭೆಯಲ್ಲಿ ವಿರೋಧ ಪಕ್ಷವಿದ್ದರೆ ಅದಕ್ಕೊಬ್ಬ ಧುರೀಣರಿರಬಹುದು.

ಶಾಸನಸಭೆಯಲ್ಲಿ ಒಟ್ಟು ೧೨ ಸದಸ್ಯರಿದ್ದಾರೆ. ಇದರಲ್ಲಿ ೮ ಜನರು ಪ್ರತಿನಿಧಿಗಳಿದ್ದು ೪ ಜನರು ಅರಸರಿಂದ ನಿಯಮಿಸಲ್ಪಟ್ಟವರು. ಮಂತ್ರಿಗಳ ವೇತನನಿರ್ಣಯವನ್ನು ಶಾಸನಸಭೆಯೇ ಮಾಡುವುದು. ಅಲ್ಲಿಯವರೆಗೆ [illegible] ಮಂತ್ರಿಗಳಿಗೆ ಕೊಡುತ್ತಿರುವ ವೇತನವನ್ನೇ ಅವರಿಗೂ ಕೊಡಲಾಗುವದು.

ಕಾಯಿದೆ ಮತ್ತು ಸುವ್ಯವಸ್ಥೆ, ಕಂದಾಯ, ಅರ್ಥಶಾಖೆ, ಆದಾಯಕರ, ಅಬಕಾರಿ, ನಿಯಂತ್ರಣಗಳು, ಉದ್ಯೋಗ, ವ್ಯಾಪಾರಗಳು, ಲೋಕೋಪಯೋಗಿ ಶಾಖೆ, ಸ್ಥಾನಿಕ ಸ್ವರಾಜ್ಯ, ಶಿಕ್ಷಣ, ಸಹಕಾರ, ಅರಣ್ಯ, ಗ್ರಾಮೋದ್ಧಾರ ಇವೆಲ್ಲ ಮಂತ್ರಿಗಳ ಅಧಿಕಾರಕಕ್ಷೆಯಲ್ಲಿ ಬರುತ್ತವೆ.

ಈ ಎಲ್ಲ ಸುಧಾರಣೆಗಳು ತಾ. ೧-೬-೪೭ ರಿಂದ ಜಾರಿಯಲ್ಲಿ ಬಂದಿವೆ.

ಮೇಲಿನ ಸುಧಾರಣೆಗಳು ಪ್ರಗತಿಶೀಲವಿವೆಯೆಂಬುದರಲ್ಲಿ ಸಂದೇಹವಿಲ್ಲ. ಶಾಸನಸಭೆಯ ನಿಯಮಿತ ಸದ್ಯರನ್ನು ಕ್ರಮೇಣ ಕಡಿಮೆ ಮಾಡಲಾಗುವದೆಂಬ ಆಶ್ವಾಸನ ದೊರೆತಿದೆ. ಆದರೆ ವಿದೇಶಸಂಬಂಧ, ಸಂರಕ್ಷಣೆ, ಗಂಡಾಂತರ ಪ್ರಸಂಗಗಳಲ್ಲಿ ಸುಗ್ರೀವಾಜ್ಞೆ ಹೊರಡಿಸುವುದು, ಶಾಸನಸಭೆಯ ಕಾಯಿದೆ ಬದಲಿಸುವುದು ಮುಂತಿದ್ದುವುದು, ಕೆಲವು ಉಚ್ಚಾಧಿಕಾರಿಗಳ ನೇಮಕ, ಖಾಸಗಿ ವೆಚ್ಚ, ಸ್ವಕಾರ್ಯಾರ್ಥ ಪ್ರವಾಸ ಇವೇ ಮೊದಲಾದ ಹಲವಾರು ಪ್ರಮುಖ ವಿಷಯಗಳ ಮೇಲಿನ ಅಧಿಕಾರವನ್ನು ಅರಸರು ಸ್ವಹಸ್ತದಲ್ಲಿಟ್ಟುಕೊಂಡಿರುವರು. ಸದ್ಯದ ಚುನಾಯಿತ ಮಂತ್ರಿಗಳಿಗೆ ಬ್ರಿಟಿಶ ಪ್ರಾಂತಗಳಲ್ಲಿಯ ಚುನಾಯಿತ ಮಂತ್ರಿಗಳಷ್ಟೇ ಅಧಿಕಾರ ದೊರೆಯಿತೇ ಬುದೇ ಸುಧಾರಣೆಗಳಿಂದಾದ ಪರಿಣಾಮದ ಸಾರಾಂಶ.

ಯುಕ್ತ ಪ್ರಾಂತದಲ್ಲಿ ಶಾಂತಿಯನ್ನು ಪ್ರಸ್ಥಾಪಿಸಬೇಕೆಂದು ಹಿಂದುಮಹಾಸಭೆಯವರು ಮಾಡಿಕೊಂಡ ಬಿನ್ನಹಕ್ಕೆ ಸರಕಾರದವರು ಮನ್ನಣೆ ಕೊಡದಿದ್ದರೆ ಅಗಷ್ಟ ೧ ರಿಂದ ಶಾಂತ ಆದರೆ ಪರಿಣಾಮಕರವಾದ ಪ್ರತ್ಯಕ್ಷ ಕ್ರಿಯೆಯನ್ನು ಪ್ರಾರಂಭಿಸುವದಾಗಿ ಹಿಂದುಮಹಾಸಭೆಯವರು ನಿರ್ಧರಿಸಿದ್ದಾರೆ.

× × ×

ರಶಿಯಾ—ಬ್ರಿಟನ್ ವ್ಯಾಪಾರ ಒಪ್ಪಂದದ ಮಾತುಕತೆ ಪ್ರಾರಂಭಿಸಬೇಕಾದರೆ ೫.೫ ಕೋಟಿ ಪೌಂಡು ಸಾಲ ಮನ್ನಾ [illegible] ಮಾಡಬೇಕೆಂದು ರಶಿಯಾ ಬ್ರಿಟನ್ನಿಗೆ ಕೇಳಿದೆ.

× × ×

ನಿಕರಾಗುವಾ (ದ. ಅಮೇರಿಕಾ) ದಲ್ಲಿ ಅಧ್ಯಕ್ಷ ಚುನಾವಣೆಯಾದ ೩ ವಾರದೊಳಗೆ ಹಿಂದಿನ ಅಧ್ಯಕ್ಷರ ನೇತೃತ್ವದಲ್ಲಿ ದಂಗೆಯುಂಟಾಗಿ ಒಂದು ಹಟಂಕನೆತ್ತರ ಸುರಿಸದ ಕ್ರಾಂತಿಯಾಯಿತು. ಬೇಗನೆ ಅಧ್ಯಕ್ಷಚುನಾವಣೆ ಆಗಲಿದೆ.

ಕರ್ಮವೀರ ಹರಿಜನ ಪುರವಣಿ

ನಾನು ಅದನ್ನು ಹೇಗೆ ಪ್ರಾರಂಭಿಸಿದೆ ?

ಕಳೆದ ವಾರ ನಾನು 'ಹರಿಜನ'ಕ್ಕಾಗಿ ಲೇಖ ಬರೆಯುವುದನ್ನು ಪ್ರಾರಂಭಿಸಿದೆನೆಂಬುದನ್ನು ವಾಚಕರು ಅರಿತಿರಲಿಕ್ಕೆ ಸಾಕು. ಎಷ್ಟು ದಿನಗಳ ವರೆಗೆ ನಾನು ಲೇಖ ಬರೆಯಬಲ್ಲೆನೆಂಬುದನ್ನು ನಾನರಿಯೆ. ಪರಮಾತ್ಮನ ಸಂಕಲ್ಪ ಇದ್ದಂತೆ ಆಗುವದು. ಉಳಿದ ವಿಷಯಗಳಲ್ಲಿಯಂತೆ ಇದರಲ್ಲಿಯೂ ಅವನ ಸಂಕಲ್ಪದಂತೆಯೆ ಎಲ್ಲವೂ ಜರಗುವದು.

ಆ ಬಗ್ಗೆ ನಾನು ವಿಚಾರ ಮಾಡಿದರೆ ಯಾವ ಪರಿಸ್ಥಿತಿಯಲ್ಲಿ ನಾನು 'ಹರಿಜನ'ಕ್ಕಾಗಿ ಬರೆಯುವುದನ್ನು ಬಿಟ್ಟೆನೊ ಆ ಪರಿಸ್ಥಿತಿಯಲ್ಲಿ ಈಗೇನೂ ಬದಲಾವಣೆಯಾಗಿಲ್ಲೆಂದು ಕಂಡುಬರುವದು. ಪ್ಯಾರೇಲಾಲಜಿಯವರು ನನ್ನಿಂದ ಬಹುದೂರ ಇರುವರು. ನವಖಾಲಿಯಲ್ಲಿ ಅವರು ಬಹಳ ಮಹತ್ವದ ಕೆಲಸವನ್ನು ಮಾಡುತ್ತಿರುವರೆಂದು ನನ್ನ ಅಭಿಪ್ರಾಯ. ನಾನು ಕರೆಯುತ್ತಿರುವ 'ಮಹಾಯಜ್ಞ'ದಲ್ಲಿ ಅವರು ಭಾಗವಹಿಸುತ್ತಿರುವರು. ಈ ಕೆಲಸ ಮಾಡುತ್ತಿದ್ದ ಇಂಗ್ಲಿಶ್ ಟಾಯಿಪಿಸ್ಟರಾದ ಪರಶುರಾಮಜಿಯವರು ಜೀವನಜಿಯವರಿಗೆ ಸಹಾಯ ಮಾಡುವದಕ್ಕಾಗಿ ತಾವಾಗಿಯೇ ಅಹಮದಾಬಾದಿಗೆ ಹೋಗಿರುವರು. ಕಾನು ಗಾಂಧಿ ಬಹಳ ಸಹಾಯಕನಾಗಿದ್ದ. ಆದರೆ ಅವನೂ ನವಖಾಲಿ ಮಹಾಯಜ್ಞದಲ್ಲಿ ಭಾಗವಹಿಸುತ್ತಿರುವನು. ಪರಿಸ್ಥಿತಿಗೋಸ್ಕರವಾಗಿ ಇಲ್ಲವೆ ಬೇರೆ ಕಾರಣಗಳಿಗಾಗಿ ಬಹುಶಃ ಉಳಿದ ಎಲ್ಲ ಸಹಾಯಕರೂ ಸಹಾಯ ಮಾಡಲು ಅಸಮರ್ಥರಾಗಿರುವರು. ಈ ಅನನುಕೂಲ ಪರಿಸ್ಥಿತಿಯಲ್ಲಿ 'ಹರಿಜನ'ಕ್ಕಾಗಿ ಮತ್ತೆ ಲೇಖ ಬರೆಯಲು ಪ್ರಾರಂಭಿಸುವದೆಂದರೆ ಸಾಮಾನ್ಯವಾಗಿ ಹುಚ್ಚುತನವೆಂದೇ ಹೇಳಬೇಕಾಗುವದು. ಆದರೆ ಸಾಮಾನ್ಯರ ದೃಷ್ಟಿಯಿಂದ ಅವ್ಯವಹಾರ್ಯವೆಂದು ತೋರುವದೆಲ್ಲ ದೈವೀ ಸಹಾಯದಿಂದ ಶಕ್ಯವಾಗುತ್ತದೆ. ಪರಮಾತ್ಮನು ಕಲಿಸಿದಂತೆ ನಾನು ಕಲಿಯುವೆನೆಂದು ನಂಬುತ್ತೇನೆ. ಇದೊಂದು ಬಗೆಯ ಮೋಹವಾಗಿದ್ದರೆ ನಾನದನ್ನು ಆದರಿಸುತ್ತೇನೆ.

ಅದಾವ ದೈವೀ ನೇತೃತ್ವವದು ? ಈ ಪ್ರಶ್ನೆಯ ಚರ್ಚೆ ನಾನು ಮಾಡಬಯಸುವೆ. ಆದರೆ ಇಂದು ಮಾತ್ರ ಅಲ್ಲ.

ನಮ್ಮೆಲ್ಲರಿಗೂ ಅತಿ ಮುಖ್ಯವಾದ ಪ್ರಶ್ನೆಯ ಚರ್ಚೆಯನ್ನು ಪ್ರತಿದಿನ ಸಾಯಂಕಾಲ ಪ್ರಾರ್ಥನಾನಂತರ ನಾನು ನಡೆಸುತ್ತೇನೆ. ಏಳು ದಿನಗಳ ನಂತರ ಅದೆಲ್ಲ ಬರೆಹ ವಾಚಕರ ಕೈಸೇರುವದು. ಸಮಸ್ಯೆಯ ಮಹತ್ವದ ದೃಷ್ಟಿಯಿಂದ ನೋಡಿದರೆ ಈ ಮಧ್ಯಂತರ ಅವಧಿ ಬಹಳ ಹೆಚ್ಚೆನಿಸುತ್ತದೆ. ಅದುದರಿಂದ ಸದ್ಯದಲ್ಲಿ ಈ ಪತ್ರಿಕೆಯಲ್ಲಿ ಶಾಶ್ವತ ಅಮೂಲ್ಯ ವಿಷಯಗಳನ್ನು ಸ್ಪಷ್ಟವಾಗಿ ಪ್ರತಿಪಾದಿಸಬಯಸುತ್ತೇನೆ. ಇಂಥ ಒಂದು ಅಮೂಲ್ಯ ವಿಷಯವೆಂದರೆ ಬ್ರಹ್ಮಚರ್ಯ. ಕ್ಷಣಿಕ ಮೂಲ್ಯದ ವಸ್ತುಗಳ ಬೆಂಬತ್ತಿ ಜಗತ್ತು ಧಾವಿಸುತ್ತಿದೆ. ಎರಡನೆಯದಕ್ಕೆ ಅದಕ್ಕೆ ಸಮಯವಿಲ್ಲ. ಆದರೂ ಯಾವನೊಬ್ಬನು ಸ್ವಲ್ಪ ಆಳವಾಗಿ ವಿಚಾರಿಸಿ ನೋಡಿದರೆ, ಶಾಶ್ವತವಾದ ವಿಷಯಗಳೆ ಕೊನೆಯಲ್ಲಿ ಮಹತ್ವದ್ದೆನಿಸುವವೆಂಬುದು ಸ್ಪಷ್ಟವಾಗುತ್ತದೆ.

ಬ್ರಹ್ಮಚರ್ಯವೆಂದರೇನು? ಬ್ರಹ್ಮ (ಪರಮಾತ್ಮ)ನ ಸಾಕ್ಷಾತ್ಕಾರಕ್ಕೆ ಸಹಾಯಕವಾಗುವ ಜೀವನರೀತಿಯೆ ಬ್ರಹ್ಮಚರ್ಯ. ಪುನರುತ್ಪತ್ತಿಯ ವಿಧಾನದ ಮೇಲೆ ಸಂಪೂರ್ಣ ನಿಗ್ರಹವೂ ಇದರಲ್ಲಿ ಅಡಕವಾಗುತ್ತದೆ. ವಿಚಾರ, ಮಾತು ಮತ್ತು ಕೃತಿಯಲ್ಲಿ ಈ ಸಂಯಮವಿರಲಿಕ್ಕೆ ಬೇಕು. ವಿಚಾರ ಸಂಯಮದಲ್ಲಿಲ್ಲದಿದ್ದರೆ ಉಳಿದೆರಡಕ್ಕೇನೂ ಮಹತ್ವವಿಲ್ಲ. ಹಿಂದುಸ್ತಾನಿಯಲ್ಲಿ 'ಶುದ್ಧಾಂತಃಕರಣದ ಮನೆಯಲ್ಲಿ ಗಂಗಾಮಾತೆಯ ಪವಿತ್ರ ಜಲವಿದೆ'ಯೆಂಬ ನಾಣ್ಣುಡಿಯುಂಟು. ಯಾವನ ವಿಚಾರ ಸಂಯಮದಲ್ಲಿದೆಯೊ ಅವನಿಗೆ ಉಳಿದುದು ಕೇವಲ ಹುಡುಗಾಟ. ನಾನು ಭಾವಿಸುವ ಬ್ರಹ್ಮಚಾರಿಯು ನಿರೋಗಿಯಾಗಿದ್ದು ಸಹಜವಾಗಿ ಬಹಳ ದಿನಗಳ ವರೆಗೆ ಬಾಳಬಲ್ಲನು. ತಲೆನೋವಿನಂಥ ಚಿಲ್ಲರೆ ಬೇನೆಯಿಂದ ಕೂಡ ಅವನು ಬಳಲಲಾರನು. ಮಾನಸಿಕ ಮತ್ತು ಶಾರೀರಕ ಕೆಲಸದಿಂದ ಅವನಿಗೆ ಸ್ವಲ್ಪವೂ ಶ್ರಮವೆನಿಸದು. ಅವನು ಯಾವಾಗಲೂ ಉತ್ಸಾಹಿಯೆ; ಎಂದೂ ಆಲಸಿಗನಲ್ಲ. ಬಾಹ್ಯ ಸ್ವಚ್ಛತೆ ಅಂತಃಶುದ್ಧಿಯ ನಿಜ ಪ್ರತಿಕೃತಿಯು. ಗೀತೆಯಲ್ಲಿ ಹೇಳಿದ ಸ್ಥಿತಪ್ರಜ್ಞನ ಗುಣಗಳೆಲ್ಲ ಅವನಲ್ಲಿ ಕಾಣಬರುವವು. ಈ ವ್ಯಾಖ್ಯೆಗೆ ಸರಿಹೋಗುವ ಒಬ್ಬ ಮನುಷ್ಯ ಕೂಡ ಸಿಕ್ಕದಿದ್ದರೂ ಹಳಹಳಿಸಬೇಕಿಲ್ಲ.

ಮಾನವರನ್ನು ನಿರ್ಮಿಸುವ ಸಾಮರ್ಥ್ಯವುಳ್ಳ ಮಹಾವೀರ್ಯವನ್ನು ಸಂಪೂರ್ಣವಾಗಿ ಸಂಗ್ರಹಿಸಿ ಊರ್ಧ್ವೀಕರಿಸುವ ಶಕ್ತಿ ಯಾವನಲ್ಲಿದೆಯೋ ಅವನಲ್ಲಿ ಮೇಲೆ ಉಲ್ಲೇಖಿಸಿದ ಗುಣಗಳೆಲ್ಲ ಇರುವವೆಂದು ಹೇಳುವಲ್ಲಿ ಆಶ್ಚರ್ಯವೇನು ? ಯಾವ ವೀರ್ಯದ ಒಂದು ಬಿಂದುವಿನಲ್ಲಿ ಮಾನವನನ್ನು ನಿರ್ಮಿಸುವ ಶಕ್ತಿಯಿದೆಯೋ ಅಂಥ ವೀರ್ಯದ ಉತ್ಪಾದಕ ಶಕ್ತಿಯನ್ನು ಯಾರು ಅಳೆಯಬಲ್ಲರು ? ಪಾತಂಜಲಿಯು ಪಂಚ ಸಂಯಮಗಳನ್ನು ವಿವೇಚಿಸಿದ್ದಾನೆ. ಅವುಗಳಲ್ಲಿ ಒಂದನ್ನೊಂದನ್ನು ಪ್ರತ್ಯೇಕಿಸಿ ಆಚರಣೆಯಲ್ಲಿ ತರುವದು ಶಕ್ಯವಿಲ್ಲ. ಸತ್ಯದಲ್ಲಿ ಉಳಿದ ನಾಲ್ಕೂ ಸಮಾವೇಶವಾಗುವದರಿಂದ ಅದನ್ನು ವಿನ್ಯಾಸಗೊಳಿಸಬಹುದು ಮತ್ತು ಈ ವಯಸ್ಸಿಗಾಗಿ ಈ ಐದನ್ನು ಹನ್ನೊಂದನ್ನಾಗಿ ಹೆಚ್ಚಿಸಲಾಗಿದೆ. ಆಚಾರ್ಯ ವಿನೋಬಾ ಅವರು ಮರಾಠಿ ಪದ್ಯವೊಂದರಲ್ಲಿ ಇವನ್ನೆಲ್ಲ ಸೇರಿಸಿರುವರು. ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹ, ಕಾಯಕ, ಜಿಹ್ವಾನಿಗ್ರಹ, ನಿರ್ಭಯ, ಅನ್ಯಧರ್ಮ ಗೌರವ, ಸ್ವದೇಶಿ ಮತ್ತು ಅಸ್ಪೃಶ್ಯೋದ್ಧಾರ.

ಇವನ್ನೆಲ್ಲ ಸತ್ಯದಿಂದಲೆ ನಿರ್ವಚಿಸಬಹುದಾಗಿದೆ. ಆದರೆ ಜೀವನವು ಸಂಕೀರ್ಣವಾಗಿದೆ. ಯಾವದೊಂದು ಮಹತ್ವವನ್ನು ವಿಶದವಾಗಿ ಹೇಳಿ ಉಳಿದವೆಲ್ಲ ತಾವಾಗಿಯೆ ಅನುಸರಣ ಮಾಡುವಂತೆ ಬಿಟ್ಟುಕೊಡುವದು ಶಕ್ಯವಿಲ್ಲ. ಪ್ರಮೇಯವೊಂದು ಗೊತ್ತಿದ್ದರೂ ಉಪಸಿದ್ಧಾಂತಗಳನ್ನೆಲ್ಲ ಮಾಡಿ ನೋಡಬೇಕಾಗುವದು.

ಇವೆಲ್ಲ ನಿಯಮಗಳು ಸಮಾನ ಮಹತ್ವದ್ದಿವೆಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಯಾವದೊಂದನ್ನು ಮುರಿದರೂ ಎಲ್ಲವೂ ಮುರಿಯುವವು. ಸತ್ಯ ಇಲ್ಲವೆ ಅಹಿಂಸೆಯ ಭಂಗ ಮಾಡಿದರೆ ಕ್ಷಮ್ಯವೆಂದು ನಮ್ಮೆಲ್ಲರಲ್ಲಿ ಒಂದು ಬಗೆಯ ಸಾಮಾನ್ಯ ನಂಬಿಕೆಯುಂಟು. ಅಸ್ತೇಯ ಮತ್ತು ಅಪರಿಗ್ರಹವನ್ನು ಕ್ವಚಿತ್ತಾಗಿ ಉಲ್ಲೇಖಿಸಲಾಗುತ್ತದೆ. ಇವನ್ನಾಚರಿಸುವ ಅವಶ್ಯಕತೆಯನ್ನೂ ನಾವು ಕ್ವಚಿತ್ತಾಗಿ ತಿಳಿದುಕೊಳ್ಳುತ್ತೇವೆ. ಆದರೆ ಕಾಲ್ಪನಿಕ ಬ್ರಹ್ಮಚರ್ಯದ ಭಂಗ ರೊಚ್ಚು ಮತ್ತು ಅದಕ್ಕಿಂತ ಹೆಚ್ಚಿನದನ್ನು ಉದ್ರೇಕಿಸುತ್ತದೆ. ಮೌಲ್ಯವನ್ನು ಹೆಚ್ಚಾಗಿ ಹಿಡಿಯುವ ಇಲ್ಲವೆ ಕಡಮೆಯಾಗಿ ತಿಳಿದುಕೊಳ್ಳುವ ಸಮಾಜ ಎಲ್ಲಿಯೋ ದೊಡ್ಡ ತಪ್ಪು ಮಾಡುತ್ತಿರಲಿಕ್ಕೆ ಬೇಕು. ಅಲ್ಲದೆ 'ಬ್ರಹ್ಮಚರ್ಯ' ಶಬ್ದವನ್ನು ಸಂಕುಚಿತಾರ್ಥದಲ್ಲಿ ಹೇಳುವದೆಂದರೆ ಅದರ ಮೌಲ್ಯವನ್ನು ಕಡಮೆ ಮಾಡಿದಂತೆಯೇ ಸೈ. ಈ ಬಗೆಯಾಗಿ ಮೌಲ್ಯವನ್ನು ಕಡಮೆ ಮಾಡುವದರಿಂದ ಯೋಗ್ಯ ಅನುಷ್ಠಾನದ ಅಡಚಣೆಯು ಹೆಚ್ಚುತ್ತದೆ. ಅದನ್ನು ಪ್ರತ್ಯೇಕಿಸಿದಾಗ ಪ್ರಾರಂಭಿಕ ಆಚರಣೆ ಅಶಕ್ಯವಾಗದಿದ್ದರೂ ಕಠಿನವಾಗುತ್ತದೆ. ಅದುದರಿಂದ ಎಲ್ಲ ನಿಯಮಗಳನ್ನೂ ಇಡಿಯಾಗಿ ಒಂದೇ ಎಂದು ಭಾವಿಸುವದು ಅವಶ್ಯವಾಗಿದೆ. ಇದರಿಂದ ಬ್ರಹ್ಮಚರ್ಯದ ಸಂಪೂರ್ಣ ಅರ್ಥ ಮತ್ತು ಮಹತ್ವವನ್ನು ತಿಳಿದುಕೊಳ್ಳಲಿಕ್ಕೆ ಅವಕಾಶವುಂಟಾಗುತ್ತದೆ.

ಹೊಸದಿಲ್ಲಿ ಮೋ. ಕ. ಗಾಂಧಿ
೩-೬-೧೯೪೭
(ಗುಜರಾಥಿಯಿಂದ ಅನುವಾದಿತ)

ದಿಲ್ಲಿಯಲ್ಲಿ

ದಿಲ್ಲಿಯ ಬೆವರು ಸುರಿಸುವ ಬಿಸಿಲಿನಲ್ಲಿ ಗಾಂಧೀಜಿ ಮೇ ೨೫ ನೇ ತಾರೀಕು ಪಂಡಿತ ನೆಹರುರವರ ಕರೆಯನ್ನನುಲಕ್ಷಿಸಿ ಬಂದರು. ಸರದಾರ ಮತ್ತು ಪಂಡಿತರಿಬ್ಬರೂ ಮಸೂರಿಗೆ ಅಲ್ಪಾವಧಿಯ ವಿಶ್ರಾಂತಿಗಾಗಿ ಹೋಗಿದ್ದರು. ಮಸೂರಿಗೆ ಬರಲು ಅವರಿಬ್ಬರೂ ಗಾಂಧೀಜಿಗೆ ತಂತಿಯನ್ನು ಕಳಿಸಿದ್ದರು. ನವಖಾಲಿ, ಬಿಹಾರ ಮತ್ತು ಕಲಕತ್ತೆಯಲ್ಲಿ ಎರಡೂ ಜಾತಿಗಳಲ್ಲಿ ಸ್ನೇಹಸಂಬಂಧವುಂಟಾಗುವ ವರೆಗೆ ಕಾರ್ಯಕ್ಷೇತ್ರವನ್ನು ಬಿಟ್ಟುಕೊಡುವದಿಲ್ಲೆಂದು ಗಾಂಧೀಜಿ ವಚನಬದ್ಧರಾದ್ದರಿಂದ ಅವರಿಗೆ ಮಸೂರಿಗೆ ಹೋಗುವದಾಗಲಿಲ್ಲ. ಕಳೆದ ತಿಂಗಳು ಮುಂಬಯಿಯಲ್ಲಿ ಒಂದು ಆಸ್ಪತ್ರೆಯಲ್ಲಿ ನಾನು ಬೇನೆಯಿಂದ ಬಳಲುತ್ತಿರುವಾಗ ಪಾಟಣಾದಲ್ಲಿಯ ಗಾಂಧೀಜಿಯ ಸಹಕಾರ್ಯಕರ್ತರೊಬ್ಬರು ನನ್ನನ್ನು ನೋಡಲು ಬಂದಿದ್ದರು. 'ಹೋದ ಹೋದಲ್ಲೆಲ್ಲ ಗಾಂಧೀಜಿ ತಮ್ಮ ಅನುಬಂಧಿಗಳನ್ನು ಅಲ್ಲಲ್ಲಿಯೆ ಬಿಟ್ಟು ಬರುತ್ತಿರುವರು' ಎಂದರವರು. ವಿನೋದದಿಂದ ನವಖಾಲಿಗೆ ತಮ್ಮನ್ನನುಸರಿಸಿ ಹೋದ ಪ್ಯಾರೆಲಾಲಜಿ ಮತ್ತು ಉಳಿದವರನ್ನು ಅಲ್ಲಿಯೆ ಅಲ್ಲೊತ್ತೆಯನ್ನಾಗಿ ಬಿಟ್ಟು ಬಂದರು. ಅವರು ದಿಲ್ಲಿಗೆ ಹೋದವಾಗೆಲ್ಲ ಬಿಹಾರಗಳಲ್ಲಿರುವ ನಮ್ಮನ್ನೆಲ್ಲ ಒತ್ತೆಯಾಗಿಟ್ಟು ಹೋಗುತ್ತಿರುವರು. ಯಾವದೊಂದು ಜಾಣಗಾರಿಕೆಯಿಂದ ಯಾವಾಗಲೂ ದೊಂಬಿ ಪ್ರದೇಶದಲ್ಲಿಯೆ ಇರಬಹುದಾದರೆ ಇರಬೇಕೆಂದ ಅವರ ಬಯಕೆ. ಚಾಂದಪುರದ ಖಾನರು ಮೊನ್ನೆ ದಿನ ದಿಲ್ಲಿಯಲ್ಲಿ ಗಾಂಧೀಜಿಯನ್ನು ಭೆಟ್ಟಿಯಾಗಲು ಬಂದಿದ್ದರು. 'ನಾನೇನು ಅವರನ್ನು ಬಿಟ್ಟುಹೋಗಿಲ್ಲೆಂದು ನವಖಾಲಿಯ ಜನರಿಗೆ ಹೇಳಿರಿ' ಎಂದಂದರವರು. ಶಕ್ಯವಿದಷ್ಟು ಬೇಗ ನಾನು ಮರಳುವೆ. ಉರುಳಿ, ಪಂಚಗಣಿ ನಿಸರ್ಗ ಚಿಕಿತ್ಸೆ ಟ್ರಸ್ಟಿನವರೂ ಟ್ರಸ್ಟಿನ ಹಿತಸಂಬಂಧದ ದೃಷ್ಟಿಯಿಂದ ಮತ್ತು ಸ್ವಂತ ಆರೋಗ್ಯದ ದೃಷ್ಟಿಯಿಂದ ಕೆಲಕಾಲ ಇಲ್ಲಿರಲು ಬನ್ನಿರೆಂದು ಗಾಂಧೀಜಿಗೆ ಒಂದೇ ಸವನೆ ಕೇಳಿಕೊಳ್ಳುತ್ತಿರುವರು. ಆದರವರು ನಿಶ್ಚಲರಾಗಿರುವರು. ನನ್ನ ಸೇವೆ ಇನ್ನೇನು ಅವಶ್ಯವಿಲ್ಲ ಎಂದು ನವಖಾಲಿ ಮತ್ತು ಬಿಹಾರದಲ್ಲಿಯ ಹಿಂದೂ-ಮುಸಲ್ಮಾನರೆಲ್ಲ ಮೊದಲು ನನಗೆ ಆಶ್ವಾಸನ ಕೊಡಲಿಕ್ಕೆ ಬೇಕು. ಆ ಬಳಿಕವೆ ನಾನು ವಿಶ್ರಾಂತಿಗಾಗಿ ಬೇರೆ ಕಡೆಗೆ ಹೋಗುವ ವಿಚಾರ ಮಾಡುವೆ" ಎಂದರು ಗಾಂಧೀಜಿ.

ದೇಶದಲ್ಲಿಯ ಘಟನೆಗಳಿಂದ ಅವರಿಗೆ ಬಲವಾದ ವ್ಯಸನವಾಗುತ್ತದೆ. ತಮ್ಮ ನಿತ್ಯದ ಪರಿವಾರದವರ ಸಹಾಯ ದೊರೆಯದಂತಾದ್ದರಿಂದ ಅವರು ಎರಡೂ ಬದಿಗಳಲ್ಲಿ ವೇಣಬತ್ತಿ ದೀಪಗಳನ್ನುರಿಸುತ್ತಿರುವರು. ಅವರು ತಮ್ಮ ಆರೋಗ್ಯ ಮತ್ತು ಜೀವನದ ಬಗ್ಗೆಯೂ ತೀರ ಉದಾರರಾಗಿದ್ದಾರೆ. "ಇಂದು ಪರಿವರ್ತನಗೊಳ್ಳುತ್ತಿರುವ ಹಿಂದುಸ್ತಾನದಲ್ಲಿರಲು ನನಗೆ ಸ್ಥಳವಿಲ್ಲ' ಎಂದರವರು. ಅವರ ಧ್ವನಿಯಲ್ಲಿ ಒಂದು ಬಗೆಯ ಸಂತಾಪ ಭಾವನೆಯಿದ್ದಿತು. '೧೨೫ ವರುಷ ಬಾಳಬೇಕೆಂಬ ಆಸೆಯನ್ನು ನಾನು ಬಿಟ್ಟುಗೊಟ್ಟಿರುವೆ' ಎಂದು ಮುಂದುವರಿದರವರು. "ಇನ್ನು ಒಂದು ಎರಡು ವರುಷ ನಾನು ಬಾಳಬಲ್ಲೆ. ಅದೊಂದು ವಿಷಯ ಬೇರೆ. ಇಂದಿನಂತೆ ಹಿಂದುಸ್ತಾನ ಹಿಂಸೆಯ ಮಡುವಿನಲ್ಲಿ ಮುಳುಗುವದಾದರೆ ಬದುಕಬೇಕೆಂಬ ಆಸೆಯೇನು ನನಗಿಲ್ಲ. ಜಾತೀಯ ಉನ್ಮಾದ ಎಲ್ಲೆಲ್ಲಿಯೂ ಹಬ್ಬಿದೆ. ಸೈನೀಕರಣ ಮತ್ತು ಔದ್ಯೋಗೀಕರಣದ ಮಾತು ನಡೆದಿವೆ. ಹಿಂದುಸ್ತಾನ ಪ್ರಥಮ ವರ್ಗದ ಸೈನಿಕ ರಾಷ್ಟ್ರವಾಗಿ ಪರಿಣಮಿಸಬಹುದು. ಪ್ರಚಂಡ ಪ್ರಮಾಣದಲ್ಲಿ ಹಿಂದುಸ್ತಾನದಲ್ಲಿ ಔದ್ಯೋಗೀಕರಣವೂ ಆಗಬಹುದು. ಆದರೆ ಇಂಥ ಹಿಂದುಸ್ತಾನದಲ್ಲಿ ಅಹಿಂಸೆಯ ಪ್ರತೀಕವಾದ ಗ್ರಾಮೋದ್ಯೋಗಗಳಿಗೆ ಇಲ್ಲವೆ ಖಾದಿಗೆ ಸ್ಥಾನವೆಲ್ಲಿದೆ?" ಹಳೆಯ ಆಶ್ರಮವಾಸಿಗಳೊಬ್ಬರಿಗೆ ಬರೆದ ಪತ್ರದಲ್ಲಿ ಗಾಂಧೀಜಿ 'ನಾನೀಗ ಜ್ವಾಲೆಗಳ ಮಧ್ಯದಲ್ಲಿರುವೆ. ಆ ಜ್ವಾಲೆ ನನ್ನನ್ನು ಭಸ್ಮ ಮಾಡದಿದ್ದುದು ಪರ

—೧೧ನೇ ಪುಟಕ್ಕೆ

ಪ್ರಶ್ನೆ ಪೆಟ್ಟಿಗೆ

ಅಹಿಂಸೆಯಲ್ಲಿ ಶ್ರದ್ಧೆಯ ದೃಢೀಕರಣ

[ಅಮೇರಿಕೆಯ ಯುನಾಯಟೆಡ್ ಪ್ರೆಸ್ಸಿನವರು ಗಾಂಧೀಜಿಯವರಿಗೆ ಕೇಳಿದ ಪ್ರಶ್ನೆಗಳಿಗೆ ಕೆಳಗಿನಂತೆ ಉತ್ತರಿಸಿದರು. —ಸಂಪಾದಕರು]

ಪ್ರಶ್ನೆ— ೧ ತಾತ್ಕಾಲಿಕವಾಗಿ ಯಾವದೇ ಬಗೆಯ ವ್ಯವಸ್ಥೆಯಾದರೂ ಕೊನೆಯಲ್ಲಿ ಒಂದೇ ಕೇಂದ್ರ ಸರಕಾರದ ಅಧಿಪತ್ಯದಲ್ಲಿ ಹಿಂದುಸ್ತಾನ ಏಕೀಕೃತವಾಗುವದೆಂದು ನಿಮಗೆನಿಸುವದೆ?

ಉತ್ತರ ೧ ಸದ್ಯದಲ್ಲಿ ನಾವು ಏನು ಮಾಡುವೆವೆಂಬುದನ್ನೆ ಭವಿಷ್ಯ ಅವಲಂಬಿಸುತ್ತದೆ.

ಪ್ರಶ್ನೆ— ೨ ವಿವಿಧ ಭಾಗಗಳ ಪ್ರತಿನಿಧಿಗಳನ್ನೊಳಗೊಂಡ ಒಂದೇ ಕೇಂದ್ರ ಸರಕಾರದ ನಿಯಂತ್ರಣದಲ್ಲಿ ಜಗತ್ತು ಏಕೀಕೃತವಾಗುವ ಸಂಭವ ನಿಮಗೆ ಕಾಣಬರುವದೆ ?

ಉತ್ತರ ೨ ಜಗತ್ತು ಬಾಳಬೇಕಾದರೆ ಅದೊಂದೇ ತಾರಕ ಮಂತ್ರವಾಗಿದೆ.

ಪ್ರಶ್ನೆ— ೩ ರಶಿಯಾ ಮತ್ತು ಅಮೇರಿಕೆಗಳ ನಡುವೆ ಯುದ್ಧವುಂಟಾಗುವ ಸಂಭವ ನಿಮಗೆ ತೋರುವದೆ?

ಉತ್ತರ— ೩ ಬೇರೆ ಯಾವದಾದರೂ ಸಂಭವನೀಯವಿರುವದು. ಆದರೆ ಅದು ತೀರ ಅಸಂಭವನೀಯವಾಗಿದೆ.

ಪ್ರಶ್ನೆ— ೪ ಪಾಲಿಸ್ತಾನ ಸಮಸ್ಯೆಗೆ ಒಪ್ಪಿಗೆಯಾಗೀ ತೀರುವ ಪರಿಹಾರವಾವುದೆಂದು ನಿಮಗೆ ತೋರುವದು?

ಉತ್ತರ— ೪ ಯಹೂದಿಗಳು ಬೆದರಿಕೆಯ ಮತ್ತು ಉಳಿದ ಹಿಂಸಾತ್ಮಕ ಮಾರ್ಗವನ್ನು ಪೂರ್ಣವಾಗಿ ಬಿಟ್ಟುಕೊಟ್ಟಾಗಲೆ.

ಪ್ರಶ್ನೆ— ೫ ಬ್ರಿಟಿಶರು ಕಾಲ್ತೆಗೆದ ಕೂಡಲೆ ಇಜಿಪ್ತ ಮತ್ತು ಸುದಾನಗಳು ಒಂದೇ ಸರಕಾರದ ಆಡಳಿತದಲ್ಲಿ ಏಕೀಕೃತವಾಗುವವೆಂಬ ನಂಬಿಕೆ ನಿಮಗಿದೆಯೆ?

ಉತ್ತರ— ೫ ಹಾಗಾಗುವದೆಂಬಲ್ಲಿ ನನಗೆ ಎಳ್ಳಷ್ಟೂ ಸಂದೇಹವಿಲ್ಲ.

ಪ್ರಶ್ನೆ— ೬ ಜಾಗತಿಕ ಸಮಸ್ಯೆಗಳನ್ನು ಬಿಡಿಸುವದಕ್ಕೆ ಈಗಲೂ ಅಹಿಂಸಾ ತತ್ವವೊಂದೇ ವಿಜಯಪ್ರದವಾದ ತತ್ವವೆಂದು ಕಳೆದ ಐದು ತಿಂಗಳ ನಿಮ್ಮ ಪ್ರಯೋಗದ ಪರಿಣಾಮದ ನಂತರವೂ ಪ್ರತಿಪಾದಿಸಬಲ್ಲಿರಾ?

ಉತ್ತರ ೬— ನಮ್ಮೆಲ್ಲ ಸಂಕಷ್ಟಗಳ ಪರಿಹಾರಕ್ಕೆ ಅಹಿಂಸೆಯೇ ರಾಮಬಾಣವೆಂಬುದಾಗಿದ್ದ ನನ್ನ ಹಿಂದಿನ ಅನುಭವ ನವಖಾಲಿಯಲ್ಲಿಯ ಈ ಐದು ತಿಂಗಳುಗಳ ನನ್ನ ಪ್ರಯೋಗದಿಂದ ಮತ್ತಷ್ಟು ದೃಢವಾಗಿದೆ.

ಬಂಗಾರ—ಹಸಿವು

ಬ್ರಿಟಿಶ್ ಸರಕಾರದವರು ಬಂಗಾರವನ್ನು ಪ್ರಚಂಡ ಪ್ರಮಾಣದಲ್ಲಿ ಸಂಗ್ರಹಿಸುತ್ತಿರುವರೆಂದು ರಾಯಟರ ಸುದ್ದಿ ಸಂಸ್ಥೆಯ ಸುದ್ದಿಯಿಂದ ಗೊತ್ತಾಗುತ್ತದೆ. ಒಂದು ಕಾಲಕ್ಕೆ ಇಂಗ್ಲಂಡು ಹಿಂದುಸ್ತಾನದಿಂದ ಬಂಗಾರ [illegible] ಬಳೆದುಕೊಂಡು ಹೋಗಿ ಅಮೇರಿಕೆಯ [illegible] ಸನ್ನು ತುಂಬಿತು. ಇದೀಗ ಅದೆ ಬಂಗಾರವನ್ನು ತಿರುಗಿ ಪಡೆಯುತ್ತಿದೆ. [illegible] ವ್ಯಾಪಾರಕ್ಕೆ ತಡೆಯಾಗುವದು [illegible] ಅದರಿಂದ ತಮ್ಮ ಬಳಕೆಗಾರ ವಸ್ತುಗಳ [illegible] ಬೆಲೆಗೆ ಧಕ್ಕೆ ಕೊಡುವದೆಂಬುದಾಗಿ ಭಾರತದ ಸ್ಟರ್ಲಿಂಗದ ಸಾಲವನ್ನು ತೀರಿಸಬಿಟ್ಟರೆಂದು ಕೇಳಿದಾಗ ಇಂಗ್ಲಂಡು ತಂಟೆಕಾರಣವನ್ನು ಮುಂದೆ ಮಾಡುವದುಂಟು. ಹಿಂದುಸ್ತಾನ ಒಕ್ಕಲತನದ ನಾಡಾಗಿರುವದರಿಂದ ತನ್ನ ಆರ್ಥಿಕ ವ್ಯವಹಾರ ಸುರಳೀತವಾಗಿ ಸಾಗಿಸಬೇಕಾದರೆ ಬಂಗಾರದ ಸಂಗ್ರಹವನ್ನು ಪ್ರಚಂಡ ಪ್ರಮಾಣದಲ್ಲಿ ಮಾಡಬೇಕಾಗಿದೆ. ಹೆಚ್ಚಾಗಿ ಅನಕ್ಷರ ರಾಷ್ಟ್ರವಾಗಿದ್ದ ಹಿಂದುಸ್ತಾನದಲ್ಲಿ ಬ್ಯಾಂಕಿಂಗ ಸೌಕರ್ಯಗಳನ್ನೊದಗಿಸುವದು ಪ್ರತಿ ಉಪಾಯವಾಗಲಾರದು. ಅದುದರಿಂದ ಇಂಗ್ಲಂಡು ಹಿಂದುಸ್ತಾನಕ್ಕೆ ಕೊಡಬೇಕಾದ ಸಾಲವನ್ನು ಕನಿಷ್ಠ ಅರ್ಧದಷ್ಟನ್ನಾದರೂ ಬಂಗಾರದ ರೂಪದಲ್ಲಿ ತೀರಿಸಿದರೆ ಹಿಂದುಸ್ತಾನಕ್ಕೆ ಸಹಾಯವಾಗುವದು. ಅದೇ ಕಾಲಕ್ಕೆ ಇಂಗ್ಲಂಡದ ಬಳಕೆ ವಸ್ತುಗಳ ಉತ್ಪಾದನೆಯ ಕಾರ್ಯಕ್ರಮದ ಮೇಲೆಯೂ ಯಾವದೆ ಬಗೆಯ ದುಷ್ಪರಿಣಾಮವಾಗದು.

— ಜೆ. ಸಿ. ಕುಮಾರಪ್ಪ

ಧೈರ್ಯವನ್ನು ಅವಲಂಬಿಸಿರಿ

''ಭಾರತದ ವಿಭಜನೆ ಮತ್ತು ಅದರ ಪರಿಣಾಮವಾಗಿ ಬಂಗಾಲ ಪಂಜಾಬುಗಳ ವಿಭಜನೆ ಇವುಗಳನ್ನು ಕುರಿತ ಬರಹಗಳು ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಅವರು ಪಾಕಿಸ್ತಾನ ತೆಗೆದುಕೊಳ್ಳಲಿ, ಅದು ಅಪ್ರಯೋಜಕವೆಂದು ಅವರಿಗೇ ಕೊನೆಗೆ ಗೊತ್ತಾಗುತ್ತದೆ ಎಂದೂ ಹೇಳಲಾಗಿದೆ. ಮೊನ್ನೆ ರೇಲಿನಲ್ಲಿ ನನಗೊಬ್ಬಳು ಮುಸ್ಲಿಂ ಮಹಿಳೆ ಭೆಟ್ಟಿಯಾದಳು. ಅವಳು ಸೈನ್ಯಖಾತೆಯ ಒಬ್ಬ ದೊಡ್ಡ ನೌಕರನ ಹೆಂಡತಿಯಾಗಿದ್ದಳು. ದೇಶದಲ್ಲಾಗುತ್ತಿದ್ದುದರ ಬಗ್ಗೆ ಅವಳು ಬಹಳ ಚಿಂತಾಕ್ರಾಂತಳಾಗಿದ್ದಳು. 'ನನ್ನ ಅಜ್ಜ ಅಜ್ಜಿಯರು ಕಾಶ್ಮೀರೀ ಪಂಡಿತರು; ನಾನು ಅವರಿಗಿಂತ ಬೇರೆಯ ಜನಾಂಗಕ್ಕೆ ಸೇರಿದವಳಾಗುವುದುಹೇಗೆ? ಇಂದು ಜನರು ಬಹಳ ಆವೇಶದಲ್ಲಿದ್ದಾರೆ. ಯಾರಿಗೂ ಚೆನ್ನಾಗಿ ಆಲೋಚಿಸುವ ಶಕ್ತಿ ಉಳಿದಿಲ್ಲ. ಅವರಿಗೆಬೇಕಿದ್ದರೆ ಮುಸ್ಲಿಂರು ಪಾಕಿಸ್ತಾನವು ನಿರುಪಯೋಗಿ ಯಾದದ್ದೆಂದು ತಿಳಿಯಲಾರರು. ಆದರೆ ನಾನು ಖಂಡಿತವಾಗಿ ಹೇಳುತ್ತೇನೆ: ಹತ್ತೇವರ್ಷಗಳಲ್ಲಿ ಅವರು ಹಿಂದೀ ಒಕ್ಕೂಟಕ್ಕೆ ಮರಳಿ ಸೇರುವರು, ಖಂಡಿತ.'' ಎಂದು ಗಾಂಧೀಜಿ ಹೇಳಿದರು.

''ಅವಳು ವಿದ್ಯಾವತಿಯೂ ಸುಸಂಸ್ಕೃತಳೂ ಸೂಕ್ಷ್ಮ ಸ್ವಭಾವದವಳೂ ಆಗಿದ್ದಳು. ಅವಳನ್ನು ಕರೆದುಕೊಂಡು ಬಂದಿದ್ದ ಪತಿಗೆ ಕಾಹಿಲೆ ಯಾದುದರಿಂದ ವೈದ್ಯರನ್ನು ಕರೆದುಕೊಂಡು ಬರಲು ಹೋಗುವಾಗ ರೇಲಿನ ಗಾರ್ಡನು ಆಕೆಯನ್ನು ನೋಡಿಕೊಂಡಿರಬೇಕೆಂದು ನನಗೆ ಹೇಳಿ ನಡುರಾತ್ರಿಯಲ್ಲಿ ಹೊರಹೊರಟನು. ರೇಲು ಮುಂದಿನ ನಿಲ್ದಾಣ ಸೇರುವವರೆಗೆ ನಾನು ಅವಳೊಡನಿದ್ದೆನು. ಅವರ ಡಬ್ಬಿಯಲ್ಲಿ ಪಾರಶೀ ಮಹಿಳೆಯೊಬ್ಬಳಿದ್ದಳು.

ದೇಶದಲ್ಲಿ ಆಗುತ್ತಿರುವ ಕೊಲೆಸುಲಿಗೆಗಳು ಅರ್ಥವಿಲ್ಲದವೆಂದು ಅವಳು ನುಡಿದಳು. ''ಇಲ್ಲಿ ನೋಡಿರಿ ನಾವು ಮೂವರು ಮೂರು ಭಿನ್ನ ಮತಗಳ ಅನುಯಾಯಿಗಳು; ಆದರೆ ಸಂಪೂರ್ಣ ಮೈತ್ರಿಯಿಂದ ವ್ಯವಹರಿಸುತ್ತಿದ್ದೇವೆ. ನಮ್ಮಂತೆಯೇ ಉಳಿದವರೇಕೆ ಇರಬಾರದು?'' ಎಂದು ಬಹಳ ಸಿಟ್ಟಿನಿಂದ ಹೇಳಿದಳು.

''ಈ ಮುಖಂಡರಲ್ಲಿ ಕೆಲವರಿಗೆ ಗುಂಡು ಹಾಕಬೇಕು'' ಎಂದು ಆವೇಶಯುಕ್ತಳಾಗಿ ನುಡಿದಳು. ''ತಮ್ಮ ಸ್ವಾರ್ಥಸಾಧನೆಗಾಗಿ ನಿಷ್ಪಾಪರಾದ ಬಡಜನರು ತಮ್ಮ ತಮ್ಮಲ್ಲಿ ಹೊಡೆದಾಡುವಂತೆ ಮಾಡಿದ್ದಾರೆ. ಈ ಗಲಭೆಗಳಲ್ಲಿ ಒಬ್ಬರಾದರೂ ಮುಖಂಡ ಸತ್ತಿರುವನೇನು? ಹೇಳಿರಿ.'' ನಾವು ಅವಳ ಮಾತಿಗೆ ಒಪ್ಪಿದೆವು. ನನಗೆ ಗಲಭೆಯ ಮೂರುತಿಂಗಳಲ್ಲಿ ನವಖಾಲಿಯಲ್ಲಾದದ್ದು ಅದೇ ಅನುಭವ. ''ನಾನು ತೀರದುಃಖಿತಳಾಗಿದ್ದೇನೆ'' ಎಂದು ಮುಸ್ಲಿಂ ಮಹಿಳೆಯೆಂದಳು. ''ಈ ದೇಶವು ಅಕ್ಷರಶಃ ಹಾಳಾಗುತ್ತಿದೆ. ಬೆಳೆದಮೇಲೆ ನನ್ನ ಮಕ್ಕಳು ಈ ದ್ವೇಷಪ್ರಪಂಚದಲ್ಲಿ ಸಂಪೂರ್ಣ ಅನರ್ಹರಾಗಿ ಬಾಳುವರು. ಒಂದೇ ಮಾತಿನಲ್ಲಿ ಹೇಳುವುದಾದರೆ, ಬೇಕಾದಷ್ಟು ರಕ್ತವನ್ನು ಚೆಲ್ಲಿದರೆ ಬೇಕಾದದ್ದು ಸಿಗುತ್ತದೆ ಎನ್ನುವಂತಾಗಿದೆ.''

''ದಿಲ್ಲಿಯಲ್ಲಿಯೂ ಕೆಲವರು ಅದೇ ವಿಷಯವಾಗಿ ಮಾತಾಡುತ್ತಿದ್ದರು. ''ಈಗಪಾಕಿಸ್ತಾನವನ್ನು ಕೊಡಲು ಕಾಂಗ್ರೆಸ್ಸು ತಯಾರಿದೆ; ಒಂದು ವರ್ಷದ ಮೊದಲೇ ಅದರೇಕೆ ಕೊಡಲೊಪ್ಪಲಿಲ್ಲ? ಅದು ಲೀಗಿಗೆ ಸೋತು ಶರಣಾಗತವಾದಂತಾಗಲಿಲ್ಲವೆ?'' ಎನ್ನುತ್ತಿರುವುದನ್ನು ಕೇಳಿದೆ.''

ಹಿಂಸೆಗೆ ಮಣಿಯಬಾರದೆಂದು ಜನರಿಗೆ ಧೈರ್ಯಕೊಡುವುದರಲ್ಲಿಯೇ ಗಾಂಧೀಜಿಯು ಬಾಳನ್ನು ಸವೆಯಿಸಿದ್ದಾರೆ. ಮೇ ೨೯ ರಿಂದ ಜೂನ ೧ ರವರೆಗೆ ತಮ್ಮ ಪ್ರಾರ್ಥನೋತ್ತರ ಭಾಷಣಗಳಲ್ಲಿ ಅವರು ಇದನ್ನೇ ಮಾಡುತ್ತಿದ್ದರು. ಪ್ರತಿದಿನವೂ ಬೆಳೆಯುತ್ತಿರುವ ಸಭೆ ಮಂತ್ರಮುಗ್ಧವಾದಂತೆ ಕೇಳುತ್ತಿದೆ. ೨೯ ರಿಂದ ಒಂದನೆಯ ತಾರೀಖಿನೊಳಗೆ ಗಾಂಧೀಜಿಯವರು ಮಾಡಿದ ಭಾಷಣಗಳ ಪೂರ್ಣಪಾಠವನ್ನು ಕೆಳಗೆಕೊಡಲಾಗಿದೆ.

೨೯—೫—೪೭

''ಇಂದಿನಿಂದ ಜೂನ ೨ ರವರೆಗೆ ನಿಮ್ಮ ಮನಸ್ಸಿಗೆ ಬಹಳ ಮುಖ್ಯವೆನಿಸುವ ಯಾವದಾದರೊಂದು ವಿಷಯದ ಮೇಲೆ ಮಾತಾಡಬೇಕೆಂದು ನನ್ನ ಆಸೆ'' ಎಂದು ಗಾಂಧೀಜಿ ಹೇಳಿದರು.

ತಮ್ಮ ಆದರ್ಶ ನಡತೆಯಿಂದಲೂ ಆತ್ಮಸಂಯಮದಿಂದಲೂ ಸಭಿಕರು ಗಾಂಧೀಜಿಯ ಮನಸ್ಸನ್ನು ತಮ್ಮ ಕಡೆಗೆಳೆದುಕೊಂಡು ಅವರು ತಮ್ಮ ಹೃದಯವನ್ನು ತೆರೆದಿಡಲು ಅನುಕೂಲ ಕಲ್ಪಿಸಿಕೊಟ್ಟರು.

''ಪತ್ರಿಕೆಗಳಲ್ಲಿ ಕೊಲೆ ಸುಲಿಗೆ ದಂಗೆ ದರೋಡೆಗಳ ಸುದ್ದಿ ಒಂದರಮೇಲೆ ಬರುತ್ತಿರುವ ಈ ಕಾಲದಲ್ಲಿ ಭಾರತದ ಮಕ್ಕಳೆಂಬ ಪ್ರತಿಯೊಬ್ಬನೂ ವಿವೇಕದಿಂದ ವಿಚಾರ ಮಾಡಿ ಧೈರ್ಯದಿಂದ ನಡೆದುಕೊಂಡಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು! ಜೂನ ೨ ರ ಆಲೋಚನೆ ನನಗೇನೂ ಆತಂಕವುಂಟು ಮಾಡಲಿಲ್ಲ. ಪ್ರಾಯದ ೩೦ ವರ್ಷಗಳನ್ನು ದ. ಆಫ್ರಿಕದಲ್ಲಿ ಕಳೆದು ೧೯೧೫ ರಲ್ಲಿ ಹಿಂದುಸ್ತಾನಕ್ಕೆ ಮರಳಿ ಬಂದೆ. ಅಲ್ಲಿ ನಾನೇನು ಹಣಗಳಿಸಲು ಹೋಗಿದ್ದಿಲ್ಲ. ದೇವರು ಪರೋಪಕಾರಕ್ಕಾಗಿಯೇ ನನ್ನನ್ನು ಹುಟ್ಟಿಸಿದ್ದನೆಂದು ನನಗೆ ಮೊದಲೇ ಗೊತ್ತಾಗಿತ್ತು, ಆ ಸೇವೆಯಲ್ಲಿಯೇ ದೇವರ ಸೇವೆಯಿತ್ತು. ಅದೇ ಈಶೋಪನಿಷತ್ತಿನ ಮೊದಲ ನುಡಿ ಕಲಿಸುವ ಪಾಠ: 'ನಿನ್ನದು ನಿನ್ನದಲ್ಲ, ಅದು ದೇವರದ್ದು; ಅನ್ಯರದ್ದಂತೂ ನಿನ್ನದಲ್ಲವೇ ಅಲ್ಲ' ಹೀಗಿದ್ದ ಮೇಲೆ ಯಾವನಾದರೂ ಯಾವುದನ್ನು ಪಡೆಯಲು ಹೆಣಗಬೇಕಾಗಿದೆ?

''ಮಾತಿಗೆ ಮಾತು ಏಟಿಗೆ ಏಟೆಂಬ ಬಂಟತನವನ್ನು ಉಪದೇಶ ಮಾಡಲಾಗದಿದ್ದರೆ ನೀವು ಕಾಡಿಗೆ ಹೊರಟು ಹೋಗಿರೆಂದು ಬುದ್ಧಿಯಿಲ್ಲದವರನೇಕರು ಕಾಗದ ಬರೆದಿದ್ದಾರೆ. ಮಾನವ್ಯ ಧರ್ಮವನ್ನು ಕೈಕೊಳ್ಳಿರೆಂದು ಜನರಿಗುಪದೇಶ ಮಾಡದೆ ಪಾಶವೀ ವೃತ್ತಿಯನ್ನು ಕೈಕೊಳ್ಳಿರೆಂದು ಉಪದೇಶಿಸಿ ನನ್ನ ಜೀವನವನ್ನು ಆ ಪತ್ರಕರ್ತರಿಗಾಗಿ ಹಾಳುಮಾಡಿಕೊಳ್ಳಲಾರೆನು. ತದ್ವಿರುದ್ಧವಾಗಿ ಪಾಶವೀಶಕ್ತಿಗೆ ಬಗ್ಗಬೇಡಿರೆಂದು ನಾನು ಸರ್ವಪಕ್ಷಗಳ ಮುಖಂಡರನ್ನೂ ಕೇಳಿಕೊಳ್ಳಲು ಬಯಸುತ್ತೇನೆ.''

''ನನಗೆ ಎಷ್ಟೋ ವಿಶ್ವಾಸವಿರುವ ವಿಶ್ವಪ್ರೇಮತತ್ವವನ್ನು ಕುರಿತು ನಾನೀಗ ಆಲೋಚನೆ ಮಾಡುತ್ತಿಲ್ಲ. ಇಡಿಯ ಹಿಂದುಸ್ತಾನವು ಅದನ್ನು ಸ್ವೀಕರಿಸಿದ್ದರೆ ಅದು ಇಡಿಯ ಜಗತ್ತಿಗೆ ಮುಖಂಡತನವನ್ನು ವಹಿಸಬಲ್ಲುದು. ಇಲ್ಲಿ ನಾನು ಹೇಳಬೇಕೆಂದಿರುವುದಿಷ್ಟೆ; ವಿವೇಕಕ್ಕಿಲ್ಲದೆ ನೀವು ಮತ್ತಾವುದಕ್ಕೂ ಬಗ್ಗಿ ನಡೆಯಬಾರದು.''

''ನೀವು ಸ್ವಾತಂತ್ರ್ಯಕ್ಕಾಗಿ ಬಹಳ ದುಡಿದಿದ್ದೀರಿ, ಮಹಾ ಸಾಮರ್ಥ್ಯವುಳ್ಳ ಬ್ರಿಟಿಶ ಸಾಮ್ರಾಜ್ಯದ ಖಡ್ಗವನ್ನೆದುರಿಸಿದ್ದೀರಿ. ಈಗೇಕೆ ನೀವು ತಪ್ಪು ಹೆಜ್ಜೆಯಿಡಬೇಕು? ಸ್ವಾತಂತ್ರ್ಯ ಬರಲಿರುವ ಈ ಸಂಧಿಕಾಲದಲ್ಲಿ ಅದನ್ನುಳಿಸಿಕೊಳ್ಳಲು ಪಾಶವೀ ಶಕ್ತಿಗೆ ಮಣಿಯುವದೆ ಗತ್ಯಂತರವಿಲ್ಲೆಂದು ತಪ್ಪು ತಿಳಿದುಕೊಳ್ಳಬೇಡಿರಿ. ಆ ದಾರಿಯಲ್ಲಿ ಹೋದರೆ ಪತನ ಸಿದ್ಧವೇ ಸರಿ''

''ಬ್ರಿಟನ್ನು ಮೇ ೧೬ ರ ಮಂತ್ರಿಮಂಡಲದ ಘೋಷಣೆಯನ್ನು ಚಾಚೂ ತಪ್ಪದೆ ಅನುಸರಿಸಿ ನಡೆಯುತ್ತದೆಂದು ನಂಬಿದ್ದೇನೆ. ಹಿಂದೀ ರಾಜಕೀಯ ಪಕ್ಷಗಳ ಒಮ್ಮತದ ಬೇಡಿಕೆಯ ಹೊರತು ಅದರಲ್ಲಿ ಯಾವ ಬದಲಾವಣೆಯನ್ನೂ ಮಾಡುವುದಲ್ಲವೆಂದು ನನ್ನ ತಿಳುವಳಿಕೆ. ಅದಕ್ಕಾಗಿ ನೀವೆಲ್ಲರೂ ಒಟ್ಟಿಗೆ ಸೇರಿ ಎಲ್ಲರೂ ಪರಿಗ್ರಹಿಸಬಹುದಾದ ಒಂದು ಯೋಜನೆಯನ್ನು ತಯಾರಿಸಬೇಕಾಗಿದೆ. ಕಾಂಗ್ರೆಸ್ಸು ಮತ್ತು ಬ್ರಿಟಿಶ ಸರಕಾರಗಳು ಹಾಗೆ ಮಾಡಲೊಪ್ಪಿವೆ. ಅವುಗಳಲ್ಲಿ ಯಾವುದಾದರೊಂದು ತಪ್ಪಿ ನಡೆದರೆ ವಿಶ್ವಾಸಭಂಗ ಮಾಡಿದಂತಾಗುತ್ತದೆ.''

''ಪರಿಸ್ಥಿತಿಯನ್ನು ಧೈರ್ಯದಿಂದ ಎದುರಿಸಬೇಕಾದರೆ ಕಾಂಗ್ರೆಸ್ಸು ಮತ್ತು ಬ್ರಿ. ಸರಕಾರಗಳು ಈ ಗಲಭೆಗಳನ್ನು ನಿಲ್ಲಿಸಿದ ಹೊರತು ಮೇ ೧೬ ರ ಘೋಷಣೆಯನ್ನು ಯಾವ ರೀತಿಯಿಂದಲೂ ಬದಲಿಸಲು ಸಾಧ್ಯವಿಲ್ಲವೆಂದು ಪುಂಡರಿಗೆ ಘಂಟಾ ಘೋಷವಾಗಿ ಹೇಳಿ ಶಾಂತಿ ಸ್ಥಾಪನೆಮಾಡಲು ಪ್ರಯತ್ನಿಸಬೇಕು''

''ಮೇ ೧೬ ರ ಯೋಜನೆಯನುಸಾರವಾಗಿಯೇ ಘಟನಾ ಸಮಿತಿ ಸೇರಿದೆ. ಅಧಿಕಾರದಾನ ಮಾಡಿ ನಿರ್ಗಮಿಸುವುದು ಬ್ರಿಟಿಶರ ಕರ್ತವ್ಯ. ಆ ಘಟನೆಯನುಸಾರವಾಗಿ ರಚಿತವಾದ ಸ್ವತಂತ್ರ ಹಿಂದೀ ಸರಕಾರವು ಅನಂತರ ಹಿಂದುಸ್ತಾನವನ್ನು ಒಂದಲ್ಲದಿದ್ದರೆ ನೂರು ಚೂರು ಬೇಕಾದರೂ ಮಾಡಬಲ್ಲುದು''

''ಜನಾಭಿಪ್ರಾಯವನ್ನು ಬ್ರಿಟಿಶ ಅಧಿಕಾರಿಗಳು ತಿಳಿದುಕೊಳ್ಳಬೇಕು. ಗಲಭೆಗಳಲ್ಲಿ ಅವರ ಕೈವಾಡವಿದೆಯೆಂದು ಹಲವರ ನಂಬಿಗೆ. ಸಿದ್ಧಮಾಡಿಕೊಟ್ಟ ಹೊರತು ನಾನು ಇದನ್ನು ನಂಬಲು ತಯಾರಿಲ್ಲ.''

''ವಾಯಿಸರಾಯರಿಗೆ ಇದೇನು ಸುಲಭದ ಕೆಲಸವಿಲ್ಲ. ಇಲ್ಲೇನೂ ಅಂತಹ ನೌಕಾಯುದ್ಧ ಪ್ರಾಗಲ್ಭ್ಯವನ್ನು ತೋರಿಸುವ ಅಗತ್ಯವಿಲ್ಲ. ಧೀರ ಮತ್ತು ಪ್ರಾಮಾಣಿಕ ಆಡಳಿತಗಾರಿಕೆಯನ್ನೇ ಈಗ ಅವರು ತೋರಿಸಬೇಕಾದದ್ದು. ದೇವರು ಅಗತ್ಯವಿರುವ ಧೈರ್ಯ ಮತ್ತು ನೈಪುಣ್ಯವನ್ನು ಅವರಿಗೆ ದಯಪಾಲಿಸಲಿ.

೩೦—೫—೪೭

ಪ್ರಾರ್ಥನೆಯ ನಂತರ ಮಾತಾಡುತ್ತ ಗಾಂಧೀಜಿಯು—

''ನಿಮ್ಮನ್ನು ನೀವು ನಿರೀಕ್ಷಿಸಿಕೊಳ್ಳಬೇಕಲ್ಲದೆ ಲಂಡನ್ನಿನತ್ತ ಅಥವಾ ವಾಯಿಸರಾಯರ ಮೋರೆಯತ್ತ ಕಣ್ಣುಬಿಡುತ್ತ ಕುಳಿತುಕೊಳ್ಳಬಾರದೆಂದು ನಾನು ನಿಮಗೆ ಹೇಳುತ್ತ ಬಂದಿದ್ದೇನೆ. ಲಂಡನ್ನಿನ ಆಂಗ್ಲರಾಗಲಿ ವಾಯಿಸರಾಯರಾಗಲಿ ಕೆಟ್ಟವರೆಂದು ನನ್ನ ಅಭಿಪ್ರಾಯವಲ್ಲ. ಅವರೆಲ್ಲ ಒಳ್ಳೆಯವರೆಂದೇ ನನ್ನ ನಂಬಿಗೆ. ಗೃಹಕೃತ್ಯದ ಕೆಲಸಗಳಲ್ಲಿ ಒಳ್ಳೆಯವನೇ ಆದರೂ ಅನ್ಯನು ತಲೆ ಹಾಕುವುದು ಅತೃಪ್ತಿಕರವೇ ಸರಿ. ಅವರು ಹೇಗಾದರೂ ಹೊರಡಲು ನಿಶ್ಚಯಿಸಿದ್ದಾರೆ. ಬ್ರಿಟಿಶರ ಹಿತವನ್ನು ರಕ್ಷಿಸುವ ಸುದ್ದಿಯನ್ನು ಎತ್ತಲಾಗಿಲ್ಲ. ಭಾರತ ಸರಕಾರದ ಅಪೇಕ್ಷೆಯಿದ್ದರೆ ಬ್ರಿಟಿಶ ಅಧಿಕಾರಿಗಳು ಇಲ್ಲಿ ಉಳಿಯಬಹುದು. ಆದರೆ ಅವರು ತಮ್ಮದೇ ಜೋಖೆಯ ಮೇಲೆ ಇಲ್ಲಿರಬೇಕಾಗುವುದು. ಅವರ ರಕ್ಷಣೆಗೆ ಒಬ್ಬ ಬ್ರಿಟಿಶ ಸಿಪಾಯಿಯೂ ಇಲ್ಲಿರಲಾರನು. ಸ್ನೇಹದಿಂದ ಭಾರತೀಯರ ಸೌಹಾರ್ದಗಳಿಸುವುದೊಂದೇ ಅವರ ಸುರಕ್ಷಿತತೆಯ ಹಾದಿ. ಇದೇ ಮಾತು ಬ್ರಿಟಿಶ ವ್ಯಾಪಾರಿಗಳಿಗೂ ಅನ್ವಯಿಸುತ್ತದೆ. ''ಹಿಂದುಸ್ತಾನವನ್ನು ಬಿಟ್ಟು ನಡೆಯಿರಿ'' ಎಂಬುದರ ಅರ್ಥವೇ ಇದು. ಜೂನ ೪೮ ರ ಅವರ ವಚನದ ಪ್ರಕಾರ ಅವರು ಬಿಟ್ಟು ಹೋಗಬೇಕಾದ ಕಾಲ. ಅವರು ಅವರ ಕರ್ತವ್ಯದತ್ತ ಗಮನ ಕೊಡಲಿ, ನಾವು ನಮ್ಮ ಕರ್ತವ್ಯದತ್ತ ಗಮನ ಕೊಡೋಣ. ಆದರೆ ಹಿಂದೀಯರು ಹೇಗೆ ತಮ್ಮ ಕರ್ತವ್ಯವನ್ನು ನಿರ್ವಹಿಸತಕ್ಕದ್ದು?''

''ನನಗಲ್ಲದೆ ನಾನು ಮತ್ತಾರಿಗಾದರೂ ಪ್ರತಿನಿಧಿಯಾಗಿದ್ದುಂಟೇ? ಎಂದು ಎಷ್ಟೋ ಸಲ ನಾನು ವಿಸ್ಮಯಬಟ್ಟಿದ್ದೆ. ೪ ಆಣೆಯ ಸದಸ್ಯನೂ ಅಲ್ಲದ್ದರಿಂದ ನಾನು ಕಾಂಗ್ರೆಸ್ಸಿನ ಪ್ರತಿನಿಧಿಯಾಗಲಾರೆ. ಕೇವಲ ಸೇವೆಯಿಂದ ಲಬ್ಧವಾದ ಹಕ್ಕಿನಿಂದ ಕೆಲವೊಮ್ಮೆ ಕಾಂಗ್ರೆಸ್ಸಿನ ಪರವಾಗಿ ಮಾತಾಡಿದ್ದೆ. ಹಾಗೆಯೇ ನಾನು ರಾಜರ ಮತ್ತು ಮುಸ್ಲಿಂಲೀಗಿನ ಪರವಾಗಿಯೂ ಮಾತಾಡಬಲ್ಲೆ. ಕೆಲ ಕಾಲದ ಹಿಂದೆ ಪ್ರಕಟಿಸಿದ ಶಾಂತಿಸಂದೇಶಕ್ಕೆ ನಾನು ಸಹಿ ಮಾಡಬೇಕೆಂದು ಜಿನ್ನಾರೇ ಅಪೇಕ್ಷಿಸಿದ್ದರು.''

''ಕಾಯಿದೆ ಆಝಂ ಜಿನ್ನಾರ ಸಹಿಯಿರುವ ಸುಪ್ರಸಿದ್ಧ ಹೇಳಿಕೆಗೆ ಸಹ ಪುರಸ್ಕರ್ತನಾಗಿರುವುದರಿಂದ ಶಾಂತಿಸ್ಥಾಪನೆಯ ಕೆಲಸದಲ್ಲಿ ನಾನು ಕಡೆಯ ಪಕ್ಷ ಅವರ ಪ್ರತಿನಿಧಿಯಾಗಿಯಾದರೂ ವ್ಯವಹರಿಸಬೇಕಾಗಿದೆ. ನಾನು ಕಾಯಿದೆ ಆಝಂರವರ ಪ್ರತಿನಿಧಿಯಾಗಿರುವೆನೆ? ಆಗಿರುವುದೇ ಆದರೆ ನಮ್ಮ ಮಾತೃಭೂಮಿಯಲ್ಲಿ ಶಾಂತಿ ನೆಲೆಗೊಳ್ಳುವಂತೆ ನಾವು ಮಾಡಬೇಕು. ಇಲ್ಲವೆ ಮಡಿಯಬೇಕು. ನಾನು ಗುರ್ಗಾಂವದ ಹತ್ತಿರದ ಹಳ್ಳಿಗಳನ್ನು ಸುಟ್ಟವರ ಮತ್ತು ಕೊಲೆಮಾಡಿದವರ ಪ್ರತಿನಿಧಿಯಲ್ಲವೆಂದು ತಿಳಿದಿದ್ದೇನೆ. ಅವರು ಹಿಂದುಗಳಿರಲಿ ಮುಸ್ಲಿಮರಿರಲಿ, ನನಗದರ ಲಕ್ಷ್ಯವಿಲ್ಲ. ಅವರೆಲ್ಲರೂ ಭಾರತಭೂಮಿಯ ಮಕ್ಕಳು. ನಡುಗಾಲ ಸರಕಾರವು ದುರದೃಷ್ಟವಶದಿಂದ ಒಂದು ಕೆಟ್ಟಮಾರ್ಗವನ್ನು ಹಿಂದಿನವರಿಂದ ಪಡೆದು ಬಿಟ್ಟಿದೆ. ಅದರಿಂದ ಅದಕ್ಕೆ ಯಾರು ಯಾರನ್ನು ಕೊಂದರೆಂಬುದನ್ನು ತಿಳಿಯಲು ಸಾಧ್ಯವಾಗುವುದೇ ಇಲ್ಲ. ''ಅದು ಒಂದು ಜಾತಿಯವರು ಮಾಡಿದ ಕೆಲಸ''. ಘಾತುಕನ ಹೆಸರನ್ನು ಧೈರ್ಯವಾಗಿ ಸ್ಪಷ್ಟವಾಗಿ ಹೇಳಬಾರದೇಕೆ? ಶಾಂತಿ ನೆಲೆಗೊಳ್ಳುವದರ ಮೊದಲು ಪಾಕಿಸ್ತಾನ ಸ್ಥಾಪಿತವಾದುದನ್ನು—ಅದರಲ್ಲೂ ಬ್ರಿಟಿಶರ ಕೈವಾಡದಿಂದ ಸ್ಥಾಪಿತವಾಗುವದನ್ನು—ನಾನೆಂದಿಗೂ ಒಪ್ಪಲಾರೆ.

ಈಗ ಹೇಳಿದ ಸಂಯುಕ್ತ ಹೇಳಿಕೆಯಂತೆ ನಡೆಯುವುದಾದರೆ ಪಾಕಿಸ್ತಾನವನ್ನು ಸಮರ್ಥಿಸಲು ಜಿನ್ನಾರಿಗೆ ಶುಷ್ಕ ತರ್ಕವಲ್ಲದೆ ಬೇರಾವುದೂ ಸಹಾಯಕವಾಗಲಾರದು. ನನ್ನ ಸಂಬಂಧದಿಂದಾಗಲಿ ಅಥವಾ ಸಂಬಂಧವಿಲ್ಲದೆಯಾಗಲಿ ಮೊದಲು ಅವರು ಶಾಂತಿಯನ್ನು ಸ್ಥಾಪಿಸಲಿ; ಆ ಬಳಿಕ ಸರ್ವಪಕ್ಷಗಳ ಮುಖಂಡರನ್ನು ತಮ್ಮ ಮನೆಗೇ ಬೇಕಾದರೆ ಕರೆದು ಸಭೆಸೇರಿಸಿ ಪಾಕಿಸ್ತಾನದ ಅಗತ್ಯವನ್ನು ಅವರಿಗೆ ಮನವರಿಕೆ ಮಾಡಿಕೊಡಲಿ. ಸವರ್ಣ ಹಿಂದುಗಳನ್ನು ಅವರು ತಮ್ಮ ತಲೆಯಿಂದ ಹೊರಗೆ ಹಾಕಲಿ. ಶೂದ್ರರನ್ನು ಬಿಟ್ಟರೆ ಭಾರತದ ಅಥವಾ ಹಿಂದು ಪ್ರಜೆಗಳಲ್ಲಿ ಸವರ್ಣ ಹಿಂದುಗಳು ಅತ್ಯಲ್ಪ ಸಂಖ್ಯಾತರಾಗಿ ಉಳಿಯುವರೆಂದು ಜಿನ್ನಾರಿಗೆ ನಾನು ಸಿದ್ಧಮಾಡಿ ತೋರಿಸಬಲ್ಲೆ. ಸವರ್ಣರೆಂದರೆ ಬ್ರಾಹ್ಮಣ ಕ್ಷತ್ರಿಯ ವೈಶ್ಯರು ಮಾತ್ರವಾದುದರಿಂದ ಜಿನ್ನಾಸಾಹೇಬರೇ ಸ್ವತಃ ದಲಿತವರ್ಗದವರನ್ನು ಅರ್ಥಾತ, ಶೂದ್ರರನ್ನು ಬಿಟ್ಟುಬಿಟ್ಟಿದ್ದಾರೆ. ನಿಜವಾಗಿ ನೋಡಿದರೆ ಶೂದ್ರ ಅತಿಶೂದ್ರರೇ ಬಹುಸಂಖ್ಯಾಕರು. ಪಾಕಿಸ್ತಾನವು ನ್ಯಾಯವಾದದ್ದಾದರೆ ಭಾರತೀಯರಿಗೆ ಅದು ಅಸಮರ್ಥನೀಯವೆಂದು ತಿಳಿಸಿಹೇಳಲು ಜಿನ್ನಾರಿಗೆ ಏನೂ ಕಷ್ಟವಾಗಕೊಡದು. ಬ್ರಿಟಿಶಶಾಹಿಗಾಗಲಿ ಅದರ ಪ್ರತಿನಿಧಿಯಾದ ವಾಯಕೌಂಟ್ ಮೌಂಟಬ್ಯಾಟನ್ನರಿಗಾಗಲಿ ಅವರು ಬಿನ್ನವಿಸಿಕೊಳ್ಳುವದಗತ್ಯವಿಲ್ಲ. ಶಾಂತಿಯಿರಲಿ ಅಶಾಂತಿಯಿರಲಿ, ಜೂನ ೪೮ ರೊಳಗೆ ಹಿಂದುಸ್ತಾನವನ್ನು ಬಿಟ್ಟುಕೊಡುವುದು ಮಾತ್ರ ಮೇಲೆ ಹೇಳಿದವರ ಕರ್ತವ್ಯ. ಒತ್ತಾಯದಿಂದ ಹೇರುವ ಶಾಂತಿಯು ಸ್ಮಶಾನ ಶಾಂತಿಯೇ ಸರಿ! ಅದಕ್ಕೆ ಇಡಿಯ ಹಿಂದುಸ್ಥಾನ ಮತ್ತು ಬ್ರಿಟನ್ನು ನಾಚಿಕೆ ಪಡಬೇಕಾಗಿದೆ. ನಾನು ಬಹಳ ತಡವಾಡಿ ಈ ಮಾತಾಡುತ್ತಿದ್ದೇನೆಂದು ಯಾರೂ ಹೇಳತಕ್ಕದ್ದಲ್ಲ. ನಾನು ತಡಮಾಡಿಲ್ಲ. ಸುಧಾರಣೆಗೆ ಯಾವುದೂ ಅಕಾಲವಲ್ಲ; ಖಡ್ಗಶಕ್ತಿಗೆ ಬದಲಾಗಿ ವಿವೇಕಶಕ್ತಿಯನ್ನು ಬಳಸುವುದು ಯಾವಾಗಲೂ ಅಕಾಲಿಕವೆನಿಸದು. ತಾತ್ಕಾಲಿಕವಾಗಿ ಹುಚ್ಚಾದ ಭಾರತದಮೇಲೆ ಬ್ರಿಟಿಶರು ಪಾಕಿಸ್ತಾನವನ್ನು ಹೇರ ಬಲ್ಲರೇ?'' ಜಿನ್ನಾರು ಹೇಳುವ ಪಾಕಿಸ್ತಾನವು ಪ್ರತಿಯೊಬ್ಬರೂ ಸುರಕ್ಷಿತರಾಗಿರುವ, ಜಾತಿ ಭೇದವಿಲ್ಲದ, ಮೇಲುಕೀಳೆಂಬ ಅಂತರವಿಲ್ಲದ, ಎಲ್ಲರಿಗೂ ನ್ಯಾಯದೊರಕುವ ರಾಜ್ಯವಿರಬಹುದೇ? ಅಂತಹ ಪಾಕಿಸ್ತಾನದ ವಿರುದ್ಧ ಯಾರೂ ಏನನ್ನೂ ಹೇಳಲಾರರು. ನಾನು ಸ್ವತಃ ಜಿನ್ನಾರೊಡನೆ ಪರ್ಯಟನ ಮಾಡಿ ಅಂತಹ ಪಾಕಿಸ್ತಾನದಲ್ಲಿ ಎಲ್ಲರೂ ಸುಖವಾಗಿರಬಹುದೆಂದು ಜನರಿಗೆ ತಿಳಿಸುತ್ತೇನೆ. ಆದರೆ ಗಡಿನಾಡು ಪಂಜಾಬ ಮತ್ತು ಬಂಗಾಲಗಳಲ್ಲಿ ನಡೆದ ಕೃತ್ಯಗಳು ಅಂತಹ ನಂಬಿಗೆಗೆ ಪ್ರೋತ್ಸಾಹ ಕೊಡತಕ್ಕವಲ್ಲ.''

''ಕಾಫರರಾದ ವಿಧರ್ಮಿಯರನ್ನು ಕೊಲ್ಲಬೇಕೆಂದು ಕುರಾಣದಲ್ಲಿ ಹೇಳಿರುವ ಕೆಲವು ಪುಸ್ತಕಗಳನ್ನು ನನ್ನ ಗೆಳೆಯನೊಬ್ಬನು ಕಳುಹಿಸಿದ್ದಾನೆ. ಇಡಿಯ ಜೀವನದಲ್ಲೆಲ್ಲಾ ನಾನು ಮುಸ್ಲಿಮರ ಮಧ್ಯದಲ್ಲೇ ಇದ್ದವನು. ನಾನು ಕಾಫರನಾದುದರಿಂದ ನನ್ನನ್ನು ಕೊಲ್ಲಬೇಕೆಂದು ಯಾರೂ ಹೇಳಲಿಲ್ಲ. ನವಖಾಲಿಯಲ್ಲಿ ನಾನು ಮೌಲ್ವಿಗಳೊಡನೆ ವಾಸಿಸುತ್ತಿದ್ದೆ. ವಿದ್ಯಾವಂತ ಮುಸ್ಲಿಮರು ದೇವರು ವಿಶ್ವಾಸವಿಡದವರಿಗೆ ತಕ್ಕ ಬುದ್ಧಿಯನ್ನು ಕಲಿಸುತ್ತಾನೆಂಬುದೇ ಆ ನುಡಿಯ ಅರ್ಥವೆಂದು ಹೇಳಿದ್ದಾರೆ. ಆದರೆ ಆ ದೇವರು ಮುಸ್ಲಿಮರಿಗಾದರೂ ಹಾಗೇ ಮಾಡುತ್ತಾನೆ. ದೇವರು ಮನುಷ್ಯರ ಬೆಲೆಯನ್ನು ನಿರ್ಣಯಿಸುವುದು ಅವರ ಮಾತಿನಿಂದಲ್ಲ, ಕೃತಿಯಿಂದ. ಭಗವದ್ಗೀತೆ, ಮನುಸ್ಮೃತಿ ಮತ್ತು ವೇದಗಳಲ್ಲಿ ಭಯಂಕರ ಶಿಕ್ಷೆಯ ಉಲ್ಲೇಖವಿದೆ. ಆದರೂ ದಯೆಯೇ ಎಲ್ಲ ಧರ್ಮಗಳ ಸಾರವೆಂಬುದೇ ಹಿಂದು ಧರ್ಮದ ತಿರುಳು. ತುಳಸೀದಾಸನು ಏನು ಹೇಳಿದ್ದಾನೆಂಬುದನ್ನು ಈ ಸಂದರ್ಭದಲ್ಲಿ ನೆನಪು ಮಾಡಿಕೊಳ್ಳಿರಿ.''

''ಒಳ್ಳೆಯ ಮತ್ತು ಕೆಟ್ಟವರಾದ ಎಲ್ಲ ಮನುಷ್ಯರೂ ದೇವರ ಮಕ್ಕಳು. ದೈವಭಕ್ತನು ಹಂಸಕ್ಷೀರ ನ್ಯಾಯದಿಂದ ಒಳ್ಳೆಯವರನ್ನು ಆಯ್ದುಕೊಂಡು ಕೆಟ್ಟವರನ್ನು ಬಿಟ್ಟುಬಿಡುತ್ತಾನೆ.''

೩೧—೫—೪೭

''ನಾನು ಪ್ರತಿ ದಿನ ಹೇಳುವ ಶ್ರುತಿಯೊಂದು ಮಾತನ್ನೂ ನೀವು ಮನನ ಮಾಡಬೇಕು. ಕಣ್ಣುಗಳನ್ನು ಮುಚ್ಚಿ ಮನಸ್ಸಿನ ಮತ್ತು ಹೃದಯದ ಕಣ್ಣುಗಳನ್ನು ತೆರೆದು ಕುಳಿತಿರುವುದು ಶ್ರವಣ ಮಾಡುವ ಅತ್ಯುತ್ತಮ ಮಾರ್ಗ'' ಎಂದು ಪ್ರಾರ್ಥನೆಯ ಮೊದಲು ಗಾಂಧೀಜಿ ಹೇಳಿದರು. ಪ್ರಾರ್ಥನೆ ಮುಗಿದ ನಂತರ ಮತ್ತಿಂತೆಂದರು:

''ಬಹಳ ಹಿಂದೆ ದ. ಆಫ್ರಿಕದಲ್ಲಿ ನನಗೆ ಅಹಿಂಸೆಯ ಬೆಳಕುಗೋಚರಿಸಿದಂದಿನಿಂದ ಇಂದಿನವರೆಗೆ ೫೦ ವರ್ಷಗಳು ನಾನು ನಿಮಗೆ ಅದರ ಸತ್ಯ, ಸೌಂದರ್ಯ ಮತ್ತು ಸಾಮರ್ಥ್ಯವನು ಹೇಳುತ್ತ ಬಂದಿದ್ದೇನೆ. ಹೀಗಿದ್ದರೂ ಜಿನ್ನಾಸಾಹೇಬರನ್ನು ಜೇಲಿಗೆ ಹಾಕಬೇಕೆಂದು ಹೇಳುವ ಹುಚ್ಚರಿರುವುದು ವಿಚಿತ್ರವಾದದ್ದು. ಜಿನ್ನಾಸಾಹೇಬರನ್ನು ನೀವು ಜೇಲಿಗೆ ಹಾಕಲಾರಿರಿ; ಒಂದು ವೇಳೆ ಹಾಕಿದರೆ ಅವರ ಸಾಮರ್ಥ್ಯವು ಹೆಚ್ಚುತ್ತದೆ. ಅದಕ್ಕಿರುವ ಒಂದೇ ಒಂದು ಮಾರ್ಗವೆಂದರೆ ಒತ್ತಾಯದ ಪಾಕಿಸ್ತಾನವನ್ನು ದೃಢವಾಗಿ ವಿರೋಧಿಸುವುದು ಮತ್ತು ಜಿನ್ನಾಸಾಹೇಬರಿಗೆ ಮಿತ್ರರಾಗಿಯೇ ಉಳಿಯುವುದು. ನನ್ನ ಮಾತನ್ನು ಎಲ್ಲರೂ ಕೇಳಿದರೆ ಒಂದಲ್ಲಾ ಒಂದು ಸುದಿನದಲ್ಲಿ ನನ್ನ ಪಕ್ಕದಲ್ಲಿ ಜಿನ್ನಾರಿರುವುದನ್ನು ನೀವು ಕಾಣಬಹುದು. ನಾನು ಅಜಾತ

—೧೧ನೇ ಪುಟಕ್ಕೆ

ನಾರದ ಪತ್ರ

ಅಸಹನೆ

ಕಳೆದ ಬಾರಿ ಗಾಂಧೀಜಿ ದಿಲ್ಲಿಗೆ ಭೆಟ್ಟಿ ಕೊಟ್ಟಾಗ ಪ್ರಾರ್ಥನಾ ಕಾಲದಲ್ಲಿ ಕುರಾಣದ ವಾಕ್ಯಗಳನ್ನೋದುವದಕ್ಕೆ ಕೆಲವರು ಉಗ್ರ ವಿರೋಧವನ್ನು ಪ್ರದರ್ಶಿಸಿದ ಕಾರಣ ಅವರು ಹಲವು ಸಲ ಪ್ರಾರ್ಥನೆಯನ್ನೇ ನಿಲ್ಲಿಸುವದು ಅವಶ್ಯವಾಯಿತು. ನೆರೆದವರಲ್ಲಿ ಬಹಳ ಜನರು ಪ್ರಾರ್ಥನೆ ಜರಗಬೇಕೆಂದು ಅಪೇಕ್ಷಿಸುತ್ತಿದ್ದರು. ಅದರಿಂದ ಉಪದ್ರವಿಗಳ ಮೇಲೆ ಅವರು ಸಿಟ್ಟಾಗಿದ್ದರು. ಅಂದಿನ ಉದ್ರಿಕ್ತ ವಾತಾವರಣದಲ್ಲಿ ಪ್ರಾರ್ಥನೆಯನ್ನು ಹಾಗೆಯೆ ಸಾಗಿಸಿಕೊಂಡು ಹೋದರೆ ಆಕ್ಷೇಪಕರಿಗೆ ಅಪಾಯವಾಗಬಹುದೆಂದು ಹೆದರಿ ಗಾಂಧೀಜಿ ಪ್ರಾರ್ಥನೆಯನ್ನು ನಿಲ್ಲಿಸಿದರು. ಕೆರಳಿಸುವ ಕೃತಿಗಳನ್ನು ಕೆಲವರು ಮಾಡಿದರೂ ಅಲುಗದೆ ಶಾಂತವಾಗಿ ಉಳಿಯಬೇಕೆಂದೂ ಶಿಸ್ತನ್ನು ಕಾಯ್ದುಕೊಳ್ಳಬೇಕೆಂದೂ ಗಾಂಧೀಜಿ ಜನರಿಗೆ ಮನಗಾಣಿಸಲು ಪ್ರಯತ್ನಿಸಿದರು. ಈ ಕೆಲಸವೂ ಮಹಿಳೆಯೊಬ್ಬಳು ಮೊದಲನೆ ದಿನವೇ ಅವರಿಗೆ ಪತ್ರ ಬರೆದು ಕುರಾಣ ವಾಕ್ಯಗಳ ಪಠನೆಯ ವಿರುದ್ಧ ದನಿಯೆತ್ತಿದಳು. ಅವಳು ಪ್ರಾರ್ಥನಾಸಭೆಯಲ್ಲಿ ಉಪಸ್ಥಿತಳಾಗಿದ್ದಳು. ಪ್ರಾರ್ಥನೆ ಆರಂಭವಾಗುವ ಮೊದಲು, ಒಬ್ಬಿಬ್ಬರು ಆಡ್ಡಿಯೆತ್ತಿದಾಕ್ಷಣ ತಾವು ಪ್ರಾರ್ಥನೆಯನ್ನು ನಿಲ್ಲಿಸಲಾರೆವೆಂದು ಗಾಂಧೀಜಿ ವಿವರಿಸಿದರು. ತಾವು ಇಳಿದುಕೊಂಡಿರುವ ಮಂದಿರದ ಒಡೆಯರು ಏನೂ ಆಕ್ಷೇಪವೆತ್ತಿಲ್ಲ. ಅಲ್ಲದೆ ಆಕ್ಷೇಪಕರ ಮೇಲೆ ಕೈಮಾಡುವ ಇಚ್ಛೆಯನ್ನು ತಡೆದುಕೊಳ್ಳುವಷ್ಟು ದಿಲ್ಲಿಯ ಶ್ರೋತೃಗಳು ಆತ್ಮ ಸಂಯಮವನ್ನು ಕಲಿತಿದ್ದಾರೆಂಬ ಧೈರ್ಯ ತಮಗುಂಟಾಗಿದೆ. ಅದುದರಿಂದ ಯಾರಾದರೂ ಆಕ್ಷೇಪಿಸುವರೋ ಇಲ್ಲವೋ ಎಂಬುದನ್ನು ಗಮನಿಸದೆ ಪ್ರಾರ್ಥನೆಯನ್ನು ನಡೆಸಬೇಕೆಂದು ತಮಗೆ ತೋರುತ್ತದೆ. ಕಲಕತ್ತೆಯಲ್ಲಿಯೂ ಇಂಥದೇ ಸಂಗತಿ ಘಟಿಸಿತ್ತು. ಆದರೆ ನೇರಿದವರಲ್ಲಿ ಅಧಿಕಾಂಶ ಜನರು ಅದು ಬೇಕೆಂದುದರಿಂದ ಪ್ರಾರ್ಥನೆಯನ್ನು ಜರುಗಿಸಲಾಗಿತ್ತು. ಕೊನೆಗೆ ಆಕ್ಷೇಪಕನು ದಾರಿಗೆ ಬಂದನು. ಪ್ರತಿಯೊಂದು ಸಲವೂ ಯಾರಾದರೊಬ್ಬನು ಆಕ್ಷೇಪವೆತ್ತಿದನೆಂದು ಪ್ರಾರ್ಥನೆಯನ್ನು ನಿಲ್ಲಿಸುವದು ಸಾಧ್ಯವಿಲ್ಲ. ಆದುದರಿಂದ ಆಕ್ಷೇಪಕರ ಮೇಲೆ ಕೈಯೆತ್ತದೆ ಸಭಿಕರು ಪ್ರಾರ್ಥನೆ ನಡೆಸಬೇಕೆಂದು ಗಾಂಧೀಜಿ ಕೇಳಿಕೊಂಡರು.

ಪ್ರಾರ್ಥನೆ ತಂಟೆಯಿಲ್ಲದೆ ಸಾಂಗವಾಯಿತು. ಕೋರಿಕೆಗಾದರೂ ಶಿಷ್ಟ ಸಂಪ್ರದಾಯವನ್ನು ಪಾಲಿಸಿದ ಆ ಮಹಿಳೆಯನ್ನು ಪ್ರಾರ್ಥನೋತ್ತರ ಭಾಷಣದಲ್ಲಿ ಗಾಂಧೀಜಿ ಅಭಿನಂದಿಸಿಯೂ ಅಭಿನಂದಿಸಿದರು. ಸಾರ್ವಜನಿಕ ಪ್ರಾರ್ಥನೆಯ ನಿಯಮಗಳು ಅಷ್ಟನ್ನಾದರೂ ಸಭಿಕರಿಂದ ಅಪೇಕ್ಷಿಸುತ್ತವೆ. ಇನ್ನು ಮುಂದಾದರೂ ಯಾರೂ ತಂಟೆಯೆಬ್ಬಿಸದಿರಲೆಂದು ಅದರು ಹಾರೈಸಿದರು ಆದರೆ ಮರುದಿವಸ ಆ ಮಹಿಳೆ ತಿರುಗಿ ಗಾಂಧೀಜಿಗೆ ಪತ್ರಬರೆದು ಹಿಂದುಗಳೂ ಸೀಖರೂ ಮುಸ್ಲಿಮರ ಕೈಯಿಂದ ಪಟ್ಟ ಪಾಡನ್ನು ಬಣ್ಣಿಸಿದಳು. ಮುಸ್ಲಿಮರಲ್ಲದವರನ್ನು ಕೊಲ್ಲಲು ಕುರಾಣ ಉಪದೇಶಿಸುತ್ತದೆ. ಇಂಥ ಕುರಾಣ ವಾಕ್ಯಗಳನ್ನು ತಮ್ಮ ಪ್ರಾರ್ಥನೆಯಲ್ಲಿ ಗಾಂಧೀಜಿ ಏನೆಂದು ಸೇರಿಸಿದ್ದರು ? ಎಂದು ಅವಳು ಕೇಳಿದ್ದಳು ಸಾಲದ್ದಕ್ಕೆ ಪ್ರಾರ್ಥನೆ ಆರಂಭವಾದೊಡನೆ ಒದರಿಕೊಂಡು ಗಲಭೆ ಮಾಡಲು ಅವಳು ಪ್ರಯತ್ನಿಸಿದಳು. ಸ್ವಯಂಸೇವಕರು ಅವಳನ್ನು ದೂರ ಕರೆದೊಯ್ದರು.

ಅವಳು ತಿರುಗಿ ಗಾಂಧೀಜಿಗೆ ಪತ್ರ ಬರೆದು ಪ್ರಾರ್ಥನೆ ಜರುಗಿಸುವದನ್ನೂ ತನ್ನನ್ನು ಸ್ವಯಂಸೇವಕರು ಕರೆದೊಯ್ದುದನ್ನೂ ಪ್ರತಿಭಟಿಸಿದಳು. ಪರಸ್ತ್ರೀಯ ಮೈಮುಟ್ಟುವ ಅಧಿಕಾರ ಯಾವ ಪುರುಷನಿಗೂ ಇಲ್ಲವೆಂದು ಹೇಳಿದ್ದಳವಳು.

ಗಾಂಧೀಜಿ ಬೆನ್ನುಬೆನ್ನಿಗೆ ಎರಡು ದಿನ ಅವಳ ಆಕ್ಷೇಪಗಳಿಗೆ ಉತ್ತರ ಕೊಡುತ್ತ, ಸ್ತ್ರೀಯನ್ನು ಪುರುಷನು ಸ್ಪರ್ಶಿಸುವದೇ ತಪ್ಪೆಂಬುದನ್ನು ನಿರಾಕರಿಸಿದರು. “ನಾನೆ ಗಾಳಿಸವಾರಿ ಮಾಡುವಾಗ ಹುಡುಗಿಯರ ಹೆಗಲ ಮೇಲೆ ಕೈಯಿಕ್ಕಿ ನಡೆಯುತ್ತೇನೆ. ಅದರಲ್ಲೇನಿದೆ ? ಪುರುಷನು ಸ್ತ್ರೀಯನ್ನು ಮುಟ್ಟುವದರಲ್ಲಿ ಕಾಮಾತುರತೆಯಿದ್ದರೆ ಅದು ಮಾತ್ರ ತಪ್ಪು” ಎಂದರವರು.

“ಬಹಿರಂಗ ಪ್ರಾರ್ಥನೆಯೆಂಬುದು ಬಹು ಅಮೂಲ್ಯವಾದ ಅಧಿಕಾರ” ಗಾಂಧೀಜಿ ಮುಂದುವರಿಸಿದರು. “ಅದನ್ನು ಉಪೇಕ್ಷಿಸುವದು ತರವಲ್ಲ. ಅನ್ಯಾಯವಾಗಿಯಾದರೂ ಯಾರಾದರೂ ಆಕ್ಷೇಪಿಸಿದ್ದಾದರೆ, ಅದೂ ಅಂಥ ಆಕ್ಷೇಪಕನ ಮೇಲೆ ಕೈಮಾಡುವ ಭಯವಿದ್ದರೆ, ಮೌನದಿಂದ ಪ್ರಾರ್ಥಿಸುವದೇ ಲೇಸು. ಆದರೆ ನನ್ನ ದಿನ್ನಹಗಳಿಗೆ ಅಭೂತಪೂರ್ವ ಸಾಫಲ್ಯ ದೊರೆತು, ಜನರು ಪರಿಪೂರ್ಣ ಇಚ್ಛಾಪೂರ್ವಕ ಸಂಯಮವನ್ನು ತೋರಿಸಿದ್ದು ಸಂತೋಷಕರ”

ಇನ್ನೂ ಪ್ರಾರ್ಥನೆಯಲ್ಲಿ ಕುರಾಣ ಪಠನವನ್ನು ನಡೆಸುತ್ತಲೇ ಹೋದರೆ ಪ್ರಾರ್ಥನೆಯ ಬಯಲಲ್ಲಿ ಕರಿ ನಿಶಾನೆಯ ಪ್ರದರ್ಶನ ಮಾಡಬೇಕಾಗುವದೆಂಬ ಭಯ ಪ್ರದರ್ಶನದ ಪತ್ರಗಳು ತಮಗೆ ಬರುತ್ತಿವೆಯೆಂದು ಗಾಂಧೀಜಿ ಹೊರಗೆಡಹಿದರು. ಇಂಥ ಪ್ರದರ್ಶನ ಜರಗಿದರೂ ತಾವು ಪ್ರಾರ್ಥನೆಯನ್ನು ಸಾಗಿಸುವವರೆಂದು ಪಣತೊಟ್ಟಿರವರು. “ಪ್ರದರ್ಶಕರು ಬಂದರೆ ಅವರನ್ನು ಗಮನಿಸಬೇಡಿರಿ,” ಎಂದು ನೆರೆದವರಿಗೆ ಅವರು ಕೇಳಿಕೊಂಡರು. “ಒಂದು ವೇಳೆ ನೀವೆಲ್ಲರೂ ಪ್ರದರ್ಶಕರೊಡನೆ ಸೇರಿ ಕರಿ ನಿಶಾನೆಗಳನ್ನೂ ದೊಣ್ಣೆಗಳನ್ನೂ ತಂದು ನನ್ನನ್ನು ಬಡಿಯತೊಡಗಿದರೂ ದೇವರ ನಾಮವನ್ನು ಜಪಿಸುತ್ತ ನಿಮ್ಮ ಮೇಲೆ ಯಾವದೇ ಕಲುಷಿತ ಭಾವನೆಯಿಲ್ಲದೆ ಬಡಿತಗಳನ್ನು ತಿನ್ನಬಲ್ಲೆನೆಂಬ ಧೈರ್ಯ ನನಗಿದೆ. ನೀವು ನನ್ನನ್ನು ಕೊಲ್ಲಬಹುದು; ಆದರೂ ಆ ಮೇಲೆ ನಿಮಗೆ ಪಶ್ಚಾತ್ತಾಪವಾಗದಿರದು. ಆದರ ಬದಲು ಪ್ರತೀಕಾರ ಮಾಡಿದರೆ—ಒಂದು ವೇಳೆ ನಿಮ್ಮಲ್ಲಿ ಕೆಲವರನ್ನು ಕೊಲ್ಲಲು ನನಗೆ ಸಾಧ್ಯವಾದರೆ ಕೂಡ—ಕಟ್ಟಕಡೆಗೆ ನಾನು ಕೊಲ್ಲಿಸಿಕೊಳ್ಳಲೇಬೇಕಾಗುವದು. ಆಗ ನಿಮಗೆ ನಿಮ್ಮ ಸಾಹಸಕ್ಕಾಗಿ ಅಭಿಮಾನವೆನಿಸೀತು.”

ಉಪದ್ರವಿ ಭಗಿನಿಗೆ, ನೀನು ದಾರಿ ತಪ್ಪಿರುವಿಯೆಂದು ಗಾಂಧೀಜಿ ಹೇಳಿದರು. “ನಾನು ಕುರಾಣ ಓದಿದ್ದೇನೆ. ನೀನು ಓದಿಲ್ಲ. ಮುಸ್ಲಿಂರಲ್ಲದವರನ್ನು ಕೊಲ್ಲಬೇಕೆಂದು ಅದರಲ್ಲಿ ಎಲ್ಲಿಯೂ ಹೇಳಿಲ್ಲ. ಎಲ್ಲ ಮಾನವ ಪ್ರಾಣಿಗಳಿಗೂ ನ್ಯಾಯ ದೊರೆಯಬೇಕೆಂದು ಅದು ಉಪದೇಶಿಸಿದೆ. ಈ ಉಪದೇಶವನ್ನು ಎಲ್ಲ ಮುಸ್ಲಿಮರೂ ಪಾಲಿಸಿದ್ದಾರೆಂದಲ್ಲ. ಆದರೆ ಗೀತೆಯ ಇಲ್ಲವೆ ವೇದಗಳ ಉಪದೇಶವನ್ನು ಹಿಂದುಗಳಾದರೂ ಎಲ್ಲರೂ ಎಲ್ಲಿ ಅನುಸರಿಸಿದ್ದಾರೆ? ಅಂದಮಾತ್ರಕ್ಕೆ ಅದರಿಂದ ಗೀತೆಯಾಗಲಿ ವೇದಗಳಾಗಲಿ ಹಿರಿಮೆಗೆಟ್ಟಾವೆ? ಕೆಲ ಮುಸ್ಲಿಮರ ದುಷ್ಕೃತ್ಯಗಳಿಂದ ಕುರಾಣದ ಹಿರಿಮೆಯೇಕೆ ಕೆಡಬೇಕು? ಕ್ಷಣಿಕ ಉನ್ಮಾದದಿಂದ ಕೆಲವರಿಗೆ ತಲೆ ತಿರುಗಿದ್ದರೆ ಅವರ ಧರ್ಮಗ್ರಂಥಗಳನ್ನೇ ತಿರಸ್ಕಾರ ಬುದ್ಧಿಯಿಂದ ನೋಡಲು ಕಲಿಯಬಾರದು.”

ಜೂನ ೨ರ ಗಾಬರಿ

ಜೂನ ೩ಕ್ಕೆ ವಾಯಿಸರಾಯರ ಪ್ರಕಟನೆ ಹೊರಬಿದ್ದೊಡನೆ ದೇಶದಲ್ಲೆಲ್ಲ ಗಲಭೆಗಳಾಗುವವೆಂಬ ಸುದ್ದಿ ಹಬ್ಬಿದೆ. ವಾಯಿಸರಾಯರು ಏನು ತರುವರೋ ಎಂಬ ಉತ್ಕಟ ಉತ್ಕಂಠೆಯ ವಾತಾವರಣವಿದೆ. ಈ ಮನೋವೃತ್ತಿಯನ್ನು ಖಂಡಿಸುತ್ತ, ಜನರು ತಮ್ಮ ಭವಿತವ್ಯಕ್ಕಾಗಿ ಲಂಡನ್ನಿನತ್ತ ನೋಡುವದು ವಿಷಾದಕರವೆಂದು ಗಾಂಧೀಜಿ ಹೇಳಿದರು. “ನಮ್ಮ ನಿಜವಾದ ಕೋಹಿನುರುವೆನಿಸಿದ ಭಾರತ ಸ್ವಾತಂತ್ರ್ಯ ನಮ್ಮ ಮುಂದೆಯೇ ಇದೆ. ಅದನ್ನು ತೆಗೆದುಕೊಳ್ಳುವದು ಬಿಡುವದು ನಮ್ಮ ನಿರ್ಣಯಕ್ಕೆ ಸೇರಿದ್ದು. ಬ್ರಿಟಿಶ ರಾಜಕೀಯ ಪಕ್ಷಗಳೇನು ಮಾಡುವವೋ ಏನು ಮಾಡಬಯಸುವವೋ ಎಂದು ಕೊನೆಯಿಲ್ಲದ ಊಹಾಪೋಹ ನಡೆದಿದೆ. ಹಿಂದುಸ್ತಾನದ ಜನರು ಸ್ವಾತಂತ್ರ್ಯ ಪಡೆಯಲು ನಿರ್ಧರಿಸಿದರೆ ಅವರವರ ಇಚ್ಛೆ—ಕೃತಿಗಳು ಅದನ್ನು ಬದಲಿಸಲಾರವು.”

ಸೋಮವಾರ ದಿನದ ಲಿಖಿತ ಸಂದೇಶದಲ್ಲಿಯೂ ಅವರು ಇದೇ ಮಾತನ್ನು ವಿಸ್ತರಿಸಿದ್ದರು: “ಬ್ರಿಟಿಶ ಮಂತ್ರಿಮಂಡಲದ ವಿಚಾರಗಳನ್ನು ತಿಳಿದುಕೊಳ್ಳಲು ಲಂಡನ್ನಿನ ಕಡೆ ನೋಡುವದು ನಮಗೆ ಶೋಭಿಸುವದಿಲ್ಲ. ನಮಗೆ ಸ್ವಾತಂತ್ರ್ಯ ಕೊಡುವದು ಅವರ ಕೈಯಲ್ಲಿಲ್ಲ. ನಮ್ಮ ಬೆನ್ನಿಂದ ಅವರು ಇಳಿದು ಹೋಗಬಲ್ಲರು ಮಾತ್ರ. ಅಷ್ಟು ಮಾಡಲು ಅವರು ವಚನಬದ್ಧರಾಗಿದ್ದಾರೆ. ಆದರೆ ಸ್ವಾತಂತ್ರ್ಯವನ್ನು ಕಾಯ್ದುಕೊಂಡು ಅದಕ್ಕೊಂದು ತೂಕುಗೊಡಬೇಕಾದರೆ ನಾವು ನಮ್ಮನ್ನೇ ಅವಲಂಬಿಸಬೇಕು. ಅದನ್ನು ಮಾಡುವ ಬಗೆಯನ್ನು ನಿಮಗೆ ತಿಳಿಸುವೆನೆಂದು ಹೇಳಿದ್ದೆ. ಬ್ರಿಟಿಶ ಅಧಿಕಾರ ಹಿಂದುಸ್ತಾನದಲ್ಲಿದಷ್ಟು ಕಾಲ ತರ್ಕಬದ್ಧವಾಗಿ ವಿಚಾರಿಸುವದು ನಮ್ಮಿಂದಾಗುವದಿಲ್ಲೆಂದು ನನ್ನ ಅಭಿಪ್ರಾಯ. ಹಿಂದುಸ್ತಾನದ ನಕಾಶೆಯನ್ನು ಬದಲಾಯಿಸುವದು ಬ್ರಿಟಿಶರ ಕೆಲಸವಲ್ಲ. ಅವರು ಮಾಡಬೇಕಾದುದಿಷ್ಟೆ: ಸಾಧ್ಯವಿದ್ದರೆ ಸುವ್ಯವಸ್ಥಿತವಾಗಿ ಆಡಳಿತೆ ನಡೆಯುತ್ತ ಇದ್ದಂತೆ, ಇಲ್ಲದಿದ್ದರೆ ಅನಾಯಕತೆ ಅವ್ಯವಸ್ಥೆಯಿದ್ದಾದರೂ ಹಿಂದುಸ್ತಾನವನ್ನು ಬಿಟ್ಟು ಹೋಗಬೇಕು, ಹೇಗೇ ಆದರೂ ನಿರ್ದಿಷ್ಟ ದಿನ ಅಥವಾ ಅದಕ್ಕೆ ಮುಂಚೆಯೇ ಇಲ್ಲಿಂದ ಅವರು ಕಾಲ್ತೆಗೆಯಬೇಕು.

“ದೇಶದ ಇಂದಿನ ಅವಸ್ಥೆಯಲ್ಲಿ ಈ ಹಿಂದುಸ್ತಾನದ ರೂಪ ಬದಲೇನು ಬದಲಿಸುವದು ಸಾಧ್ಯವಿಲ್ಲೆಂಬದಕ್ಕೆ ಇನ್ನೊಂದು ಕಾರಣವುಂಟು. ಕಾಯದೇ ಅಝಮರೂ ನಾತೂ ಒಟ್ಟಾಗಿ ಹೊರಡಿಸಿದ ಹೇಳಿಕೆಯದು. ರಾಜಕೀಯ ಧ್ಯೇಯಗಳನ್ನು ಸಾಧಿಸಲು ಹಿಂಸೆಯನ್ನು ಉಪಯೋಗಿಸಕೂಡದೆಂಬ ಉತ್ತಮ ತತ್ವವನ್ನು ಅದು ಪ್ರತಿಪಾದಿಸಿದೆ. ಆ ಲಿಖಿತವಿದ್ದು ದೇಶದಲ್ಲಿ ಹಿಂಸಾಚಾರದ ಉನ್ಮತ್ತ ತಾಂಡವ ನಡೆಯುತ್ತಿದ್ದರೆ,ಆ ಉನ್ಮತ್ತ ಪಿಪಾಸೆ ಆರಿದ ಬಳಿಕ ಎಲ್ಲ ಸರಿಹೋಗುವದೆಂಬ ಆಸೆಯಿಂದ ಅದಕ್ಕೆ ಕಲೆವಾಗುವಷ್ಟು ಮಟ್ಟಿಗೆ ಬ್ರಿಟಿಶ ಪ್ರಭುತ್ವ ದುರ್ಬಲವಾಗಿದ್ದರೆ ಆಗ ನಮಗೆ ಬ್ರಿಟಿಶರು ಬಿಟ್ಟು ಹೋಗುವ ದಾಯ ಅತ್ಯಂತ ರಕ್ತರಂಜಿತವಾದೀತು. ಅದಕ್ಕಾಗಿ ಹಿಂದುಸ್ತಾನವೇ ಏಕೆ ಇಡೀ ಜಗತ್ತೇ ಅದರನ್ನು ತೆಗಳುವದು. ಆಗ ಉನ್ಮತ್ತ ಹಿಂಸೆಯನ್ನು ಸಾಕಷ್ಟು ನಡೆಸಿದರೆ ಏನು ಬೇಕಾದರೂ ಸಾಧಿಸಬಹುದೆಂಬ ಕ್ರೂರತರ ಪಾಠವನ್ನು ನಾವು ಕಲಿಯಬಹುದಾಗಿತ್ತು. ಆದುದರಿಂದ ಪ್ರತಿಯೊಬ್ಬ ದೇಶಾಭಿಮಾನಿಯೂ, ಮಾತ್ರವಲ್ಲ, ಬ್ರಿಟಿಶರೂ ಈ ಹಿಂಸೆಯನ್ನೆದುರಿಸಬೇಕೆಂದೂ ಬ್ರಿಟಿಶರು ಮೇ ೧೬ ರ ಘೋಷಣೆಯನ್ನನುಸರಿಸಿ ಇಲ್ಲಿಂದ ಕಾಲ್ತೆಗೆಯಬೇಕೆಂದೂ ಕೇಳಿಕೊಳ್ಳುತ್ತೇನೆ. ಇಂದು ಬ್ರಿಟಿಶರು ಇಲ್ಲಿರುವದರಿಂದ ರಕ್ತಪಾತ, ಕೊಳ್ಳೆ ಮತ್ತು ಅದಕ್ಕೂ ಭೀಕರವಾದ ಕಾಂಡಗಳನ್ನು ನೋಡಿ ನಮ್ಮ ಕಾಲೇ ಹೋಗಿಬಿಡುತ್ತಿದೆ. ಆ ಬ್ರಿಟಿಶ ಅಧಿಪತ್ಯ ಇಲ್ಲಿಂದ ಹೋದ ಬಳಿಕಾದರೂ ನಾವು ತರ್ಕಬದ್ಧವಾಗಿ ಚಿಂತಿಸುವದನ್ನು ಕಲಿತು ಹಿಂದುಸ್ತಾನವನ್ನು ಒಂದಾಗಿಯಾಗಲಿ ಹಲವು ತುಂಡುಗಳಾಗಿಯಾಗಲಿ ಇಡುವ ನಿರ್ಧಾರಕ್ಕೆ ಬರೋಣ. ಒಂದು ವೇಳೆ ಹೋರಾಡಬೇಕೆಂದೇ ನಮ್ಮ ಛಲವಾದರೂ ಆಗ ನಾವಿಂದಿನಷ್ಟು ಧೃತಿಹೀನರಾಗಲಿಕ್ಕಿಲ್ಲೆಂದು ನನಗೆ ವಿಶ್ವಾಸವುಂಟು. ಎಲ್ಲ ಹಿಂಸೆಯಲ್ಲಿಯೂ ಅಲ್ಪಸ್ವಲ್ಪ ಧೃತಿಭಂಗವಾಗಿಯೇ ಆಗುತ್ತದೆ. ಅದಕ್ಕಿಂತ ಹೆಚ್ಚಿನ ಅಧಃಪಾತವೇನೂ ಇಲ್ಲಿ ಆಗಲಾರದು. ಸ್ವತಂತ್ರ ಹಿಂದುಸ್ತಾನ ಜಗತ್ತಿಗೆ ಹಿಂಸೆಯಲ್ಲಿ ಇನ್ನೊಂದು ದೃಷ್ಟಾಂತವಾಗಿ ಪರಿಣಮಿಸಲಾರದೆಂದು ನಾನು ಆಶಿಸುವೆ. ಈಗಾಗಲೆ ಹಿಂಸೆಯಿಂದ ಅದು ಸೋತು ಸಣ್ಣಾಗಿದೆ.”

ಹಿಂದುಗಳಿಗೂ ಸೀಖರಿಗೂ ಉಪದೇಶ

ಜೂನ ೩ ಕ್ಕೆ ವಾಯಿಸರಾಯರ ಅಧಿಕಾರ ವರ್ಗೀಕರಣ ಘೋಷಣೆಯಾದೊಡನೆ ಅಭೂತಪೂರ್ವ ಹತ್ಯಾಕಾಂಡ ಸಂಭವಿಸಲಿದೆಯೆಂಬ ಸುದ್ದಿ ಹಬ್ಬಿದುದರಿಂದ ಉದ್ವೇಗ ಬೆಳೆಯುತಿದೆಯೆಂದು ಬಿಹಾರದಿಂದೊಂದು ಟೆಲಿಫೋನ ಸುದ್ದಿ ಬಂತು. ಇದರಿಂದ ತಮಗೆ ಬಹಳ ನೋವಾಗಿದೆಯೆಂದು ಗಾಂಧೀಜಿ ನುಡಿದರು. ವಾಯಿಸರಾಯರೇನು ತರುವರೊ ಎಂದು ನಾವೇಕೆ ಬಾಯ್ಬಿಡಬೇಕು ? ಅದರಿಂದ ಹಿಂದುಗಳೂ ಮುಸ್ಲಿಮರೂ ವಿಹ್ವಲರಾಗಬೇಕೇ ? ಹಿಂದೆಯೂ ಇಂಥ ಸುದ್ದಿಗಳು ಹಬ್ಬಿದ್ದುಂಟು, ಕಡೆಗೆ ಏನೂ ಸಂಭವಿಸಿರಲಿಲ್ಲ. ಇಂದಿನ ಗಾಬರಿಯಾದರೂ ಇದೇ ಪ್ರಕಾರ ನಿರಾಧಾರವಿರಬಹುದೆಂದು ಗಾಂಧೀಜಿ ಹಾರೈಸಿದರು. ಆದರೆ ಬಿಹಾರದ ಹಿಂದುಗಳಿಗೆ ಅವರೊಂದು ಮಾತನ್ನು ತಿಳಿಸಬಯಸಿದರು. “ನಾನು ಬಂಧುಗಳೆಂದು ಬಗೆದಿರುವ ಮತ್ತು ತಮ್ಮನ್ನು ಸ್ನೇಹದಿಂದ ಕಾಣುತಿರುವ ಬಿಹಾರದ ಮುಸ್ಲಿಮರನ್ನು ಹಿಂದುಗಳು ಕೊಲ್ಲತೊಡಗಿದರೆ ನಾನೂ ಸಾಯುವದು ಖಂಡಿತ.”

ಸಿಂಧೀ ಗೆಳೆಯನೊಬ್ಬನಿಂದ ಪತ್ರ ಬಂದಿತ್ತು. ಅಲ್ಲಿ ಹಿಂದುಗಳು ಗಾಬರಿಯಾಗಿದ್ದಾರಂತೆ. ಹಿಂದೂ ಮುಸ್ಲಿಮರಿಬ್ಬರೂ ಪಶುಗಳಾಗಿ ಹೋದರೆ ? ಅವರಲ್ಲಿ ದೈವಭೀತಿ ಉಳಿದೇ ಇಲ್ಲವೆ ? ಎಂದು ಗಾಂಧೀಜಿ ಕೇಳಿದರು.

“ನಾನು ಬಿಹಾರದಲ್ಲಿರುವದು ಮುಸ್ಲಿಮರಿಗೆ ನೆರವಾಗುವದಕ್ಕಾಗಿ. ಆದರೆ ಅದರಿಂದ ಹಿಂದುಗಳು ಕಟುಕರಿಗೆ ಬಲಿಯಾಗಬೇಕಾಗುವದು ಎಂಬುದಾಗಿಯೂ ಜನರು ಆಡಿಕೊಳ್ಳುತಿದ್ದಾರೆ” ಎಂದು ಅವರು ಹೇಳಿದರು. “ಹೌದು. ಮುಸ್ಲಿಮರು ಸುಚ್ಚಿದ್ದರೂ ನೀವು ತಲೆಯನ್ನು ಶಾಂತವಾಗಿರಿಸಿಕೊಳ್ಳಿರೆಂದು ನಾನು ಹಿಂದುಗಳಿಗೆ ಉಪದೇಶಿಸಿದ್ದೇನೆ. ಹೀಗೆ ಯಾರಿಗಾದರೂ ಉಪದೇಶವಿತ್ತದ್ದಕ್ಕೆ ನನಗೆ ನಾಚಿಕೆಯಾಗುವದಿಲ್ಲ. ಪಂಜಾಬದಲ್ಲಿ ಹಿಂದುಗಳು ಅಲ್ಪಸಂಖ್ಯಾಕರಾಗಿದ್ದಾರೆ. ಆದರೆ ಅಲ್ಲಿರುವ ಶೂರ ಸೀಖರಲ್ಲಿ ಪ್ರತಿಯೊಬ್ಬನೂ ತಾನು ಒಂದೂಕಾಲು ಲಕ್ಷ ಜನರಿಗೆ ಸಮಾನನೆಂದು ಹೇಳಿಕೊಳ್ಳುತ್ತಾನೆ. ಇದಕ್ಕೆ ಪ್ರತಿಯೊಬ್ಬ ಸೀಖನೂ ಒಂದೂ ಕಾಲು ಲಕ್ಷ ಜನರಷ್ಟು ರಕ್ತಪಾತ ಮಾಡಬಲ್ಲನೆಂದು ಅರ್ಥವೆ? ಅಲ್ಲವೆಂದು ಪಣ್ಣಿಸಿದ. ಒಬ್ಬ ಸೀಖನು ಒಂದೂ ಕಾಲು ಲಕ್ಷ ಜನರನ್ನು ಎದುರಿಸಬಲ್ಲನೆಂದಿಷ್ಟೆ ಅದರ ಅರ್ಥ. ಆ ಅರ್ಥವಾದರೆ ಅದು ಸೀಖರ ಶೌರ್ಯಕ್ಕೊಂದು ತಕ್ಕತೇ ಸರಿ. ಅನ್ಯಾಯವಾಗುತ್ತಿರುವದನ್ನು ಕಂಡು ಒಬ್ಬನೇ ಒಬ್ಬ ಸೀಖನಾದರೂ ತನ್ನಗೆ ತಲೆಕೊಡಬೇಕು. ಅದನ್ನು ತಡೆಯುವ ಸಲುವಾಗಿ ಅವನು ಪ್ರಾಣ ಕೊಡಬೇಕು. ಆದುದರಿಂದ ಅವರ ಇತಿಹಾಸದಲ್ಲಿ ಕೃಪಾಣ (ಖಡ್ಗ) ದ ಸ್ಥಾನವೇನೇ ಇದ್ದಿರಲಿ, ಅಣುಬಾಂಬಿನ ಈ ಯುಗದಲ್ಲಿ ಅಹಿಂಸಾತ್ಮಕ ಪ್ರತೀಕಾರದಷ್ಟು ಸಮರ್ಥವಾದ ಆಯುಧ ಬೇರೊಂದಿಲ್ಲವೆಂದು ನಾನು ಸೀಖರಿಗೆ ಸೂಚಿಸಬಯಸುವೆ. ಅದು ಮನುಷ್ಯರನ್ನು ಹೇಡಿಗಳನ್ನಾಗಿ ಮಾಡುವದಿಲ್ಲ. ಹಿಂಗಸರಲ್ಲಿ ಕೂಡ ಅದು ಶೌರ್ಯವನ್ನು ತುಂಬುವದು. ನಾನಿಂದು ಅಹಿಂಸಾತತ್ವವನ್ನು ಬೋಧಿಸುತಿದ್ದರೆ, ಅದೇ ನಿಜವಾದ ಧೀರರ ಆಯುಧವೆಂದು ಮನಗಂಡಿರುವದೇ ಅದಕ್ಕೆ ಕಾರಣ.”

ಹುಚ್ಚುನಾಯಿಯ ದೃಷ್ಟಾಂತ

ಹುಚ್ಚುನಾಯಿಯನ್ನು ಏನು ಮಾಡಬೇಕೆಂದು ಯಾರೋ ಒಬ್ಬ ಕೇಳಿದನು. ನಿಜವಾದ ಹುಚ್ಚುನಾಯಿಯೆ ಅವನ ಮನಸಿನಲ್ಲಿರುವದಾದರೆ, ಮೊದಲನೆಯದಾಗಿ ದೈವಭೀರು ಜನರ ಮಧ್ಯದಲ್ಲಿ ನಾಯಿಗಳಿಗೆ ಹುಚ್ಚು ಹಿಡಿಯುವದೇ ಸಾಧ್ಯವಿಲ್ಲೆಂದು ಗಾಂಧೀಜಿ ಉತ್ತರವಿತ್ತರು. ಆದರೂ ಆಸ್ತಿಕರೆನಿಸಿಕೊಳ್ಳುವವರ ನಡುವೆ ಒಂದು ನಾಯಿಗೆ ಹುಚ್ಚು ಹಿಡಿಯಿತೆಂದಾದರೆ, ಅನೇಕರು ಅದರಿಂದ ಕಚ್ಚಿಸಿಕೊಂಡು ಚಿಕಿತ್ಸೆಗಾಗಿ ಕಸೌಲಿ ಆಸ್ಪತ್ರೆಗೆ ಹೋಗುವ ಬದಲು ಆ ನಾಯಿಯನ್ನು ಕೊಲ್ಲುವದೊಳಿತೆಂದು ಅವರು ಹೇಳಿದರು.

“ಆದರೆ ಮಾನುಷ ಪ್ರಾಣಿಗೆ ಹುಚ್ಚು ಹಿಡಿದರೆ ?” ಎಂದು ಗಾಂಧೀಜಿ ಪ್ರಶ್ನಿಸಿಕೊಂಡರು. “ಸ್ವತಃ ತನ್ನ ಸೋದರಳಿಗೇ ಹುಚ್ಚು ಹಿಡಿದಿತ್ತು. ನಾನು ಆಗ ಹತ್ತು ವರ್ಷದ ಹುಡುಗನಾಗಿದ್ದೆ. ನನ್ನ ತಂದೆ ತಾಯಿಗಳು ಹುಚ್ಚನಾದ ಮಗನನ್ನು ಕೊಲ್ಲಿಸಲಿಲ್ಲ. ವೈದ್ಯರನ್ನೂ ಡಾಕ್ಟರರನ್ನೂ ಕರೆಸಿ ಚಿಕಿತ್ಸೆ ಮಾಡಿಸಿ ಗುಣಪಡಿಸಿದರು.

“ನೀವು ಹಿಂದುಗಳೇ ಇರಿರಿ, ಮುಸ್ಲಿಮರೇ ಇರಿರಿ ಎಲ್ಲರೂ ನನ್ನ ಬಾಂಧವರು. ನಿಮಗೆಲ್ಲರಿಗೂ ಹುಚ್ಚು ಹಿಡಿಯಿತೆಂದಿಟ್ಟುಕೊಳ್ಳಿರಿ ಮತ್ತು ನನ್ನ ಕೈಕೆಳಗೆ ಒಂದು ದಂಡು ಇರುವದೆಂದೆಣಿಸಿರಿ. ನಾನು ನಿಮ್ಮನ್ನು ಗುಂಡು ಹೊಡೆದು ಕೊಲಿಸುವೆನೆ ? ಇಲ್ಲ. ನನಗೇ ಹುಚ್ಚು ಹಿಡಿದರೂ ಗುಂಡು ಹೊಡೆಸಿಕೊಂಡು ಸಾಯುವ ಮನಸು ನನಗಿಲ್ಲ. ನನ್ನ ಗೆಳೆಯನ ಮಗನಿಗೆ ಹುಚ್ಚು ಹಿಡಿಯಿತು. ಅವನನ್ನು ನಾನು ಸೆರೆಯಲ್ಲಿಟ್ಟಿದನೇ ಹೊರತು ಕೊಲ್ಲಿಸಬಾಶಿಸಲಿಲ್ಲ.

“ಇಂದು ಜಾತೀಯ ದ್ವೇಷದ ಉನ್ಮಾದ ದೇಶವನ್ನು ಆವರಿಸಿದೆ. ಜೂನ ೩ ಕ್ಕೆ ದೇಶದಲ್ಲೆಲ್ಲ ಹಿಂಸಾಚಾರವಾಗುವದೆಂದು ಜನರು ಅಂದುಕೊಳ್ಳುತಿದ್ದಾರೆ. ನಮ್ಮಲ್ಲಿ ಯಾರಿಗೂ ರಕ್ತಪ್ರವಾಹ ಬೇಕಾಗಿಲ್ಲವೆಂದು ನನಗೆ ಮನವರಿಕೆಯಾಗಿದೆ. ಈ ದ್ವೇಷವನ್ನು ಸಹಿಸಬೇಕಲ್ಲದೆ ನಾವೂ ದ್ವೇಷಗೊಂಡು ಹಗೆ ತೀರಿಸಿಕೊಳ್ಳುವದು ಸರಿಯಲ್ಲ” ಎಂದು ಗಾಂಧೀಜಿ ಉಪದೇಶಿಸಿದರು.

ರಾಜಕೀಯ ಧ್ಯೇಯ ಸಾಧನೆಗಾಗಿ ಹಿಂಸೆಯನ್ನು ಉಪಯೋಗಿಸಕೂಡದೆಂದು ತಾವೂ ಕಾಯದೇ-ಅಝಮರೂ ಹೇಳಿಕೆ ಹೊರಡಿಸಿದುದನ್ನು ಗಾಂಧೀಜಿ ಉಲ್ಲೇಖಿಸಿದರು. ಸುಹ್ರವರ್ದಿ ಸಾಹೇಬ ಮೊದಲಾದವರೂ ಬಂಗಾಲದಲ್ಲಿ ಜೂನ ೩ ನೇ ದಿನ ಹಿಂದೂಗಳೂ ಮುಸ್ಲಿಮರೂ ಉನ್ಮತ್ತರಾಗದೆ ಗೆಳೆಯರಾಗಿರಬೇಕೆಂದು ಬಿನ್ನವಿಸಿಕೊಂಡಿದ್ದಾರೆ. ಈ ಸಲಹೆಯನ್ನು ಎಲ್ಲರೂ ಅನುಸರಿಸಬೇಕೆಂದು ಗಾಂಧೀಜಿ ಹಾರೈಸಿದರು.

ಅಲ್ಪಸಂಖ್ಯಾಕರ ರಕ್ಷಣೆಯ ಧರ್ಮ

ಇನ್ನೊಬ್ಬನು ಈ ಅರ್ಥದ ಪತ್ರ ಬರೆದಿದ್ದ: ವಾಯಿಸರಾಯರು ನಡುಗಾಲ ಸರಕಾರದ ಮುಂದಾಳುಗಳನ್ನು ಮಾತುಕತೆಗಾಗಿ ಕರೆಸಿದಾಗ ಲೆಲ್ಲ ಹಿಂದುಗಳನ್ನೂ ಮುಸ್ಲಿಮರನ್ನೂ ಸೀಖರನ್ನೂ ಕರೆಸುತ್ತಾರೆ. ಹಿಂದುಸ್ತಾನದಲ್ಲಿ ಬೇರಾವ ಜಾತಿಗಳೇ ಇಲ್ಲವೆ ? ಪಾರ್ಸಿಗಳಿಲ್ಲವೆ, ಕ್ರಿಶ್ಚನರಿಲ್ಲವೆ ? ಯಹೂದ್ಯರೂ ಇತರರೂ ಇಲ್ಲವೆ ? ಅವರು ಕಾಂಗ್ರೆಸ್ಸನ್ನು ಹಿಂಬಾಲಿಸಿದವರು. ಹೆಚ್ಚು ಕೊಡಗಾಡುವವರಿಗೆ ಅವರನ್ನು ಬಿಟ್ಟುಕೊಡಬೇಕೆ? ಸೀಖರು ಶೂರ ಜನರು, ಮುಸ್ಲಿ

—೧೦ನೇ ಪುಟಕ್ಕೆ

ದಿಲ್ಲಿಯಲ್ಲಿ

(೭ ನೇ ಪುಟದಿಂದ)

ಮುಕ್ತವ ಪದವಿಯೋ ಇಲ್ಲವೆ ಶ್ರೋಕ್ಷವೂ ಶಿಕ ಯುದು" ಎಂದು ಬರೆದಿರುವರು.

ಅವರನ್ನು ಶೋಧಿಸುತ್ತಿರುವುದಾದರೂ ಯಾವುದು? ಅವರ ಅತ್ಯಂತಿಕ ಭಕ್ತಿಯು ೮೦ ರಲ್ಲಿ ಹಿಂದುಸ್ಥಾನದಲ್ಲ ಅವರೊಡನೆ ಕೆಲ ದಿನಗಳನ್ನು ಕಳೆದ ಯುರೋಪಿಯನ್ ಗೆಳೆಯ ರೊಬ್ಬರು ಅಮೇರಿಕೆಯಿಂದ ಇಂತು ಬರೆಯುತ್ತಾರೆ. "ಇಂದು ೨೪ರ ಆಟಮಿಕ ಬಾಂಬಿನ ಸಾಮಗ್ರಿಗಳನ್ನು ತಯಾರಿಸುತ್ತಿರುವ ತೀರ ಸಮೀಪದ ಸ್ಥಳದಲ್ಲಿಯೆ ನಾನು ಇರುತಿರುವೆ. ಜಗತ್ತಿನ ಆ ಭಾಗದಲ್ಲಿ ನೀವು ಪ್ರಾರ್ಥನೆಯಲ್ಲಿ ದುವಾಗ ನಿಮ್ಮ ಸ್ಮರಣೆ ಸಹಜವಾಗುತಿದೆ. ನಿಮ್ಮ ದೇಶಸ್ಥಿ ಮತ್ತು ಮಿತ್ರತ್ವದ ನೇತೃತ್ವ ಮತ್ತು ಶಾಸನದಲ್ಲಿಯೆ ನಮ್ಮ ಪಾಶ್ಚಾತ್ಯ ನಾಗರಿಕತೆಗೆ ವಿನಾಶದಿಂದ ಉಳಿಯುವ ವಿಶ್ವಪ್ರಕಾಶ ಮಾತ್ರ ನನಗೆ ಕಾಣುತಿದೆ. ತಮ್ಮ ಉತ್ತರದಲ್ಲಿ ಗಾಂಧೀಜಿ ಬರೆದರು. ನೀವು ನೋಡಿದಾಗಿನಂ ತೆಯೇ ನಾ ಇರುವೆ. ನನ್ನ ವಿಶ್ವಾಸ ಪ್ರಜ್ವಲಿಸುತಿದೆ. ಕತ್ತಲಾದರೆ ಮೊದಲಿಗಿಂತ ಹೆಚ್ಚು ತೇಜಸ್ವಿಯಾಗಿ ಪ್ರಜ್ವಲಿಸುತಿದೆ"

ಚೀನ ರಾಯಭಾರಿಗಳಾದ ಡಾ ಲೋಚಿನ್ ಲುಯೆನ್‌ರು ಪಂಡಿತ ನೆಹರೂರವರೊಡನೆ ಗಾಂಧೀಜಿಯನ್ನು ಕಾಣಲು ಬಂದರು.

ಘಟನೆಗಳ ಶಕ್ಯವಸಾನವೆಂತಾಗಬಹುದೆಂದು ನೀವು ತಿಳಿಯುವಿರಿ? ಭವಿಷ್ಯತ್ತಿನ ಬಗ್ಗೆ ನಿಮ್ಮ ಅಭಿಪ್ರಾಯವೇನು' ಎಂದು ಅವರು ಕೇಳಿದರು.

"ನಾನು ಅತ್ಯಂತಿಕ ಆಶಾವಾದಿ" ಎಂದು ತ್ತರಿಸಿದರು ಗಾಂಧೀಜಿ.

"ಬಂಗಾಲ ಬಿಹಾರ ಮತ್ತು ಪಂಜಾಬಗಳಲ್ಲಿ ನಡೆದ ತೀರಗೆಟ್ಟ ಹತ್ಯಾಕಾಂಡದಿಂದ ಈಗ ಕಾಣುತಿರುವಂತೆ ನಾವುಕಲುಕರಾಗಿಯೆ ಮಾರ್ಪ ಡಿಸುವುದಾದರೆ ಈ ಯೆಲ್ಲ ವರುಷಗಳ ವರೆಗೆ ನಾವು ನಿರ್ಥಕವಾಗಿ ಬಾಳಿಲ್ಲ ಮತ್ತು ಪರಿಶ್ರಮಪಟ್ಟಿಲ್ಲ. ನಾವೀಗ ಪರಕೀಯ ಸತ್ತೆಯನ್ನು ಬಡಿದೋಡಿಸುವುದರ ಹಿಕೆಯಲ್ಲಿ ಎಲ್ಲ ಬಗೆಯ ರಾಡಿಸು ಮತ್ತು ಬುರುಗು ಎಲ್ಲ ಮೇಲಕ್ಕೆ ಬರುತ್ತಿರುವವರ ಅಸ್ತಿಯಿದೆಂದು ನಾನು ಭಾವಿಸುತ್ತೇನೆ. ಗಂಗಾ ನದಿಗೆ ಮಹಾಪೂರ ಬಂದಾಗ ನೀರು ಕಲಕಮಲಕಾಗುವದುಂಟು. ರಾಡಿ ಮೇಲಕ್ಕೆ ಬರುತ್ತದೆ. ಮಹಾಪೂರು ಇಳಿದಾಗ ನೇತ್ರಾನಂದಕರವಾದ ಸ್ವಚ್ಛ ನೀರು ಕಂಗೊಳಿಸುತಿದೆ. ಅದೇ ನನ್ನ ಆಸೆ ಅದಕ್ಕಾಗಿಯೇ ನಾನು ಬಾಳುತ್ತೇನೆ. ಹಿಂದೀ ಮಾನವೀಯತೆ ಕಟಕಟನಕ್ಕೆ ಇಳಿಯುವದನ್ನು ನೋಡಲು ಬದುಕುವ ಇಚ್ಛೆ ನನಗೆ ಇಲ್ಲ.

"ಭವಿಷ್ಯತ್ತನ್ನು ಯಾರು ಹೇಳಬಲ್ಲರು? ಅನೇಕ ದಶಕಗಳ ಹಿಂದೆ ನಾನು ಬಟ್ಲರರ ವಿವರಣೆಯನ್ನೋದಿದೆ. ಭವಿಷ್ಯತ್ತು ನಮ್ಮ ಭೂತಕಾಲದ ಕರಿಚಾಪುವೆ ಎಂದು ಅದರಲ್ಲಿ ಓದಿದ್ದೆ. ಹಿಂದೀ ನಂಬಿಕೆಗೆ ಇದು ಸರಿಹೋಗುವದರಿಂದ ಈ ವಿಚಾರ ನನ್ನಲ್ಲಿ ಉಳಿದಿದೆ. ನಮ್ಮ ಭವಿಷ್ಯತ್ತಿನ ನಿರ್ಮಾಪಕರು ನಾವೆ. ವರ್ತಮಾನವನ್ನು ನಾನು ಸರಿಪಡಿಸಬಲ್ಲೆವು ಅಲ್ಲದೆ ಕೆಡಿಸಬಲ್ಲೆವು. ನಮ್ಮ ಭವಿಷ್ಯತ್ತು ಇದನ್ನೇ ಅವಲಂಬಿಸುವದು.

ಚೀನ ರಾಯಭಾರಿಯು ವಿಚಾರಶೀಲನಾಗಿದ್ದ. ಇತಿಹಾಸದ ಪಾಠವನ್ನು ನಾವು ಕಲಿಯುವದಿಲ್ಲಾದ್ದರಿಂದ ಇತಿಹಾಸ ಕೆಲ ಸಮಯ ಪುನರಾವೃತ್ತಿಯನ್ನು ಹೊಂದುತಿದೆ" ಅವರೆಂದರು. "ಅದು ಅರ್ಧ ಸತ್ಯ ಮಾತ್ರ" ಎಂದು ಉತ್ತರಿಸಿದರು ಗಾಂಧೀಜಿ "ಇತಿಹಾಸ ಇಂದು ತಾನೇ ಪುನರಾವೃತ್ತಿಯನ್ನು ಹೊಂದುತಿದೆಂದು ಕಾಣಬಹುದು. ಯಾವದೂ ಅಚಲವಾಗುಳಿಯಲಾರದೆಂದು ನನ್ನ ನಂಬಿಕೆ ಮಾನವೀ ಸ್ವಭಾವದ ಅಂತಸ್ತು ಮೇಲಕ್ಕಾದರೂ ಏರುತ್ತದೆ ಕೆಳಗಾದರೂ ಇಳಿಯುತ್ತದೆ. ಹಿಂದುಸ್ತಾನದಲ್ಲಿ ಅದು ಮೇಲಕ್ಕೇರುತ್ತದೆಂದು ನಾವು ನಂಬೋಣ. ಇಲ್ಲದಿದ್ದರೆ ಹಿಂದುಸ್ತಾನಕ್ಕೆ ಬದುಕು ಇದೇ ಜಗತ್ತಿಗೆ ಸಹಾಯ ಬೇರೇನೂ ಉಳಿಯಲಾರದು."

ಚೀನದಲ್ಲಿ ಯುದ್ಧದಿಂದ ಸಂಭವಿಸಿದ ಮಹಾ ಅನರ್ಥದ ಬಗ್ಗೆ ಅವರು ಮಾತಾಡಿದರು. ಯುದ್ಧದಿಂದ ಪರಿತಪ್ತವಾದ ಏಶಿಯಾ ರಾಷ್ಟ್ರಗಳು ಹಿಂದುಸ್ತಾನದ ಉದಾಹರಣೆಯನ್ನು ಶೀಘ್ರವೆ ಅನುಸರಿಸುವರೇ? ಹಿಂದು ಸ್ವಸ್ಥ ತನ್ನ ವರ್ಚಸ್ಸನ್ನು ಎತ್ತ ಉಪಯೋಗಿಸುವದೆಂಬುದನ್ನು ಈ ಪ್ರಶ್ನೆಯ ಉತ್ತರ ಅವಲಂಬಿಸುತ್ತದೆ. "ಹಿಂದುಸ್ತಾನ ಜಗತ್ತಿನಲ್ಲಿ ಶಾಂತಿಗೆ ಕಾರಣವಾಗುವದು" ಎಂಬುದಾಗಿ ಅವರು ಪ್ರಾರ್ಥನೋತ್ತರ ಸಭೆಯೊಂದರಲ್ಲಿ ನುಡಿದರು. "ಯಾವ ಅಹಿಂಸೆಯಿಂದ ನೀವು ಸ್ವಾತಂತ್ರ್ಯವನ್ನು ಸಂಪಾದಿಸಿದಿರೊ ಆ ನಿಮ್ಮ ಅಹಿಂಸೆ ಎಲ್ಲದೆ ಎಂದು ಜಗತ್ತು ಕೇಳುತ್ತದೆ. ನಾಚಿಕೆಯಿಂದ ನಾನು ತಲೆ ಕೆಳಗೆ ಹಾಕಬೇಕಾಗುತ್ತದೆ. ಸ್ವತಂತ್ರ ಭಾರತ ಜಗತ್ತಿಗೆ ಶಾಂತಿ ಪಾಠ ಕಲಿಸುವದೊ ಇಲ್ಲವೆ ದ್ವೇಷ ಮತ್ತು ಹಿಂಸೆಯ ಪಾಠ ಕಲಿಸುವದೊ? ಈ ದ್ವೇಷ ಮತ್ತು ಹಿಂಸೆಯಿಂದ ಜಗತ್ತು ಈಗಾಗಲೆ ಬಳಲಿಬೆಂದಾಗಿದೆ.

ವಿದ್ವಾಂಸರಾದ ರಾಯಭಾರಿಗಳು ಚೀನೀಯರ ಪ್ರೇಮಪೂರ್ವಕ ವಂದನೆಗಳನ್ನು ಗಾಂಧೀಜಿಯವರಿಗೆ ಸಲ್ಲಿಸಿದರು. ಗಾಂಧೀಜಿಯವರು ಅವರ ಪ್ರೇಮವನ್ನು ಅಮೂಲ್ಯವಾಗಿ ಭಾವಿಸಿ ಹಿಂದುಸ್ತಾನವನ್ನು ಬಹಳಮಟ್ಟಿಗೆ ಹೋಲುವ ಚೀನವನ್ನು ಸಂದರ್ಶಿಸುವ ಇಚ್ಛೆಯನ್ನು ವ್ಯಕ್ತಪಡಿಸಿದರು. ರಾಯಭಾರಿಗಳು ಚೀನದ ತತ್ವಜ್ಞಾನದ ಬಗ್ಗೆ ಹೇಳುತ್ತ 'ಸ್ವಾಮಿತ್ವವಿಲ್ಲದೆ ಉತ್ಪಾದನೆ, ಸ್ವಯಂ ನಿರ್ಣಯಾಧಿಕಾರವಿಲ್ಲದ ರಾಷ್ಟ್ರ, ಪ್ರಭುತ್ವವಿಲ್ಲದ ಉತ್ಪತ್ತಿ ಎಂಬ ಲಾಓತ್ಸನ ಸಿದ್ಧಾಂತವನ್ನುಲ್ಲೇಖಿಸಿದರು. ಗಾಂಧೀಜಿಯು ಮುಗುಳುನಕ್ಕರು. 'ನೀವು ಉಪನಿಷತ್ತಿನ ಭಾಷೆಯನ್ನಾಡುತಿರುವಿರಿ' ಎಂದರವರು. "ಈಶೋಪನಿಷತ್ತಿನಲ್ಲಿ ಇದೇ ವಿಚಾರ ಹೇಳಲಾಗಿದೆ" —ಎಸ್. ಎನ್.

೨೮ ಮೇ ೧೯೪೭

ವಾರದ ಪತ್ರ

(೯ನೇ ಪುಟದಿಂದ)

ಮುಗು ಅನೇಕ ವರ್ಷಗಳಿಂದ ಕೂಗಾಡುತಿದ್ದಾರೆ. ಅದಕಾಗಿ ಅವರನ್ನು ಕೇಳಬೇಕು. ಸುಮ್ಮನಿದ್ದ ನಾಗರಿಕರನ್ನು ದೇಶದ ಭವಿತವ್ಯವನ್ನು ರೂಪಿಸುವಾಗ ಕೇಳಲೇಬೇಡವೆ?

ಈ ಪ್ರಶ್ನೆ ವಿಹಿತವೂ ಸಮಂಜಸವೂ ಆಗಿದೆಯೆಂದರು ಗಾಂಧೀಜಿ. ಸಿಖರೂ ಹಿಂದುಗಳೂ ಮುಸ್ಲಿಮರೂ ತಾವು ಮಾತ್ರವೇ ಮಹತ್ವದವರೆಂದೂ ಉಳಿದ ಸಮಾಜಗಳ ಹಕ್ಕುಗಳು ತಮ್ಮವುಗಳಿಗಿಂತ ಕೆಳತರಗತಿಯವೆಂದೂ ಭಾವಿಸಿದರೆ ಅವರು ಅಯೋಗ್ಯರೇ ಸರಿ. ನಿರುಪದ್ರವಿಗಳ ಶಾಪದಿಂದ ಅವರು ನಷ್ಟರಾಗಿ ಹೋಗುವರು. ಅಂಥ ಸರಕಾರ ರಾಮರಾಜ್ಯ ಅಥವಾ ಭೂತಲ ಸ್ವರ್ಗವೆಂದು ಎನಿಸುವದು ಅಸಾಧ್ಯ. ಕೀಳರಿಗಿಂತ ಕೀಳರನ್ನೂ ಸಮಾನವಾಗಿ ನಡೆಸಿಕೊಳ್ಳುವದು ಪ್ರತಿಯೊಬ್ಬ ನಾಗರಿಕನ ಕರ್ತವ್ಯ ಕೆಲವರು ಹುಚ್ಚುಗೆಟ್ಟು ಹೋದರೆ ಉಳಿದವರೂ ಅದೇ ದಾರಿ ಹಿಡಿಯುವದು ನ್ಯಾಯವಲ್ಲ. ಹಿಂದೀಯರು ಸ್ವತಂತ್ರರಾಗಿ ಬಾಳಲು ನಿರ್ಧರಿಸಿದರೆ ಜಗತ್ತಿನಲ್ಲಿ ಯಾರೂ, ಏಕೆ, ಪ್ರಬಲ ಜನಾಂಗಗಳು ಒಟ್ಟಾದರೆ ಕೂಡ, ಅವರನ್ನು ಮುರಿಯಲಾರವು. —ಸು. ನ.

೨೯—೫—೪೭

ಸಂಗ್ರಹಿತ

ಗಾಂಧೀಜಿ ಈ ವಾರದಲ್ಲಿ ತಮ್ಮ ಗೆಳೆಯರಿಗೆ ಬರೆದ ಪತ್ರಗಳೊಳಗಿಂದ ಕೆಳಗಿನವನ್ನು ಆರಿಸಿಕೊಳ್ಳಲಾದೆ.

"ಎಲ್ಲ ಬಗೆಯ ರಕ್ಷಿತ ಮತ್ತು ಪಾಲಿತ ಹಕ್ಕುಗಳು ಕರ್ತವ್ಯಬುದ್ಧಿಯಿಂದ ಮಾಡಿದ ಕೆಲಸದಿಂದಲೆ ಪ್ರಾಪ್ತವಾಗುವವು. ಜಗತ್ತಿನ ನಾಗರಿಕನೆಂಬ ಕರ್ತವ್ಯ ಮಾಡಿದಾಗಲೆ ಜೀವಿಸುವ ಹಕ್ಕು ಮಾನವನಿಗೆ ಪ್ರಾಪ್ತವಾಗುತಿದೆ. ಈ ಮೂಲಭೂತ ತತ್ವವನ್ನು ತಿಳಿದುಕೊಂಡದ್ದಾದರೆ ಸ್ತ್ರೀ-ಪುರುಷರ ಕರ್ತವ್ಯವನ್ನು ಉಲ್ಲೇಖಿಸಲು ಸುಲಭವಾಗುವದು ಅಲ್ಲದೆ ಮೊದಲು ಮಾಡತಕ್ಕ ಕರ್ತವ್ಯಕ್ಕನುಸಾರವಾಗಿಯೆ ಅವರ ಹಕ್ಕುಬಾಧ್ಯತೆಗಳು ಸಂಬಂಧಿಸುತಿವೆ. ತದ್ವ್ಯತಿರಿಕ್ತವಾದ ಹಕ್ಕುಬಾಧ್ಯತೆಗಳನ್ನು ಪಡೆಯುವುದಂದರೆ ಬಲಾತ್ಕಾರವೆನಿಸುವುದು ಮತ್ತು ಅಂಥ ಹಕ್ಕಿಗಾಗಿ ಬಡಿದಾಡುವದು ಕೂಡ ನ್ಯಾಯ್ಯವೆನಿಸಲಾರದು"

"ಹಿಂದುಸ್ತಾನದ ಕೋಟ್ಯವಧಿ ಬಡಜನರಿಗಾಗಿ ನಿಸರ್ಗ ಚಿಕಿತ್ಸೆಯ ವಿಧಾನವನ್ನು ಇದೀಗ ನಾನು ಪ್ರಯೋಗಿಸುತ್ತಿದ್ದೇನೆ. ಪೃಥ್ವಿ ಅಪ್, ತೇಜ, ಆಕಾಶ ಮತ್ತು ವಾಯು ಈ ಪಂಚಭೂತಗಳ ಉಪಯೋಗದಿಂದ ಪ್ರಾಪ್ತವಾಗುವ ಚಿಕಿತ್ಸೆಯ ಬಗ್ಗೆ ಮಾತ್ರ ನಾನು ಗಮನಿಸುತ್ತೇನೆ. ಹಲವು ಕೋಟಿ ಜನರು ರಾಮನೆಂದು ಕರೆವ ಇನ್ನು ಹಲವು ಕೋಟಿ ಜನರು ಅಲ್ಲಾ ಎಂದು ಕರೆವ ಪರಮಾತ್ಮನ ನಾಮೋಚ್ಚಾರಣೆಯನ್ನು ಶುದ್ಧಾಂತಃಕರಣದಿಂದ ಮಾಡುವದೆ ಎಲ್ಲ ರೋಗಗಳಿಗೆ ರಾಮಬಾಣ ಉಪಾಯವೆಂಬ ತಿಳುವಳಿಕೆ ಸ್ವಾಭಾವಿಕವಾಗಿ ಮಾನವನಲ್ಲಿ ಉಂಟಾಗುತಿದೆ. ಭಕ್ತಿಪೂರ್ವಕವಾದ ಈ ಬಗೆಯ ನಾಮೋಚ್ಚಾರಣೆ ಮಾಡುವದೆಂದರೆ ಸೃಷ್ಟಿದೇವತೆ ಹಾಕಿಕೊಟ್ಟ ನಿಯಮ ನಿಬಂಧನೆಗಳನ್ನು ತಿಳಿದುಕೊಳ್ಳುವ ಹೊಣೆಯನ್ನು ಹೊತ್ತುಕೊಂಡಂತೆಯೆ. ಈ ಬಗೆಯ ವಿಚಾರ ಸರಣಿಯು ಚಿಕಿತ್ಸೆಗಿಂತ ಪ್ರತಿಬಂಧವೇ ಲೇಸೆಂಬ ನಿರ್ಣಯಕ್ಕೆ ಮಾನವನನ್ನು ಮುಟ್ಟಿಸುತ್ತದೆ. ಶುದ್ಧಾಂತಃಕರಣ, ಶರೀರ ಮತ್ತು ಸುತ್ತಲಿನ ಪ್ರದೇಶವನ್ನೆಲ್ಲ ಸ್ವಚ್ಛವಿಡುವ ಮೊದಲಾದ ಆರೋಗ್ಯ ನಿಯಮಗಳನ್ನು ಮನಸಿನಲ್ಲಿ ದೃಢಪಡಿಸಿಕೊಳ್ಳಬೇಕಾಗುತ್ತದೆ.

ಧೈರ್ಯವನ್ನು ಅವಲಂಬಿಸಿರಿ

(೮ ನೇ ಪುಟದಿಂದ)

ತತ್ತು. ಅದುದರಿಂದಲೇ ಜಿನ್ನಾರ ಪ್ರತಿನಿಧಿಯಾಗಬಲ್ಲೆನೆಂದು ಹೇಳಿದೆ; ಅಷ್ಟೇ ಏಕೆ,ನನಗೆ ಹಕ್ಕಿಲ್ಲವೆಂದು ಅವರು ಹೇಳಿದರೂ ಅಂಗ್ಲರಿಗೂ ಸಹ ನಾನು ನಿಮ್ಮ ಪ್ರತಿನಿಧಿಯೆಂದು ಹೇಳುವ ಹಕ್ಕಿದೆಯೆನ್ನುತ್ತೇನೆ. ನನ್ನ ಕತ್ತಿಗಾರನಾದ ಒಬ್ಬ ಪಠಾನನು ಒಂದು ಸಲ ನನ್ನ ವಿರೋಧಿಯಾಗಿದ್ದು ಆ ಬಳಿಕ ತನ್ನ ತಪ್ಪನ್ನು ತಿಳಿದುಕೊಂಡು ಮಿತ್ರನಾದನು ಎಂಬುದೇ ಇದಕ್ಕೆ ನಿದರ್ಶನ."

"ಸ್ವತಂತ್ರ ಹಿಂದುಸ್ತಾನದಲ್ಲಿ ಭೋಪಾಲ ನವಾಬಶಾಹಿಯಾಗಲಿ ಬಿಲಾರಶಾಹಿಯಾಗಲಿ ಇರಲಾರದೆಂದು ಹೇಳಬಯಸುತ್ತೇನೆ. ಅಲ್ಲಿರುವುದು ಪಂಚಾಯತ ರಾಜ್ಯ. ಸ್ವತಂತ್ರ ಹಿಂದುಸ್ತಾನದಲ್ಲಿ ವ್ಯಕ್ತಿಗಳು ಕೇವಲ ವ್ಯಕ್ತಿಗಳಷ್ಟೆ. ಆದುದರಿಂದ ಕಾಶ್ಮೀರದಲ್ಲಿ ನನ್ನೆನ್ನನಾದ ಮಹಾರಾಜನು ಗಣ್ಯನಲ್ಲ; ಬಹುಸಂಖ್ಯಾತ ಪ್ರಜೆಗಳಾದ ಮುಸ್ಲಿಮರೇ ಗಣ್ಯರು. ಇದೇ ನಿಯಮವು ಹೈದರಾಬಾದ, ಭೋಪಾಲ, ತ್ರಾವಣಕೋರ, ಬರೋಡ ಮತ್ತು ಉಳಿದೆಲ್ಲ ರಾಜ್ಯಗಳರಾಜರಿಗೂ ಅನ್ವಯಿಸುತ್ತದೆ. ಹಿಂದು ಮತ್ತು ಮುಸ್ಲಿಂ ರಾಜರು ಪಕ್ಷ ಕಟ್ಟಲಾರರೆಂದು ನನ್ನ ದೃಢ ವಿಶ್ವಾಸ. ಅವರು ಹಾಗೆ ಮಾಡಿದರೆ ಆ ದಿನ ದುರ್ದಿನವೇ ಸರಿ. ಆದುದರಿಂದ ಘಟನಾ ಸಮಿತಿಗೆ ಸೇರುವುದೇ ರಾಜರಿಗೆ ಯುಕ್ತವಾದ ಮಾರ್ಗ. ಬ್ರಿಟಿಶರು ಪ್ರಾಮಾಣಿಕರಾದರೆ ತಂಟೆ ತಕರಾರು ಮಾಡಲು ಯಾವ ಒಬ್ಬ ಅರಸನೂ ಉಳಿಯದಂತೆ ನೋಡಿಕೊಳ್ಳುತ್ತಾರೆ."

"ಈಗ ನಾನು ನನ್ನ ಮಗನಾಗಿ ಬಂದಿದ್ದ ಚಕ್ರಯ್ಯನ ವಿಷಯವಾಗಿ ಹೇಳುತ್ತೇನೆ. ಈ ಹರಿಜನನು ೨ ದಿನಗಳ ಹಿಂದೆ ಮುಂಬಯಿಯ ಆಸ್ಪತ್ರೆಯೊಂದರಲ್ಲಿ ತೀರಿಕೊಂಡನು. ಅವನು ಸತ್ವವಂತನೂ, ಮೂಲ ಶಿಕ್ಷಣ ಪಡೆದವನೂ, ಆದರ್ಶ ಆಚಾರಶೀಲನೂ ಹಿಂದುಸ್ತಾನಿಯನ್ನು ಬಲ್ಲವನೂ ಆದ ಆಂಧ್ರ ತರುಣನಾಗಿದ್ದನು. ಸತ್ತರೂ ಚಿಂತೆಯಿಲ್ಲ. ಪ್ರಕೃತಿ ಚಿಕಿತ್ಸೆಯನ್ನೇ ನಾನು ಮಾಡಿಸಿಕೊಳ್ಳುತ್ತೇನೆಂದು ಅವನು ಹೇಳುತ್ತಿದ್ದನು. ಮೆದುಳಿನ ರೋಗವೊಂದರ ನಿಮಿತ್ತವಾಗಿ ಅಪರೇಶನ ಮಾಡಿಸಿಕೊಳ್ಳಬೇಕೆಂದು ನಾನು ಒತ್ತಾಯಮಾಡಬೇಕಾಯ್ತು. ಎಷ್ಟೇ ಜಾಗೃತಿ ವಹಿಸಿದರೂ ಆ ಅಪರೇಶನ್ನೇ ಅವನಿಗೆ ಮಾರಕವಾಗಿ ಪರಿಣಮಿಸಿತು. ಎಚ್ಚರವಿರುವಾಗ ಚಕ್ರಯ್ಯನು ರಾಮ ರಾಮ ಎನ್ನುತ್ತಿದ್ದು ಅನಂತರ ಕಣ್ಣು ಮುಚ್ಚಿದನೆಂಬುದಕ್ಕಾಗಿ ನಾನು ಹೆಮ್ಮೆ ಪಡುತ್ತೇನೆ. 'ಬದುಕಿದರೆ ಆಂಧ್ರದೇಶದ ಹರಿಜನರೊಡನೆ ಕೆಲಸ ಮಾಡುವೆನೆಂದು ಅವನು ಹೇಳುತ್ತಿದ್ದ" ರಾಜಮಹಾರಾಜರ ಹೆಸರುಗಳ ಜೊತೆಗೆ ಗಾಂಧೀಜಿಯು ಚಕ್ರಯ್ಯನ ಹೆಸರನ್ನು ಸೇರಿಸಿದ್ದಕ್ಕೆ ಅದರದೇ ಆದ ಒಂದು ಅರ್ಥವಿದೆ.

೧—೬—೪೭

ಕುರಾಣದ ಪದ್ಯವನ್ನು ಓದಿದ ಕೂಡಲೇ ಯಥಾಪೂರ್ವ ಗಲಭೆಗೆ ಪ್ರಾರಂಭವಾಯಿತು. ಜನರು ತಾಳ್ಮೆಯಿಂದಿರಬೇಕೆಂದೂ ಗಲಭೆಗಾರನು ಸುಮ್ಮನಿದ್ದರೆ ಅವನನ್ನು ಪೋಲೀಸರು ಹೊರದೂಡಬಾರದೆಂದೂ ಗಾಂಧೀಜಿ ಕೇಳಿಕೊಂಡರು. ಜನರೂ ಪೋಲೀಸರೂ ಹಾಗೆ ನಡೆದುಕೊಂಡದ್ದಕ್ಕಾಗಿ ಅವರನ್ನು ಗಾಂಧೀಜಿ ಅಭಿನಂದಿಸಿದರು. ಕಡೆಗೆ ಗಲಭೆಗಾರನತ್ತ ತಿರುಗಿ ಗಾಂಧೀಜಿ— "ನೀನು ಹೀಗೆ ಮಾಡಿದರೆ ನಿತ್ಯದಲ್ಲಿ ಮಾಡುವ ಭಜನೆಯು ಇಂದು ನಿನಗೆ ಸಿಗರದು ಎಂದರು.

"ಈಪ್ರಕಾರ ನೀನು ಕೆಟ್ಟ ನಡತೆಯನ್ನು ಪ್ರದರ್ಶಿಸಬಾರದಿತ್ತು. ನಾನೂ ನಿನ್ನಂತೆಯೇ ಒಬ್ಬ ಹಿಂದು ಸನಾತನಿ. ಜನಿವಾರ ಜುಟ್ಟಿಗಳು ಹಿಂದುವಿನ ಪವಿತ್ರ ಹೃದಯವನ್ನೂ ಸಹನಶೀಲವನ್ನೂ ಇಲ್ಲದಂತೆ ಮಾಡಲಾರವು." ಎಂದು ಹೇಳಲು ಗಲಭೆಮಾಡಿದವನು ಸುಮ್ಮನಾದನು ಮತ್ತು ಭಜನೆ ರಾಮಧುನಗಳು ನಿರ್ವಿಘ್ನವಾಗಿ ಸಾಗಿದವು. ಕಡೆಗಾದರೂ ಅವನು ಅತ್ಮಸಂಯಮವನ್ನು ತೋರಿಸಿದ್ದಕ್ಕೆ ಗಾಂಧೀಜಿ ಅವನನ್ನು ಅಭಿನಂದಿಸಿದರು. ಅನಂತರ "ನಾನು ಬಂದರೆ ಜನರು ರೇಗಬಹುದು, ಆದುದರಿಂದ ಈದಿನ ಪ್ರಾರ್ಥನೆಗೆ ನಾನು ಬರುವುದಿಲ್ಲವೆಂದು ಬಾದಶಹಖಾನರು ಹೇಳಿದ್ದರಿಂದ ನನಗೆ ಖೇದವಾಗಿದೆ.

ನಾನೇನೋ ಒತ್ತಾಯಮಾಡಿದೆ. ಪ್ರತಿದಿನ ಗಲಭೆಗಳಾಗುವುದು ಒಂದು ಹುಚ್ಚುತನ ಮತ್ತು ಅದರಿಂದ ಹಿಂದೂ ಧರ್ಮಕ್ಕೆ ಏನೂ ಒಳ್ಳೆಯದಾಗುವದಿಲ್ಲ. ಸ್ವತಂತ್ರರಾದ ಜನರು ಬ್ರಿಟಿಶರಂತೆ ಶಿಸ್ತಿನವರಾಗಿರಬೇಕು. ನೀನು ಅಂಗ್ಲಭೂಮಿಯ ರಾಣಿಯಾಗಬೇಕೆಂದು ೧೬ ವರ್ಷ ವಯಸ್ಸಿನ ವಿಕ್ಟೋರಿಯಾಳಿಗೆ ಮಧ್ಯರಾತ್ರಿಯಲ್ಲಿ ಎಬ್ಬಿಸಿ ಹೇಳಿದ್ದು ನಿಮಗೆ ಗೊತ್ತಿರಬಹುದು ದೇವರು ಹೊರಿಸಿದ ಭಯಂಕರವಾದ ಹೊಣೆಯನ್ನು ಕಂಡು ಆ ಚಿಕ್ಕ ಹುಡುಗಿಯು ಹೆದರಿ ಕಕ್ಕಾವಿಕ್ಕಿಯಾದಳು. ನಮಸ್ಕರಿಸುತ್ತಿದ್ದ ಹಾಗೇ ವೃದ್ಧನಾದ ಮುಖ್ಯಮಂತ್ರಿಯು ಅವಳನ್ನು ಸಂತೈಸಿದನು. ಅವಳು ತಾನು ಒಳ್ಳೆಯವಳಾಗಿರುತ್ತೇನೆಂದಿಷ್ಟೇ ಹೇಳಿದಳು ಶಿಸ್ತನ್ನು ಬಲ್ಲ ಬ್ರಿಟಿಶ ಜನರು ಅವಳಿಗೆ ಅಳಗೊಟ್ಟರು. ಇಂದು ಸ್ವಾತಂತ್ರ್ಯವು ನಿಮ್ಮ ಬಾಗಿಲಲ್ಲಿದೆ ಯೆಂದು ಹೇಳಬಯಸುತ್ತೇನೆ. ವಾಯಿಸರಾಯರು ಹೆಸರಿಗೆ ಮಾತ್ರ ಮಂತ್ರಿಮಂಡಲದ ಅಧ್ಯಕ್ಷರಾಗಿದ್ದಾರೆ. ದೇಶದ ಆಡಳಿತದಲ್ಲಿ ಅವರ ಸಹಾಯವೇನನ್ನೂ ತೆಗೆದುಕೊಳ್ಳದೆ ನೀವು ಅವರಿಗೆ ಸಹಾಯ ಮಾಡಬಲ್ಲಿರಿ. ನಿಮ್ಮ ಅಕಿರೀಟ ರಾಜರೆಂದರೆ ನೆಹರೂರವರೆ. ಅವರು ರಾಜರಾಗಿಯಲ್ಲ, ನಿಮ್ಮ ಪ್ರಥಮಸೇವಕರಾಗಿ ಕೆಲಸ ಮಾಡುತ್ತಿದ್ದಾರೆ. ಹಿಂದುಸ್ತಾನದ ಸೇವೆ ಮಾಡುವದರ ಮೂಲಕ ಜಗತ್ತಿನ ಸೇವೆ ಮಾಡಬೇಕೆಂಬುದೇ ಅವರ ಅಪೇಕ್ಷೆ. ಜವಾಹರರೊಬ್ಬ ಅಂತರ್ರಾಷ್ಟ್ರೀಯ ಮುತ್ಸದ್ದಿಯಿದ್ದಾರೆ. ಈಗ ಹಿಂದುಸ್ತಾನದಲ್ಲಿರುವ ಪರರಾಷ್ಟ್ರದ ಪ್ರತಿನಿಧಿಗಳೆಲ್ಲರೊಡನೆಯೂ ಅವರು ಮೈತ್ರಿಯುತವಾದ ಸಂಬಂಧವಿಟ್ಟುಕೊಂಡಿದ್ದಾರೆ. ಜನರು ತಮ್ಮ ಅವ್ಯವಸ್ಥೆಯ ನಡತೆಯಿಂದ ಕೆಲಸ ಕೆಡಿಸುತ್ತಿದ್ದಾರೆ. ಜವಾಹರರೊಬ್ಬರೇ ಈ ದೇಶದ ಆಡಳಿತವನ್ನು ಸಾಗಿಸಲಾರರು. ಹಿಂದಿನ ನಿರಂಕುಶ ಪ್ರಭುಗಳಂತೆ ಖಡ್ಗಶಕ್ತಿಯಿಂದ ಅವರು ಆಳಲಾರರು. ಜವಾಹರ ಎಂದರೆ ಒಂದು ರತ್ನವೇ ಸರಿ. ಮಂತ್ರಿಗಳ ಕರ್ತವ್ಯವನ್ನು ಸುಲಭವಾಗಿ ಮಾಡಿಕೊಡುವುದು ಪ್ರತಿಯೊಬ್ಬನ ಕೆಲಸ. ಅವರು ಒತ್ತಾಯದಲ್ಲಿ ಸಿಕ್ಕುವಂತೆ ಯಾರೂ ಮಾಡಲಾಗದು."

"ಈಗ ಒಂದು ವರ್ಷದ ಹಿಂದೆ ಜವಾಹರರು ದಿಲ್ಲಿಯಲ್ಲಿರಬೇಕಾದ ಅಗತ್ಯವಿದ್ದರೂ ಕಾಶ್ಮೀರಕ್ಕೆ ಹೋದದ್ದು ಮತ್ತು ಆಗಿನ ಕಾಂಗ್ರೆಸ್ ಅಧ್ಯಕ್ಷರಾದ ಮೌ. ಆಜಾದರ ಆಜ್ಞೆಯ ಮೇರೆಗೆ ವಾಪಸು ಬಂದದ್ದು—ಈ ಎಲ್ಲವನ್ನೂ ನೀವು ಬಲ್ಲಿರಿ. ಮತ್ತೆ ಕಾಶ್ಮೀರಕ್ಕೆ ಹೋಗಬೇಕೆಂದು ಹೇಳುತ್ತಿದ್ದಾರೆ. ಪಂಡಿತರು. ಕಾಶ್ಮೀರೀ ಜನರ ಮುಖಂಡರಾದ ಶೇಖ ಅಬ್ದುಲ್ಲಾರವರು ಜೈಲಿನಲ್ಲಿರುವುದರಿಂದ ಅವರಿಗೆ ಬಹಳ ವ್ಯಥೆಯಾಗಿದೆ. ಇಲ್ಲಿಯೇ ಅವರ ಅಗತ್ಯ ಹೆಚ್ಚಾಗಿರುವುದರಿಂದ ಅವರ ಬದಲಿಗೆ ಕಾಶ್ಮೀರಕ್ಕೆ ನಾನೇ ಹೋಗುವೆನೆಂದೆನು. ಜವಾಹರರು ನನ್ನನ್ನು ಹೋಗಗೊಡುವುದರ ಮುನ್ನ ಬಹಳ ಸಂಗತಿಗಳನ್ನು ಪರ್ಯಾಲೋಚಿಸಬೇಕಾಗಿದೆ. 'ಅಲ್ಲಿಗೆ ಹೋದರೂ ನಾನು ಸದೇಹವಾಗಿ ಬಿಹಾರ ಬಂಗಾಲಗಳಲ್ಲಿದ್ದಂತೆಯೇ ಅವುಗಳಿಗೆ ಸೇವೆ ಸಲ್ಲಿಸಬಲ್ಲೆನು"

"ಉಳಿದವರಂತೆ ಹಿಂದುಸ್ತಾನದ ರಾಜರೆಲ್ಲರೂ ಕೇವಲ ವ್ಯಕ್ತಿಗಳೆಂದು ಒತ್ತಿ ಹೇಳುತ್ತೇನೆ. ಪ್ರಜೆಗಳ ಸೇವಕರೆಂದುಕೊಂಡು ಮಾತ್ರ ಅವರು ಆತ್ಮಸಮರ್ಥನೆ ಮಾಡಿಕೊಳ್ಳಬಹುದು. ಹಿಂದುಸ್ತಾನದ ಎಲ್ಲ ಮೂಲೆಗಳಿಂದಲೂ ಬ್ರಿಟಿಶ ಸತ್ತೆ ಹೊರಟುಹೋಗುತ್ತದೆ ಮತ್ತು ಪ್ರಜಾಸತ್ತೆಯು ಹಿಂದುಸ್ತಾನದಲ್ಲಿ ಯಾವ ಕಡೆಯಲ್ಲೂ ಬೇರೆ ವಿಧದ ಆಳಿಕೆಯಿರುವುದನ್ನು ಯೋಚಿಸಲೂ ಸಾಧ್ಯವಿಲ್ಲ".

"ರಾಜರಿಗೆ ನಾನೇನು ಹೇಳಿದೆನೋ ಆ ಮಾತು ಐಶ್ವರ್ಯವಂತರಾದ ವ್ಯಾಪಾರಿ ಜಾತಿಗೂ ಅನ್ವಯಿಸುತ್ತದೆ. ತಮ್ಮ ವ್ಯಾಪಾರದಲ್ಲಿ ಅವರು ಪ್ರಾಮಾಣಿಕರೂ ಪವಿತ್ರರೂ ಆಗಿರಬೇಕು ಮತ್ತು ಜನರಿಗಾಗಿ ತಮ್ಮ ಉದ್ಯೋಗವನ್ನು ನಡೆಸಬೇಕಲ್ಲದೆ ತಮಗಾಗಿ ಅಲ್ಲ. ಉಪ್ಪಿನ ಕರ ಹೆಚ್ಚಾದಂತೆ ಎಲ್ಲ ವಸ್ತುಗಳ ಬೆಲೆ ಏರುವದಕ್ಕೂ ಕಾಳಸಂತೆಗೂ ಅವರೇ ಕಾರಣರು. ನನ್ನಂತೆಯೇ ಅವರೆಲ್ಲ ಪ್ರಾಮಾಣಿಕ ಬನಿಯರೇ ಆದರೆ ದೇಶದಲ್ಲಿ ಆಹಾರದ ಕೊರತೆಯಿರುತ್ತಿರಲಿಲ್ಲ ಮತ್ತು ರಾಜೇಂದ್ರ ಬಾಬುಗಳ ಕೆಲಸವೂ ಸುಲಭವಾಗುತ್ತಿತ್ತು" ಎಂದು ಗಾಂಧೀಜಿ ಹೇಳಿದಾಗ ಸಭಿಕರು ಹೊಟ್ಟೆತುಂಬಾ ನಕ್ಕರು.

"ಅಂಗ್ಲರು ಅಲ್ಪಾಹಾರಿಗಳಾಗಿ ಬಾಳುತ್ತಿರುವದನ್ನು ಪಂಡಿತ ನೆಹರೂರವರಿಂದ ಕೇಳಿ ನನ್ನ ಮನಸ್ಸಿಗೆ ಬಹಳ ವ್ಯಾಕುಲವುಂಟಾಗಿದೆ. ಎಲ್ಲರೂ ಪ್ರಾಮಾಣಿಕರಾಗಿ ದುಡಿದರೆ ಮತ್ತು ದೇವರು ಮಳೆಯನ್ನು ಕರುಣಿಸಿದರೆ ಭಾರತವನ್ನು ಬದುಕಿಸಬಹುದಲ್ಲದೆ ಹಸಿದ ಇಂಗ್ಲೆಂಡಿಗೂ ಆಹಾರವನ್ನು ಉಣಿಸಬಹುದು.

ಕರ್ನಾಟಕ

ಬೆಳಗಾವಿ

ಬೆಳಗಾವಿ ಮುನಿಸಿಪಾಲಿಟಿಯ ಸದಸ್ಯರಾಗಿರುವ ಲಕ್ಷ್ಮಣರಾವ ಶಾಹ ಮತ್ತು ರಾಘವೇಂದ್ರರಾವ ಮನ್ನೊಳ್ಳಿಯವರು ಮೇ ೩೦ಕ್ಕೆ ಮುನಿಸಿಪಾಲಿಟಿ ಸಭೆಗಾಗಿ ಮಹಾದ್ವಾರವನ್ನು ಪ್ರವೇಶಿಸುವಾಗ ಯಾರೋ ಅವರನ್ನೆತ್ತಿಕೊಂಡು ಕಾರಿನಲ್ಲಿ ಕೂಡ್ರಿಸಿಕೊಂಡು ಒಯ್ದರು. ಸ್ಥಾಯೀ, ಶಾಲಾ, ಆರೋಗ್ಯ ಸಮಿತಿಗಳ ಚುನಾವಣೆ ನಿಚ್ಚಳ ಬಹುಮತದಿಂದ ನಡೆದವು ಅಧ್ಯಾಪಕ ಮತ್ತು ನಾಗೋಜಿರಾವುರ ನಿಧನದ ಬಗ್ಗೆ ದುಃಖ ಪ್ರದರ್ಶಿಸಲಾಯಿತು. ಸದಸ್ಯರ ಅಪಹಾರದ ಸಂಬಂಧದ ನಿಷೇಧ ಸೂಚಕ ಗೊತ್ತುವಳಿಗೆ ಅಪ್ಪಣೆ ದೊರೆಯಲಿಲ್ಲ.

ಕಳೆದ ತಿಂಗಳಲ್ಲಿ ಶಹಾಪೂರದ ಒಂದು ಅಂಗಡಿಗೆ ೭೬ ತೊಲಿ ಬಂಗಾರ ರಜಿಸ್ಟರಾಗಿ ಬಂದಿತ್ತಂತೆ. ಪೋಸ್ಟಮನ್ನನು ಅಂಗಡಿಗೆ ಬಂದು ಗುಮಾಸ್ತನ ಸಹಿ ತಕ್ಕೊಂಡು ರಜಿಸ್ಟರ ಕೊಡದೆ ಹೋದನಂತೆ. ಆ ಮೇರೆಗೆ ಫಿರ್ಯಾದು ಬಂದದ್ದರಿಂದ ಪೋಸ್ಟಮನ್ನನನ್ನು ಬಂಧಿಸಿರುವರು. ೮ ತೊಲಿ ಬಂಗಾರ ಮಾತ್ರ ದೊರಕಿದೆ.

ಖಾನಾಪುರದ ಶ್ರೀ ಚಂದ್ರಶೇಖರಪ್ಪ ಉಂಜಾರ ಇವರು ಅನ್ಯಾಯದ ವಿಚಾರಣೆ ಮಾಗದಿದ್ದರೆ ಮರಣಾಂತಿಕ ಉಪವಾಸ ಮಾಡುವರಿದ್ದರು. ಅವರು ಕೊಟ್ಟ ನೋಟೀಸಿನ ಪರಿಣಾಮವಾಗಿ ಮಾನ್ಯ ಔದ್ಯೋಗಿಕ ಮಂತ್ರಿಗಳು ಖಾನಾಪುರಕ್ಕೆ ಸ್ವತಃ ಬರುವದಾಗಿ ಆಶ್ವಾಸನ ಕೊಟ್ಟಿದ್ದರಿಂದ ಉಪವಾಸ ಮಾಡುವದನ್ನು ನಿಲ್ಲಿಸಿದ್ದಾರೆ.

ಗೋಕಾಕ ತಾಲೂಕಿನ ಕುನ್ನಾಳ ಗ್ರಾಮಪಲ್ಲಿ ಶಿವನಗೌಡ ಎಂಬವರ ಮನೆ ದರೋಡೆಯಾಗಿ ಸುಮಾರು ೫೦೦ ರೂ. ಆಸ್ತಿಯನ್ನು ದೋಚಿಕೊಂಡು ಹೋಗಿರುವರು ಇತ್ತೀಚೆ ಇಂಥದರೋಡೆಗಳು ಹೆಚ್ಚಾಗಹತ್ತಿವೆ.

ವಿಜಾಪುರ

ಬಾಗಲಕೋಟೆಯ ನಗರ ಸಭೆಯ ಸದಸ್ಯರಾಗಿರುವ ಶ್ರೀ ಸೊಲ್ಲಾಪಟ್ಟಿರಾಮಚ್ಚಾಯಳರ ಮೇಲೆ ಗುಂಡು ಹಾರಿಸಿದ ಆರೋಪಕ್ಕಾಗಿ ಶ್ರೀ ಸಿಂಧೆಯವರ ಮೇಲೆ ನಡೆದ ಖಟ್ಲೆಯಲ್ಲಿ ಸೆಶನ್ಸ ಜಜ್ಜರು ೧ ದಿನದ ಶಿಕ್ಷೆ ಮತ್ತು ೨೦೦ರೂಪಾಯಿ ದಂಡ ವಿಧಿಸಿದರು. ನಾಯಕರನ್ನು ಕೇವಲ ಬೆದರಿಸಲು ಗುಂಡು ಹಾರಿಸಲಾಯಿತೆಂದು ಆರೋಪಿತರವಾದವನ್ನು ಸೆಶನ್ಸ ಜಜ್ಜರು ಎತ್ತಿಹಿಡಿದರು.

ಬೀಳಗಿಯ ಸಬ್ ಇನಸ್ಪೆಕ್ಟರ ಶ್ರೀ ಎಸ್ ಆರ್ ಬನಹಟ್ಟಿಯವರು ಬೂದಿಹಾಳ (ಅನಗವಾಡಿ) ದ ಗೌಡರ ಸಹಾಯದಿಂದ ಮುಧೋಳಕ್ಕೆ ಕಳ್ಳಪೇಟೆಗೆ ಹೋಗುತಿದ್ದ ನೂಲಿನ ಮೋಟರನ್ನು ಬೂದೀಹಾಳದ ಹತ್ತರ ಹಿಡಿದು ಅವರ ಮೇಲೆ ಖಟ್ಲೆ ಹಾಕಿರುವರು ಈ ರೀತಿ ಮೋಟರಿನಲ್ಲಿ ಅನೇಕ ಸಲ ನೂಲು ಕಳ್ಳಪೇಟೆಯ ಮುಖಾಂತರ ಹೋಗುತಿದ್ದಿತಂತೆ. ಸಬ್ ಇನಸ್ಪೆಕ್ಟರರು ಮೋಟರ ದಾರಿಯನ್ನು ಕಟ್ಟು ಮಾಡಿ ಒಳ್ಳೆ ಯುಕ್ತಿಯಿಂದ ಅದನ್ನು ತಡೆದು ನೂಲನ್ನು ಜಪ್ತ ಮಾಡಿದರು.

ಶಿರಗೂರಲ್ಲಿ ಕುಮಾರ ರವೀಂದ್ರನಾಥ ಜಾಗಿರದಾರರ ಪ್ರಯತ್ನದಿಂದ ರಾಷ್ಟ್ರೀಯ ಸೇವಾದಲವೊಂದು ಸ್ಥಾಪಿತವಾಗಿದೆ. ಸುಭಾಸದಲವೆಂದು ಅದಕ್ಕೆ ಹೆಸರಿಡಲಾಗಿದ್ದು ಕುಮಾರ ಸೋಮಣ್ಣ ಇವರನ್ನು ಶಾಖಾನಾಯಕರನ್ನಾಗಿ ಮಾಡಲಾಗಿದೆ. ಧ್ವಜವಂದನ ಆಟಪಾಟ ಮೊದಲಾದವು ನಡೆದಿವೆ.

ಮುಂಬಯಿ ವಿಶ್ವವಿದ್ಯಾಲಯದ ಈ ಸಲದ ಇಂಟರ ಆರ್ಟ್ಸ ಪರೀಕ್ಷೆಯಲ್ಲಿ ವಿಜಾಪುರದ ವಿಜಯ ಕಾಲೇಜಿನ ಶಿವಮುಗ್ಗಿ ಏಚ್ ಬಿ ಎಂಬ ವಿದ್ಯಾರ್ಥಿ ಸಿವಿಕ್ಸ ಮತ್ತು ಎಕಾನಾಮಿಕ್ಸ ವಿಷಯದಲ್ಲಿ ಎಲ್ಲರಿಗಿಂತ ಹೆಚ್ಚು ಗುಣಗಳನ್ನು ಪಡೆದು ವರ್ಡ್ಸ್‌ವರ್ಥಪ್ರಾಯಿಜ ಮತ್ತು ಸ್ಕಾಲರ್‌ಶಿಪ್ ಸಂಪಾದಿಸಿದ್ದಾರೆ.

ಬಳ್ಳಾರಿ

ಬಳ್ಳಾರಿ ತಾಲೂಕಿನ ಕೊಟಗಲ್ಲಿನ ಜಾತ್ರೆಯನ್ನು ೧೪೪ ನೇ ಕಲ್ಮನನ್ವಯ ೧೪ ದಿನ ಪ್ರತಿಬಂಧಿಸಿದ್ದರಷ್ಟೇ ಗ್ರಾಮಸ್ಥರೂ ಹರಿಜನರೂ ಬಸವಿಬಿಡುವದಿಲ್ಲವಾಗಿ ಜಿಲ್ಹಾ ಮ್ಯಾಜಿಸ್ಟ್ರೇಟರಲ್ಲಿ ಮುಚ್ಚಳಿಕೆ ಬರೆದು ಕೊಟ್ಟಿದ್ದರಿಂದ ಮೂರೆಸ್ಟ್ಯಾನ ಜಾತ್ರೆಗೆ ಮಾತ್ರ ಅಪ್ಪಣೆ ಕೊಡಲಾಯಿತು. ಜಾತ್ರೆ ಶಾಂತರೀತಿಯಿಂದ ಕೊನೆಗಂಡಿತು.

ಬಳ್ಳಾರಿಜಿಲ್ಹಾ ಆಹಾರಟಟ್ಟಿ ಪರಿಸ್ಥಿತಿಯ ಸಮಾಲೋಚನೆ ೩೧ ನೇ ತಾರೀಕಿನ ದಿನ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಕೂಡಿದ ಸಮಿತಿಯ ಸಭೆಯಲ್ಲಿ ಮಾಡಲಾಯಿತು. ಹೊಟೆಲದವರಿಗೆ ಕೊಡುತಿದ್ದ ಸಕ್ಕರೆಯಲ್ಲಿ ೧/೪ ನ್ನು ಕಡಮೆ ಮಾಡಬೇಕೆಂಬ ಗೊತ್ತಾಯಿತು.

ಧಾರವಾಡ

ಕನ್ನಡಿಗರೂ ಸುಪ್ರಸಿದ್ಧ ಕಲಾ ಕೋವಿದರೂ ಆದ ಶ್ರೀ ಎಂ ವಿ ಮಿಣಜಗಿಯವರು ಘಟನಾಸಮಿತಿಯ ಸಭೆಯ ಬಣ್ಣದ ಚಿತ್ರ ಬರೆಯಲು ಅದರ ಮುಂದಿನ ಅಧಿವೇಶನದ ಸಮಯಕ್ಕೆ ದಿಲ್ಲಿಗೆ ಹೋಗಲಿರುವರೆಂದು ತಿಳಿಯುತ್ತದೆ.

ಹುಬ್ಬಳ್ಳಿಯಲ್ಲಿ ಗೃಹರಕ್ಷಕ ದಳವೊಂದು ಸಂಸ್ಥಾಪಿತವಾಗಲಿದ್ದು ಅದರ ಪ್ರಾಸ್ತಾವಿಕ ಸಭೆ ೧ ನೇ ತಾರೀಕು ಕೂಡಿತ್ತು.

ಮಧ್ವ ವಿದ್ಯಾಪೀಠ ಸಂಸ್ಥೆಯವರು ಇಂಗ್ಲಿಶ್ ಮೊದಲಾದ್ದನ್ನು ಕಲಿಯುವ ದೇಶಸ್ಥ ವಿದ್ಯಾರ್ಥಿಗಳಿಗೆ ಉಚಿತ ವಸತಿಗೃಹವನ್ನು ಧಾರವಾಡದಲ್ಲಿ ಆರಂಭಿಸಿದ್ದಾರೆ. ಸೇರಲಿಚ್ಛಿಸುವವರು ಜೂನ ೩೦ ರೊಳಗಾಗಿ ಶ್ರೀ ವೆಂಕಟರಾವ ಹರಪನಹಳ್ಳಿಯವರನ್ನು ಕಾಣಬೇಕೆಂದು ಪ್ರಸಿದ್ಧಿಸಲಾಗಿದೆ.

ಹುಬ್ಬಳ್ಳಿಯ ರಾಷ್ಟ್ರೀಯ ಗಿರಣಿ ಮಜದೂರ ಸಂಘದ ಕಾರ್ಯದರ್ಶಿಗಳಾದ ಶ್ರೀ ಶಂಕರಪ್ಪ ದೇವಪುರ ಇವರು ಭಾರತ ಗಿರಣಿಯ ಕೂಲಿಕಾರಿಗೆ ಬೋನಸ್ಸು ಕೊಡಿಸುವುದಕ್ಕಾಗಿ ಆಮರಣ ಉಪವಾಸವನ್ನು ಇದೇ ೧ ನೇ ತಾರೀಕಿನಿಂದ ಪ್ರಾರಂಭಿಸಿದ್ದಾರೆ, ಈ ಬೋನಸ್ಸನ್ನು ಕೊಡುವ ಸಂಬಂಧದಲ್ಲಿ ಗಿರಣಿ ವ್ಯವಸ್ಥಾಪಕರೊಡನೆ ಎಷ್ಟೊಂದು ವಾದಿಸಿದರೂ ಅವರು ಒಪ್ಪದ್ದರಿಂದ ದೇವಪೂರರು ಉಪವಾಸ ಸುರು ಮಾಡಿದ್ದಾರೆ, ಇದರಿಂದ ಕೂಲಿಕಾರರಲ್ಲಿ ಮತ್ತು ಕಾಂಗ್ರೆಸ್ಸಿಗರಲ್ಲಿ ಕಳವಳ ಉಂಟಾಗಿದೆ.

ದೇವರಹುಬ್ಬಳ್ಳಿ ಭಾಗದ ಹಳ್ಳಿಗಳ ಸ್ಥಿತಿಯನ್ನು ಸುಧಾರಿಸಲು ನೇಮಕರಾಗಿರುವ ಶ್ರೀ ಕಮಲಾಪುರರಿಗೆ ಅವರ ಕಾರ್ಯದಲ್ಲಿ ಮಾರ್ಗದರ್ಶನ ಮಾಡುತ್ತಿರುವ ಶ್ರೀ ಹುಕ್ಕೇರಿಕರ ರಾಮರಾಯರಿಗೆ ಆ ಭಾಗದ ರೈತರು ಮಾನಪತ್ರ ಕೊಟ್ಟು ಗೌರವಿಸಿದರು. ಶ್ರೀ ಹುಕ್ಕೇರಿಕರರು ಅದಕ್ಕೆ ಉತ್ತರ ಕೊಡುತ್ತ ಅಧಿಕಾರಿಗಳನ್ನೇ ಯಾವಾಗಲೂ ಅವಲಂಬಿಸಿ ಕೂಡದೆ ಸ್ವತಃ ಕಾರ್ಯ ಕೈಕೊಳ್ಳಬೇಕೆಂದು ಹೇಳಿದರು. ಶ್ರೀ ಬುರ್ಲಿ ಬಿಂದಾಚಾರ್ಯರೂ ಉಪಯುಕ್ತ ಉಪದೇಶ ಮಾಡಿದರು.

ಕೊಲ್ಹಾಪುರದಲ್ಲಿ ರಾಜಕೀಯ ಸುಧಾರಣೆಗಳು

ಕೊಲ್ಹಾಪುರದ ಮಹಾರಾಜರು ತಮ್ಮ ಸಿಂಹಾಸನಾರೋಹಣದ ನಿಮಿತ್ತ ತಾ ೧–೬.೪೭ ರಲ್ಲಿ ಕೆಳಗಿನ ರಾಜಕೀಯ ಸುಧಾರಣೆಗಳನ್ನು ಘೋಷಿಸಿದರು:

ಅದರ ಪ್ರಕಾರ ಕಾರ್ಯಕಾರಿ ಮಂಡಲದಲ್ಲಿ ೫ ಸದಸ್ಯರಿರುವರು. ಅವರಲ್ಲಿ ಮುಖ್ಯ ಮಂತ್ರಿ ಸಹಿತವಾಗಿ ಇಬ್ಬರು ಅಧಿಕಾರಿಗಳು ಮತ್ತು ಮೂವರು ಅಧಿಕಾರೇತರರು ಈ ಮೂವರಲ್ಲಿ ಒಬ್ಬರು ಹಿಂದುಳಿದ ವರ್ಗದವರು ಹಾಗೂ ಇಬ್ಬರು ಶಾಸನ ಸಭಾಸದಸ್ಯರ ಪ್ರತಿನಿಧಿಗಳಿರತಕ್ಕದ್ದು.

ಎರಡು ಶಾಸನ ಸಭೆಗಳನ್ನು ರಚಿಸಲಾಗಿದೆ. (೧) ಪ್ರತಿನಿಧಿ ಸಭೆ; (೨) ರಾಜಮಂಡಲ. ಒಂದನೆಯದರಲ್ಲಿ ೪೪ ಲೋಕನಿಯುಕ್ತ ಮತ್ತು ೭ ಸರಕಾರ ನಿಯುಕ್ತ ಸದಸ್ಯರಿರುವರು. ರಾಜಮಂಡಲದಲ್ಲಿ ಜಹಗೀರುದಾರರು, ವಿಶಿಷ್ಟ ಹಿತಸಂಬಂಧದ ೯ ಚುನಾಯಿತ ಪ್ರತಿನಿಧಿಗಳು ಮತ್ತು ಕೂಲಿಕಾರ ವರ್ಗ, ಸ್ತ್ರೀಯರು ಹಾಗೂ ಇತರರು ೫ಜನ ಸರಕಾರ ನಿಯುಕ್ತ ಸದಸ್ಯರಿರುವರು.

ಕೊಲ್ಹಾಪುರ ಸಂಸ್ಥಾನವು ಇದುವರೆಗೆ ದ. ಸಂಸ್ಥಾನ ಹೈಕೋರ್ಟಿಗೆ ಒಳಪಟ್ಟಿದ್ದನ್ನು ಬಿಡಿಸಿ ಪ್ರತ್ಯೇಕ ಹೈಕೋರ್ಟನ್ನು ಸ್ಥಾಪಿಸಲಾಯಿತು.

ಗ್ರಾಮೋದ್ಧಾರಕ್ಕಾಗಿ ಮಹಾರಾಜರು ೧೫ ಲಕ್ಷ ರೂಪಾಯಿಯ ನಿಧಿ ಮಾಡಿರುವರು.

ಕೊಲ್ಹಾಪುರದ ಈ ಮುನ್ನಡೆ ಸ್ವಾಗತಾರ್ಹವಾದುದು. ಅದರೆ ಮಹಾರಾಜರೇ ಹೇಳಿರುವಂತೆ "ನಮ್ಮ ರಾಷ್ಟ್ರವು, ಅದರ ಜೊತೆಯಲ್ಲಿ ನಮ್ಮ ಸಂಸ್ಥಾನವು, ಮುಂಬರುವ ಕೆಲವು ದಿನಗಳಲ್ಲಿ ಮಹತ್ವದ ಬದಲಾವಣೆಗಳನ್ನು ಕಾಣಲಿರುವಾಗ ಇನ್ನೂ ಹೆಚ್ಚಿನ ಹೊಣೆಯನ್ನು ಪ್ರಜೆಗಳ ಪ್ರತಿನಿಧಿಗಳಿಗೆ ಬಿಡಬಹುದಾಗಿತ್ತು. ಅಂತಹ ದಿನ ದೂರವಿರಲಾರದೆಂದು ಆಶಿಸಬಹುದು.

ಕೊಡಗು

ವೀರಾಜಪೇಟೆಯ ಉಪಾಧ್ಯಾಯರ ಪ್ರಿಂಟಿಂಗಪ್ರೆಸ್ಸಿನಲ್ಲಿದ್ದ ಶ್ರೀ ಕೆ ಗೋಪಾಲರಾವ ಮತ್ತು ಅವರ ಸ್ನೇಹಿತರೊಬ್ಬರು ಶ್ರೀ ಟಿ. ಎಸ್. ಮಣಿ ಇವರಿಬ್ಬರು ಮದ್ರಾಸ ಸರಕಾರದ ಪಾನನಿರೋಧಕ್ರಮ ಜಾರಿಯಲ್ಲಿರುವ ಈರೋಡ ಎಂಬಲ್ಲಿ ಮದ್ಯಪಾನಮಾಡಿ ಮದ್ಯದ ಕುಪ್ಪಿ ಸಹಿತ ಪೋಲೀಸರಿಗೆ ಸಿಕ್ಕಿದ್ದರಿಂದ ಅವರ ಮೇಲೆ ಖಟ್ಲೆ ನಡೆದು ಎರಡೆರಡು ತಿಂಗಳ ಶಿಕ್ಷೆ ವಿಧಿಸಲಾಯಿತೆಂದು ತಿಳಿಯುತ್ತದೆ.

ಕನ್ನಡ ಸಂಸ್ಥಾನ

ಹಿರಿಮಿರಜಿ ಸಂಸ್ಥಾನಿಕರ ಎಪ್ರಿಲ ೧೯ ರ ಘೋಷಣೆಯನ್ವಯ ಸಂಸ್ಥಾನ ಶಾಸನಸಭೆ ಶ್ರೀ ವಿ.ಡಿ. ಪೇಂಡಸೆಯವರ ಅಧ್ಯಕ್ಷತೆಯಲ್ಲಿ ೧ನೇ ತಾರೀಕು ಪ್ರಾರಂಭವಾಗಿದೆ. ರಾಜೇಸಾಹೇಬರು ಸೌಹಾರ್ದದ ಸಂದೇಶ ಕಳಿಸಿದ್ದರು. ಘಟನಾಸಮಿತಿಗೆ ಶ್ರೀ ಕೇನ ಮತ್ತು ದಪ್ತರದಾರರನ್ನು, ಘಟನಾ ಸಮಿತಿಗೆ ಆರಿಸಿ ಕಳಿಸುವ ದಕ್ಷಿಣ ಸಂಸ್ಥಾನ ಮತದಾರ ಗುಂಪಿಗೆ ಆರಿಸಲಾಯಿತು. ಮಂತ್ರಿಗಳ ಸಂಬಳ ೩೫೦ ರೂ. ಯೆಂದು ಗೊತ್ತಾಯಿತು.

ಶ್ರೀ ಮಗನಲಾಲ ಶಹಾರವರು ಮೈಸೂರ ಸಂಸ್ಥಾನವನ್ನು ಪ್ರವೇಶಿಸದಾರದೆಂದು ಇದುವರೆಗೆ ಇದ್ದ ನಿರ್ಬಂಧವನ್ನು ಸಂಸ್ಥಾನ ಸರಕಾರ ರದ್ದುಪಡಿಸಿದೆ.

ಶ್ರೀ ಕೆ. ಕೃಷ್ಣಪ್ಪ ಮತ್ತು ಎಚ್ ಆರ್ ಸುಬ್ಬಯ್ಯನವರು ಶಿವಮೊಗ್ಗ ಪೌರಸಭೆಗೆ ಅನುಕ್ರಮವಾಗಿ ಅಧ್ಯಕ್ಷ ಉಪಾಧ್ಯಕ್ಷರಾಗಿ, ಆರಿಸಲ್ಪಟ್ಟಿವೆ.

ಕೊಪ್ಪಳದಲ್ಲಿ ಸತತ ನಾಲ್ಕು ದಿನ ರೇಶನ ಅಂಗಡಿಗಳು ಮುಚ್ಚಲ್ಪಟ್ಟಿದ್ದರಿಂದಲೂ ಸೀದಾಪದ್ಧತಿ ಸರಿಯಾಗಿಲ್ಲದ್ದರಿಂದಲವ ರೇಚಪ್ಪನೆಂಬವನು ತನ್ನ ಹಸಿವನ್ನು ಸಹಿಸದವನಾಗಿ ರೊಚ್ಚಿಗೆದ್ದು ಕುಡುಗೋಲಿನಿಂದ ತನ್ನ ಹೆಂಡತಿಯ ಕೊಲೆ ಮಾಡಿದನೆಂದು ಶ್ರೀ ಎಚ್ ಕೊಟ್ರಪ್ಪ ಎಂಬವರು ತಿಳಿಸುತ್ತಾರೆ.

ಔಂಧ ಶಾಸನ ಸಭೆಯ ವಿಶೇಷ ಅಧಿವೇಶನ ಕಳೆದವಾರ ಸೇರಿ ಹಿಂದೀ ಘಟನಾ ಸಮಿತಿಯ ಮತದಾರ ಸಂಘಕ್ಕೆ ಮಂತ್ರಿಗಳಾದ ಆರ್ ಬಿ ಬಿದ್ರಿ ಹಾಗು ಪಾರ್ಲಮೆಂಟರಿ ಸೆಕ್ರೆಟರಿ ಶ್ರೀಮಂತ ಅಪ್ಪಾಸಾಹೇಬರನ್ನು ಔಂಧ ಸಂಸ್ಥಾನದ ಪ್ರತಿನಿಧಿಗಳನ್ನಾಗಿ ಆರಿಸಿತು. ಅವರಿಗೆ ಸಲಹೆ ಕೊಡಲು ಶಾಸನ ಸಭಾ ಸದಸ್ಯರ ಸಮಿತಿಯನ್ನು ನೇಮಿಸಿತು.

ಕೊಲ್ಹಾಪುರದ ಛತ್ರಪತಿ ಶಿವಾಜಿ ಮಹಾರಾಜರು ಸರದಾರ ವಲ್ಲಭಭಾಯಿ ಪಟೇಲರಿಗೆ ೨೫ ಸಾವಿರ ರೂಪಾಯಿಗಳನ್ನು ಪಂಜಾಬ ಪರಿಹಾರ ನಿಧಿಗೆ ಕಾಣಿಕೆಯೆಂದು ಕೊಟ್ಟಿದ್ದಾರೆ.

ಕೇಂದ್ರ ಸಂಬಳ ಸಮಿತಿಯವರ ಸಲಹೆ ಮೇರೆಗೆ ಶಿಕ್ಷಕರ ಸಂಬಳವನ್ನು ಹೆಚ್ಚಿಸಬೇಕು ಮತ್ತು ಬೇರೆ ಬೇರೆ ಎಜನ್ಸಿಗಳ ಸಂಬಳ ಪ್ರಮಾಣದಲ್ಲಿರತಕ್ಕ ಭೇದವನ್ನು ತಗೆದುಹಾಕಬೇಕೆಂದು ಅ ಭಾ ಶಿಕ್ಷಣ ಸಂಘದ ಕಾರ್ಯಕಾರೀ ಮಂಡಳದ ಸಭೆ ಹೈದ್ರಾಬಾದದಲ್ಲಿ ಕೂಡಿ ನಿರ್ಧರಿಸಲಾಯಿತು.

ದಿವಂಗತ ಸಾಬಡೆಯವರ ಕೊಲೆ ಮಾಡಿದವರನ್ನು ಹಿಡಿದು ಕೊಟ್ಟವರಿಗೆ ೨೦೦೦ ರೂಪಾಯಿ ಬಹುಮಾನ ಕೊಡಲಾಗುವದಲ್ಲದೆ ಈ ಅಪರಾಧದ ಶೋಧದಲ್ಲಿ ಉಪಯುಕ್ತ ವಿವರಗಳನ್ನು ದೊರಕಿಸಿ ಕೊಟ್ಟವರಿಗೆ ಯೋಗ್ಯ ಬಹುಮಾನ ಕೊಡಲಾಗುವದೆಂದು ಜಮಖಂಡಿ ಸರಕಾರದವರು ಪ್ರಕಟಿಸಿದ್ದಾರೆ.

ಸಾದರ ಸ್ವೀಕಾರ

೧ ಶಿವರಾತ್ರಿ
ಲೇ. - ಗೊರೂರ ರಾಮಸ್ವಾಮಿ ಅಯ್ಯಂಗಾರ್
ಪ್ರಕಾಶಕರು— ಕಾವ್ಯಾಲಯ. ಮೈಸೂರ
ಪುಟಗಳು ೧೭೦ ಬೆಲೆ ೨—೬—೦

೨ ಆರು ಹಂಸಗಳು
ಲೇಖಕರು— ಗ್ರಾಮ ಸೋದರರು
ಪ್ರಕಾಶಕರು— ಕಾವ್ಯಾಲಯ ಮೈಸೂರ.
ಪುಟಗಳು— ೩೬ ಬೆಲೆ ೦—೮—೦

೩ ರೇಖಾ ಚಿತ್ರಗಳು
ಲೇಖಕರು— ತ ರಾ. ಸು.
ಪ್ರಕಾಶನ— ಸಾಹಿತ್ಯಾಲಯ ಚಿತ್ರದುರ್ಗ
ಪುಟಗಳು— ೬೦ ಬೆಲೆ ೦—೮—೦

೪ ಅ. ನ. ಕೃ.
ಲೇಖಕರು— ತ. ರಾ. ಸು.
ಪ್ರಕಾಶನ— ಸಾಹಿತ್ಯಾಲಯ ಚಿತ್ರದುರ್ಗ
ಪುಟಗಳು— ೨೨೦ ಬೆಲೆ ೩—೪—೦

೫ ಅನ್ಯೋನ್ಯ
ಲೇಖಕರು— ಮ. ಶ್ರೀಧರ ಮೂರ್ತಿ
ಪ್ರಕಾಶನ— ಸಾಹಿತ್ಯಾಲಯ ಚಿತ್ರದುರ್ಗ
ಪುಟಗಳು— ೬೦ ಬೆಲೆ ೦—೮—೦

೬ ಚರಕ ಸಂಘದ ಹೊಸರೂಪ
ಅನುವಾದಕರು— ಶ್ರೀ. ರಾ. ಸಾವಕಾರ
ಪ್ರಕಾಶಕರು— ಶ್ರೀ. ದಹಿ ರಾಮಚಂದ್ರ ಮಂತ್ರಿ ಕರ್ನಾಟಕ ಚರಖಾ ಸಂಘ
ಪುಟಗಳು— ೧೪೦ ಬೆಲೆ ೧—೪—೦

ಹೊಸದಿಲ್ಲಿ

ಅಂತರ್‌ರಾಷ್ಟ್ರೀಯ ರೇಲ್ವೆ ಕಾಂಗ್ರೆಸ್ಸಿಗೆ ಹಿಂದುಸ್ಥಾನದ ಸರಕಾರ ಪ್ರತಿನಿಧಿಗಳನ್ನು [illegible] ರೇಲ್ವೆ [illegible] [illegible]. [illegible] ಈ [illegible] ಹೋಗುವರು. [illegible] ರೇಲ್ವೆ ಕಾಂಗ್ರೆಸ್ [illegible].

[illegible] ಮುಂತಾದವು [illegible] ಇವರನ್ನು [illegible] ಕೊಟ್ಟಿದೆ. [illegible]

[illegible] ಮತ್ತು [illegible] ಸೆಕ್ರೆಟರಿಯಟ [illegible] ಪ್ರದರ್ಶನ ಮಾಡಿದ [illegible] ನೌಕರರು [illegible].

[illegible] ಹಿಂದೀ ಪ್ರದೇ[illegible] ಪ್ರತಿನಿಧಿಯೊಂದು ಮತ್ತು [illegible] ಮೌಂಟಬ್ಯಾಟ[illegible] ಈ [illegible] ಸುದ್ದಿ ಬಂದಿದೆ.

ಹಿಂದುಸ್ಥಾನಕ್ಕೆ ಹೆಚ್ಚು ಪ್ರಮಾಣದಲ್ಲಿ ಮತ್ತು [illegible] ಹಿಂದೀ ಹಾಯಕಮೀಶ [illegible] ಆಸ್ಟ್ರೇಲಿಯಾ ಸರಕಾರ [illegible] ಎಲ್. [illegible] ಮುಂದಿನ ವಾರ ಪ್ರಾರಂಭಕ್ಕೆ ಆಸ್ಟ್ರೇಲಿಯಾಕ್ಕೆ ಹೋಗುವರು.

ಹಿಂದುಸ್ಥಾನ ಸರಕಾರದವರು ವಿ. ವಿ. ಗಿರಿ ಯವರನ್ನು [illegible] ಸಿಲೋನದಲ್ಲಿ ಹಿಂದುಸ್ಥಾನ ಸರಕಾರದ ಪ್ರತಿನಿಧಿಗಳನ್ನಾಗಿ ನೇಮಿಸಿದ್ದಾರೆ. ಗಿರಿಯವರು [illegible] ಮದ್ರಾಸ ಸರಕಾರದ [illegible] ಮಂತ್ರಿಗಳಾಗಿದ್ದರು.

[illegible] ಸಂಸ್ಥಾನದಲ್ಲಿ ಜಾಗೀರ [illegible] ಮತ್ತು [illegible] ಸಂಬಂಧದಲ್ಲಿ ವಿಚಾರ [illegible] ಸರ್ ಅಲ್ಲಿಯಾ[illegible] ಅಧ್ಯಕ್ಷತೆಯಲ್ಲಿ ನೇಮಿಸಲ್ಪಟ್ಟ ವಿಚಾರಣಾ ಸಮಿತಿ ತನ್ನ ವರದಿಯನ್ನು [illegible]. ಇದೇ [illegible] ಈ ಸಮಿತಿಯನ್ನು ನೇಮಿಸಲಾಗಿತ್ತು. ಬೆಂಗಳೂರಿನಲ್ಲಿ [illegible] ಸಭೆಗಳನ್ನು [illegible] ಸಮಿತಿ [illegible].

ಹಿಂದುಸ್ಥಾನ ಸರಕಾರದವರು [illegible] ವಸ್ತುಗಳ ಮೇಲೆ ಹಾಕಿದ [illegible] ತೆಗೆದು ಹಾಕಿದ್ದಾರೆ. [illegible] ವಸ್ತುಗಳನ್ನು ಪರದೇಶಗಳಿಗೆ [illegible].

ಹಿಂದುಸ್ಥಾನಕ್ಕೆ [illegible] ವಸ್ತುಗಳ ಮೇಲೆ [illegible] ಜುಲೈ ೧ ರಿಂದ ಈ [illegible] ಜಾರಿಯಲ್ಲಿ ಬರಲಿರುವದೆಂದು ತಿಳಿಯುತ್ತದೆ.

[illegible] ಜೂನ ೩ ಕ್ಕೆ [illegible] ಮಂತ್ರಿ [illegible] ಅಧಿಕಾರ [illegible] ತಿಳಿಯುತ್ತದೆ. [illegible] ಒಂದು ವರುಷದ ಮಟ್ಟಿಗೆ ಮಾತ್ರ ಈ [illegible].

ಮುಂಬಯಿ ಮುಖ್ಯಮಂತ್ರಿ ಬಿ. ಜಿ. [illegible] ೩೧ ನೇ ತಾರೀಕು [illegible] ಸಂಕಾ[illegible] ಯೋಜನೆಯನ್ನು [illegible] ಭಾಷಣ ಮಾಡಿದರು.

ಸಿಂಧ

ಸಿಂಧ ಸರಕಾರದ [illegible] ಮುಸಲ್ಮಾನ [illegible] ೧೦೦ ಕ್ಕೆ ೭೦ [illegible] ಕೊಡಬೇಕೆಂದು ನಿರ್ಧರಿಸಲಾಗಿದೆ. [illegible] ಪ್ರಮಾಣಕ್ಕೆ [illegible] ೧೦೦ ಕ್ಕೆ ೧೦ ಸ್ಥಳ ಮಾತ್ರ [illegible].

ಸಿಂಧ ವಿಶ್ವವಿದ್ಯಾಲಯ ಕಾಯಿದೆಯು ಎಲ್ಲ [illegible] ಜಾರಿಯಲ್ಲಿ ಬರುವ [illegible] ಸರಕಾರದ ಗ್ಯಾಝೆಟಿನಲ್ಲಿ ಪ್ರಕಟಿಸಲಾ[illegible] ಶಿಕ್ಷಣ ಮಂತ್ರಿಗಳು ಈ ಸಂಬಂಧದಲ್ಲಿ [illegible] ಈ ಕಾಯಿದೆ [illegible] ಮಾಡಲಾಗುವದೆಂದು [illegible].

[illegible] ಪೋಲೀಸ [illegible] ಕೋರ್ಟಿನಲ್ಲಿ [illegible] ವರ್ಷ ಸಶ್ರಮ ಶಿಕ್ಷೆ ವಿಧಿಸಿದರು.

ಹಿಂದುಸ್ಥಾನ

ಮುಂಬಯಿ

ರಾಷ್ಟ್ರೀಯ ಉದ್ಯಾನ ಮತ್ತು ಉಪವನಗಳ ನ್ನೇರ್ಪಡಿಸಿ ಸಾರ್ವಜನಿಕರ ಉಪಯೋಗಕ್ಕಾಗಿ ಅವನ್ನು ಅಣಿಗೊಳಿಸಲು ಮುಂಬಯಿ ಸರಕಾರ ದವರು ಪ್ರತ್ಯೇಕ ಖಾತೆಯೊಂದನ್ನು ತೆರೆದಿದ್ದಾರೆ. ನಾಗರಿಕರಿಗನುಕೂಲವಾಗುವ ರೀತಿಯಲ್ಲಿ ಅಲ್ಲಲ್ಲಿ ನಗರವನಗಳನ್ನೇರ್ಪಡಿಸಲಾಗುವದು. ಇದಕ್ಕಾಗಿ ಸರಕಾರದವರು ಐದು ವರುಷಗಳ ಯೋಜನೆಯೊಂದನ್ನು ಗೊತ್ತುಪಡಿಸಿದ್ದು ೫೦ ಲಕ್ಷ ರೂಪಾಯಿಗಳನ್ನು ವ್ಯಯಮಾಡಲು ನಿರ್ಧರಿಸಿರುವರು.

ಈ ಯೋಜನೆಯ ಪ್ರಾರಂಭವೆಂದು ಖಾತೆಯು ಶಾಸ್ತ್ರೀರಿದುರ್ಗ ಮತ್ತು ನಾಗಠಾಣ ಆಸ್ತಿಯನ್ನು, ಮೊದಲನೆಯ ರಾಷ್ಟ್ರೀಯ ಉದ್ಯಾನವನ್ನಾಗಿ ಪೂರ್ವಡಿಸಬೇಕೆಂದು ಗೊತ್ತುಪಡಿಸಲಾಗಿದೆ. ಇದಕ್ಕಾಗಿ ವಿದ್ಯಾರ್ಥಿಗಳಿಗೆ ಶಿಕ್ಷಣ ಕೊಡುವ ಯೋಜನೆಯೂ ಇದೆ.

ಸ್ಯಾಂತಾಕ್ರೂಜದಲ್ಲಿಯ ಆರ್. ಎ. ಎಫ್. ಶಸ್ತ್ರಾಗಾರದಿಂದ ಶಸ್ತ್ರಾಸ್ತ್ರಗಳನ್ನು ಕಳವು ಮಾಡಿದರೆಂದು ಮುಂಬಯಿಯ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಇಬ್ಬರಿಗೆ ಅನುಕ್ರಮವಾಗಿ ೧೫—೯ ತಿಂಗಳು ಸಶ್ರಮ ಶಿಕ್ಷೆ ವಿಧಿಸಿದರು.

ಮುಂಬಯಿ ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಸಭೆ ಸೇರಿ ಶ್ರೀ ಬಿ. ಜಿ. ಖೇರರು ಮತ್ತೆ ಅಧ್ಯಕ್ಷರಾಗಿ ಆರಿಸಿ ಬಂದರು. ಶ್ರೀ ಮುರಾರಜಿ ದೇಸಾಯರು ಉಪಾಧ್ಯಕ್ಷರು. ಆರ್. ಜಿ. ಸೋಮನ್ ಚೀಫ್ ವ್ಹಿಪ್ ಬಿ. ಜಿ. ಮಡಾಡಮ ಜನರಲ್ ವ್ಹಿಪ್ ಶಾಂತಿಲಾಲ ಶಹಾ ಮತ್ತು ಡಿ. ಕೆ. ಗೋಸಾವಿಯವರು ಕಾರ್ಯದರ್ಶಿಗಳು ಜೊತೆ ಮೇಟಿ ಅಂದಾಜೆಪ್ಪನವರು ಕಾರ್ಯಸಮಿತಿಯಲ್ಲಿ ಆರಿಸಿ ಬಂದಿರುವರು.

ನಗರದ ಮೋಟರ ಟ್ರಾನ್ಸಪೋರ್ಟ ಕಂಪನಿಯ ಸುಮಾರು ೫೦೦ ಕೆಲಸಗಾರರು ತಮ್ಮ ಹಲವು ಬೇಡಿಕೆಗಳಿಗಾಗಿ ಸಂಪನ್ನು ಹೂಡಿರುವರು.

ಮುಂಬಯಿ ಪ್ರಾಂತದ ಬೇರೆ ಬೇರೆ ಭಾಗಗಳಿಗಾಗಿ ಒಟ್ಟ೦ ಟನ್ ಸಕ್ಕರೆ ಗೋದಿಯನ್ನು ಹೇರಿಕೊಂಡು ಹಡಗೊಂದು ಮುಂಬಯಿಗೆ ಬಂದಿರುವದು. ಇನ್ನೂ ಅಕ್ಕಿ ಹೇರಿಕೊಂಡು ಮೂರು ಹಡಗಗಳು ಇನ್ನು ೧೫ ದಿನಗಳೊಳಗಾಗಿ ಮುಂಬಯಿಗೆ ಬರತಕ್ಕವಿವೆ. ಮೇ ತಿಂಗಳಲ್ಲಿ ೧೯ ಆಹಾರ ಹಡಗಗಳು ಪರದೇಶಗಳಿಂದ ೬೬೬೦೦ ಟನ್ ಆಹಾರ ಧಾನ್ಯ ತೊಕ್ಕೊಂಡು ಮುಂಬಯಿಗೆ ಬಂದಿವೆ.

ಪಂಜಾಬ

ಬಿಹಾರ ಕಿಸಾನ ಸಭೆಯ ಅಧ್ಯಕ್ಷರೂ ಸಾಮ್ಯವಾದೀ ಪಕ್ಷದ ಕಾರ್ಯಕಾರೀ ಮಂಡಳದ ಸದಸ್ಯರೂ ಆದ ಶ್ರೀ ರಮಾನಂದ ಮಿಶ್ರ ಮತ್ತು ಬೇರೆ ೧೭ ಜನರನ್ನು ಪಂಜಾಬ ಸಾರ್ವಜನಿಕ ಸುರಕ್ಷಿತತೆಯ ಕಾಯಿದೆಯನ್ವಯ ಸೆರೆಹಿಡಿಯಲಾಗಿದೆ.

ರಾವಳಪಿಂಡಿ ಭಾಗದ ಎನ್ ಡಬ್ಲ್ಯೂ ರೇಲ್ವೆ ಭಾಗದ ಸಂಭಾಧ ಕಾರ್ಯದರ್ಶಿಗಳು ರೇಲ್ವೆ ಮಂತ್ರಿಗಳಿಗೆ ತಂತಿ ಕಳಿಸಿ ಕಳೆದ ೬ ತಿಂಗಳಿಂದ ಹೆಚ್ಚು ಕೆಲಸ ಮಾಡಿಸಿಕೊಂಡಿದ್ದರ ಹಣವನ್ನು ಜೂನ ೫ ರೊಳಗೆ ಕೊಡದೆ ಹೋದರೆ ಜೂನ ೬ ಕ್ಕೆ ಧರಣೆ ಸಂಪು ಪ್ರಾರಂಭಿಸುವದಾಗಿ ತಿಳಿಸಿದ್ದಾರೆ.

ಅಮೃತಸರದಲ್ಲಿ ೨ ನೇ ತಾರೀಕಿನಿಂದ ಮತ್ತೆ ದಂಗೆ ಪ್ರಾರಂಭವಾಗಿ ಇದೇ ದಿನ ಅಗ್ನಿಸಾರಾಯಿಣ ಕಾಂಡದ ಸ್ಪಷ್ಟ ನಡೆಯಿತು. ಮೂರು ನಾಲ್ಕು ಸ್ಥಳಗಳಲ್ಲಿ ಕಲ್ಲು ಇಟ್ಟಂಗಿಗಳು ಒಗೆಯಲ್ಪಟ್ಟವು. ಪಿಸ್ತೂಲೂ ಉಪಯೋಗಿಸಲಾಯಿತು. ಪೋಲೀಸರೂ ಗುಂಡು ಹಾರಿಸಿದರು.

ಸರಹದ್ದ

ಮಿಲಿಟರಿ ಸ್ಟೋರು ಇದ್ದ ಕ್ಯಾಂಪೊಂದಕ್ಕೆ ಕೋಹಾಟ ರೇಲ್ವೆ ಸ್ಟೇಶನದಲ್ಲಿ ೩೦ ನೇ ತಾರೀಕು ಬೆಂಕಿ ಹತ್ತಿತು. ಬೆಂಕಿ [illegible] ಬೆಲೆಯ ಪತ್ತೆಗಳನ್ನು ಮಿಲಿಟರಿಯವರು ಹೋಲೀ ಸರು ಸಂಪತ್ತಿರಿಸಿದರು. ಆ [illegible] ಪ್ಯಾಸೆಂಜರ ಗಾಡಿ ಮೇಲೆ ಪಿಸ್ತೂಲ ಹತ್ತಿರ ಕಲ್ಲಿ ಸೆಯಲಾಯಿತು.

ಮದ್ರಾಸ

ಪುದುಕೊಟ್ಟಾ, ಬಂಗಿನಪಲ್ಲಿ ಹಾಗು ಸೊಂಡೂರ ಸಂಸ್ಥಾನಿಕರು ನರೇಂದ್ರಮಂಡಳ ಹಾಗು ಘಟನಾ ಸಮಿತಿಗೆ ಮನವಿಯನ್ನು ಕಳಿಸಿ ತಮ್ಮ ಗುಂಪನ್ನು ಸ್ವತಂತ್ರ ಘಟಕವನ್ನಾಗಿ ಮಾನ್ಯಮಾಡಿ ಘಟನಾ ಸಮಿತಿಯಲ್ಲಿ ತಮಗೆ ಪ್ರಾತಿನಿಧ್ಯಕೊಡಬೇಕೆಂದು ಕೇಳಿಕೊಂಡಿದ್ದಾರೆ. ಗುಂಪಿನ ಜನಸಂಖ್ಯೆ ಪ್ರಾತಿನಿಧ್ಯಕ್ಕೆ ಅವಶ್ಯಕವಾದಷ್ಟು ಇರುದಿದ್ದುದೆ ಈ ಬೇಡಿಕೆಗೆ ಕಾರಣ.

೧೯೪೭ ನೇ ಇಸ್ವಿಯ ಮದ್ರಾಸ ದೇವಾಲಯ ಪ್ರವೇಶ ಅಧಿಕಾರ ಕಾಯಿದೆ ಜೂನ ೨ ರಿಂದ ಮದ್ರಾಸ ಪ್ರಾಂತದಲ್ಲೆಲ್ಲ ಜಾರಿಯಲ್ಲಿ ಬಂದಿದೆ. ಇದರಲ್ಲಿ ಯಾವದೇ ಅಧಿಕಾರಿಯ ಸಮ್ಮತಿಯನ್ನವಲಂಬಿಸದೆ ಪೂಜೆಯ ಪೂರ್ಣ ಅಧಿಕಾರ ಕೊಡಲಾಗಿದೆ. ಹಿಂದೂ ಜನರಂತೆ ಹರಿಜನರಾದರೂ ದೇವಾಲಯ ಪ್ರವೇಶ ಮಾಡಿ 'ಪೂಜೆ ಮಾಡಲು ಇದರಿಂದ ಅಧಿಕಾರ ಪ್ರಾಪ್ತವಾಗಿದೆ.

ಸಿಂಗಾಪುರದಿಂದ ಮದ್ರಾಸಿಗೆಬಂದ ಇಬ್ಬರು ಪ್ರವಾಸಿಕರಲ್ಲಿ ಜಕಾತಿ ಅಧಿಕಾರಿಗಳು ಲಕ್ಷಕ್ಕಿಂತ ಹೆಚ್ಚು ಬೆಲೆಯ ಬಂಗಾರದ ಗಟಿ ಮತ್ತು ವಜ್ರ ವೈಡೂರ್ಯಗಳನ್ನು ಜಪ್ತ ಮಾಡಿದರು. ಇನ್ನೂ ಅನೇಕ ಪ್ರವಾಸಿಕರು ಅಕ್ರಮ ರೀತಿಯ ಸೊದಲಾದ್ದನ್ನು ತಂದಿದ್ದರು.

ಮದುರಾ ಕಮ್ಯುನಿಸ್ಟ ಒಳಸಂಚಿನ ಖಟ್ಲೆಯಲ್ಲಿಯ ೭ ಆರೋಪಿಗಳಿಗೆ ೨ ವರ್ಷ ಸಶ್ರಮ ಶಿಕ್ಷೆ ಮತ್ತು ಪ್ರತಿಯೊಬ್ಬರಿಗೆ ೪೫೦ ರೂ. ದಂಡ ವಿಧಿಸಲಾಯಿತು. ದಂಡ ಕೊಡದಿದ್ದರೆ ೮ ತಿಂಗಳ ಶಿಕ್ಷೆಯನ್ನನುಭವಿಸಬೇಕೆಂದು ವಿಧಿಸಲಾಗಿದೆ. ಮದುರಾ ಗಿರಣಿಯ ಒಡೆಯರ ಮೇಲೆ ಕಲ್ಲು ಮುಂತಾದವುಗಳನ್ನು ಒಗೆದ ಆರೋಪ ಅವರ ಮೇಲೆ ಇದ್ದಿತು.

ಭಾರತ ಸರಕಾರ ಜಪಾನಿನಿಂದ ಆಯಾತ ಮಾಡಿದ ನೂಲಿನಲ್ಲಿ ಮದ್ರಾಸ ಸರಕಾರಕ್ಕೆ ೬೦ ಲಕ್ಷ ಪೌಂಡು ನೂಲು ಬಂದಿದ್ದು ಈ ನೂಲು ಇಲ್ಲಿಯ ನೇಕಾರರು ಉಪಯೋಗಿಸುವ ನೂಲಿಗಿಂತ ೨೫ ಪಟ್ಟು ಹುಟ್ಟ ಬೀಳುವದರಿಂದ ಮದ್ರಾಸ ಸರಕಾರ ತಮಗೆ ನೂಲು ಬೇಡವೆಂದು ತಿಳಿಸಿದೆಯಂತೆ. ಮದ್ರಾಸ ಪ್ರಾಂತದಲ್ಲಿ ಅತ್ಯಂತ ವಿವಾದಕ್ಕೆ ಅವಕಾಶ ಕೊಟ್ಟಿರುವ ಕದಿರುಗಳು ಮದ್ರಾಸಕ್ಕೆ ಬಗ್ಗೆ ಮುಟ್ಟಿವೆ.

ಬಿಹಾರ

ಮೊಂಘೀರದ ಬೇರೆ ಬೇರೆ ಭಾಗಗಳಲ್ಲಿ ಪೋಲೀಸರು ೭ ದೊಡ್ಡ ಬಾಂಬು ಗುಂಡುಗಳ ಒಂದು ಪ್ಯಾಕೆಟ್ಟು ಮತ್ತು ಒಂದು ಬಂದೂಕನ್ನು ಶೋಧಿಸಿದರು. ಬಟಾಟಿಗಳ ಮಧ್ಯದಲ್ಲಿ ಬಾಂಬುಗಳು ದೊರೆತವು. ಬಟಾಟಿ ಸಂಗ್ರಹಿಸಿದವನ ಮೂವರು ಮಕ್ಕಳನ್ನು ಸೆರೆಹಿಡಿದಿದ್ದು ಅವರ ತಂದೆ ಫರಾರಿಯಾಗಿರುವನು. ಲಾಯಸೆನ್ಸ ಇಲ್ಲದಿದ್ದ ಹಲವು ಬಂದೂಕುಗಳನ್ನೂ ಶೋಧಿಸಲಾಗಿದೆ.

ವೈಸರಾಯ ಲಾರ್ಡ ಲುಯಿ ಮೌಂಟಬ್ಯಾಟನ್‌ರು ಮರಳಿದ್ದರಿಂದ ಸರ್ ಜಾನ ಕಾಲವಿಲ್‌ರವರು ಮರಳಿ ಮುಂಬಯಿ ಗವರ್ನರರ ಸ್ಥಳಕ್ಕೆ ಬಂದರು. ಸರ್ ಎಸ್ ವಿ ರಾಮ್ಯಮೂರ್ತಿ ಮದ್ರಾಸಕ್ಕೆ ಮರಳಿದರು.

ಬಂಗಾಲ

ಕಲಕತ್ತೆಯಲ್ಲಿ ೩೦ ನೇ ತಾರೀಕು ಸಾಯಂಕಾಲ ೫ ಗಂಟೆಯ ವರೆಗೆ ಜಾತೀಯ ದುರಂತದಲ್ಲಿ ೫ ಜನ ಸತ್ತಿದ್ದು ೨೫ ಜನ ಗಾಯಗೊಂಡಿರುವರು. ಇದಲ್ಲದೆ ಕೊಲಕೋಲಾ ಪೋಲೀಸ ಠಾಣೆ ಭಾಗದಲ್ಲಿ ಒಂದು ಹೆಣವೂ ಸಿಕ್ಕಿದೆ. ಕಲಕೋಲಾ ಭಾಗದಲ್ಲಿ ೪೧ ಗಂಟೆಯ ಅಖಂಡ ಕರ್ಫ್ಯೂ ಹುಕುಮನ್ನು ಜಾರಿಯಲ್ಲಿ ತರಲಾಗಿದೆ. ಜೂನ ೭ ರ ವರೆಗೆ ಸಂಜೆ ೭ ರಿಂದ ಮುಂಜಾನೆ ೬ ರ ವರೆಗೆ ಕರ್ಫ್ಯೂ ಜಾರಿಯಲ್ಲಿ ತರಲಾಗಿದೆ.

ಕಲಕತ್ತೆಯ ಆನಂದಬಜಾರ ಪತ್ರಿಕೆಯ ದಿಸೆಂಬರ ೧೧, ಜಾನೇವಾರಿ ೨೪, ಫೆಬ್ರುಅರಿ ೧೯ ಹಾಗು ಎಪ್ರಿಲ ೪ ರ ಎಲ್ಲ ಪ್ರತಿಗಳನ್ನು ಬಂಗಾಲ ಸರಕಾರದವರು ಜಪ್ತ ಮಾಡಿರುವರು. ನವಖಾಲಿಯ ಸಂಬಂಧದ ಆಕ್ಷಿಪ್ತ ಬರೆಹಗಳು ಇತ್ತಗಳಲ್ಲಿ ಪ್ರಸಿದ್ಧವಾಗಿವೆಯಂತೆ. ಇದೇ ರೀತಿ ಹಿಂದುಸ್ಥಾನ ಸ್ಟಾಂಡರ್ಡ ಪತ್ರಿಕೆಯ ದಿಸೆಂಬರ ೧೪, ಫೆಬ್ರುಅರಿ ೧೦, ೧೪ ಎಪ್ರಿಲ ೧೨ ನೇ ತಾರೀಕಿನ ಎಲ್ಲ ಪ್ರತಿಗಳನ್ನು ಜಪ್ತ ಮಾಡಿರುವರು.

ಬಂಗಾಲ ಆಸಾಮ ರೇಲ್ವೆಯ ಮುಖ್ಯ ಮಾರ್ಗವನ್ನು ಕಟ್ಟು ಮಾಡುವ ಪ್ರಯತ್ನ ನಡೆದಿದೆಂದು ತಿಳಿಯುತ್ತದೆ. ಭವಾನಿಪುರ ಮತ್ತು ಫುಲಬಾರಿ ಸ್ಟೇಶನಗಳ ನಡುವೆ ಹಳಿಗಳ ಮೇಲೆ ಕಲ್ಲು ಮತ್ತು ಇತರ ಆತಂಕಗಳನ್ನು ಇಡಲಾಗಿತ್ತು. ಮತ್ತು ಸಮೀಪದಲ್ಲಿ ೨೦೦ ಜನ ನಿಂತುದನ್ನು ಡ್ರಾಯವರ ನೋಡಿದನು. ಕೂಡಲೆ ಗಾಡಿಯನ್ನು ಹಿಂದಕ್ಕೆ ಓಡಿಸಿ ಅನಾಹುತವನ್ನು ತಪ್ಪಿಸಿದನು.

ಡಾಯಮಂಡ ಬಂದರದಿಂದ ೩೦ ಮೈಲುಗಳಾಚೆ ಕಳೆದ ತಿಂಗಳು ೨೪ ನೇ ದಿನಾಂಕದಲ್ಲಿ ಒಂದು ನಾವೆ ಮುಳುಗಿದ್ದರಿಂದ ೭೫ ಜನ ಮತ್ತು ೧೫೦೦೦ ರೂ. ಬೆಲೆಯ ಸರಕು ಜಲಸಮಾಧಿ ಹೊಂದಿತೆಂದು ತಿಳಿಯುತ್ತದೆ. ಅದರಲ್ಲಿ ೧೫೫ ಪ್ರವಾಸಿಕರು ಮತ್ತು ೨೫೦ ಮಣ ಸರಕು ಇತ್ತು. ೭೫ ಜನ ಪಾರು ಮಾಡಲ್ಪಟ್ಟದ್ದಾರೆ. ಒಂದು ಹೆಣ ಮಾತ್ರ ತೇಲಿ ದಂಡೆಗೆ ಬಂದಿದೆ. ಉಳಿದವರ ಪತ್ತೆಯಿಲ್ಲ.

ಪೆಟ್ರೋಲ ಸೀದಾವನ್ನು ರದ್ದು ಪಡಿಸುವದಾಗಲಿ ಇಲ್ಲವೆ ಅದರ ಪ್ರಮಾಣವನ್ನು ಹೆಚ್ಚಿಸುವದಾಗಲಿ ಸದ್ಯಕ್ಕೆ ಸಾಧ್ಯವಿಲ್ಲೆಂದು ಹಿಂದುಸ್ಥಾನ ಸರಕಾರದ ಸಾರಿಗೆ ಖಾತೆಯವರು ತಿಳಿಸಿದ್ದಾರೆ.

ಯುರೋಪಿನಲ್ಲಿ ಅರಸರ ಪತನ

ಕಳೆದ ಒಂದೆರಡು ಶತಕದಿಂದ ರಾಜಸತ್ತೆಯ ಲಹರಿ ಜಗತ್ತಿನಲ್ಲಿ ಕಡಿಮೆಯಾಗುತ್ತ ಹೋಗಿದೆ. ಮೊದಲನೆ ಮಹಾಯುದ್ಧಾನಂತರ ಕೆಲ ಅರಸರು ಹೋದರು, ಕೆಲವರು ಬಂದರು. ಆದರೆ ಎರಡನೆ ಯುದ್ಧದ ನಂತರ ಯುರೋಪಿನ ರಾಜರ ಸಂಖ್ಯೆ ತೀವ್ರವಾಗಿ ಇಳಿದಿದೆ. ರಾಜಸತ್ತೆ ಮತ್ತು ಪ್ರಜಾರಾಜ್ಯದ ತಿಕ್ಕಾಟ ಪ್ರಾರಂಭವಾದ ಕಾಲದಲ್ಲಿ ಅವೆರಡಕ್ಕೂ ಅಂಟಿಕೊಂಡಿದ್ದ ಅರ್ಥ ಈಗ ಇಲ್ಲದಾಗಿದೆ. ಉದಾಹರಣೆಗಾಗಿ ರಾಜಸತ್ತೆಯೆನಿಸಿದ ಇಂಗ್ಲಂಡಿನಲ್ಲಿ ಇಂದು ಸಾಮ್ಯವಾದಿ ಸರಕಾರವಿದ್ದರೆ ಪ್ರಜಾರಾಜ್ಯವೆನಿಸಿದ ಪೋರ್ತುಗಾಲದಲ್ಲಿ ಪ್ರತಿಗಾಮಿ ಸರ್ವಾಧಿಕಾರಿಯೊಬ್ಬನು ಆಳುತಿದ್ದಾನೆ. ಇರಲಿ.

ಪೀಟರ

ಯುಗೊಸ್ಲಾವಾಕಿಯಾ ಎಂಬ ರಾಜ್ಯ ಮೊದಲನೆ ಮಹಾಯುದ್ಧದ ನಂತರ ನಿರ್ಮಿತವಾಯಿತು. ಅದರಲ್ಲಿ ಸರ್ಬ—ಕ್ರೋಟ—ಮುಸ್ಲಿಂ ಜನರ ಅಂತಃಕಲಹದ ಸಂಭವವಿದ್ದುದರಿಂದ ರಾಜಸತ್ತೆ ಸ್ಥಾಪಿಸಲ್ಪಟ್ಟಿತು. ಅದರ ಕೊನೆಯ ಅರಸನಾದ ಪೀಟರನು ಯುದ್ಧಕಾಲದಲ್ಲಿ ಇಂಗ್ಲಂಡಿಗೆ ಪಲಾಯನ ಹೇಳಿಸಿದವನು ಮರಳಲೇ ಇಲ್ಲ. ಮಾಸ್ಕೋದಲ್ಲಿ ತರಬೇತಾದ ಕಮ್ಯುನಿಸ್ಟ ಟಿಟೋನಿಗೆ ಯುದ್ಧಕಾಲದಲ್ಲಿ ಕೂಟಯೋಧರ ನೇತೃತ್ವ ದೊರೆತುದರಿಂದ ಪೀಟರನು ಮರಳಲು ಮನಸು ಮಾಡಲಿಲ್ಲ. ೧೯೪೫ ನವೆಂಬರದಲ್ಲಿ ಯುಗೊಸ್ಲಾವಿಯಾದ ಘಟನಾ ಸಮಿತಿಯಲ್ಲಿ ಮತಗಣನೆ ನಡೆದಾಗ ಅರಸನಿಗೆ ಕೇವಲ ನೂರಕ್ಕೆ ೧೦ ಮತ ದೊರೆಯಿತು. ಅವನನ್ನು ಪದಚ್ಯುತಗೊಳಿಸಲಾಯಿತು.

ಮಿಹೇಲ

ರುಮೇನಿಯಾದಲ್ಲಿ ಅರಸೊತ್ತಿಗೆಯನ್ನು ರಶಿಯನ್ನರು ಕಿತ್ತುಹಾಕಿಲ್ಲ.ಆದರೆ ಅದರ ಯುವಕ ರಾಜ ಮಿಹೇಲನು ರಶಿಯನ್ನರ ಪಕ್ಷಪಾತಿ ಸರಕಾರದ ಪಂಜರದಲ್ಲಿದ್ದಂತಿರುವನು. ೧೯೪೦ ರಲ್ಲಿ ತನ್ನ ಅಪ್ಪ ಕೆರೋಲನ ನಂತರ ಪಟ್ಟಕ್ಕೆ ಬಂದ. ಇವನು ಮೊದಲು ಹಿಟ್ಲರನೊಡನೆ ಸೇರಿಕೊಂಡು ರಶಿಯನ್ನರೊಡನೆ ಯುದ್ಧ ಮಾಡಿದರೂ ಅವರು ಗಡಿಯೊಳಗೆ ನುಗ್ಗಿದೊಡನೆ ಒಳಸಂಚಿನಿಂದ ನಾಝೀ ಹಸ್ತಕ ಮಂತ್ರಿಗಳನ್ನು ರುಳಿಸಿ ಮಿತ್ರರಿಗೆ ಶರಣು ಬಂದನು. ಇದಕ್ಕಾಗಿಯೇ ಏನೋ ರಶಿಯನ್ನರು ಅವನನ್ನು ಹೆಸರಿಗಾದರೂ ಇರಗೊಡಿಸಿದ್ದಾರೆ.

ಬಲ್ಗೇರಿಯಾ

ತುರ್ಕಿಯ ಸಾಮ್ರಾಜ್ಯದ ನೊಗದಿಂದ ೫೦೦ ವರ್ಷಗಳ ನಂತರ ೧೯೦೮ರಲ್ಲಿ ಸ್ವತಂತ್ರವಾದ ಬಲ್ಗೇರಿಯಾದಲ್ಲಿ ಅರಸೊತ್ತಿಗೆಸ್ಥಾಪಿಸಲ್ಪಟ್ಟಿತು. ೧೯೧೫ರಲ್ಲಿ ಸರ್ಬಿಯಾದಿಂದ ಒಂದು ತುಣುಕನ್ನು ನುಂಗುವ ದುರಾಶೆಯಿಂದ ಅದು ಜರ್ಮನಿಯ ಸಂಗಡ ಸೇರಿಕೊಂಡು ಯುದ್ಧದಲ್ಲಿ ಸೋತದ್ದರಿಂದ ಗ್ರೀಸಿಗೆ ಕೆಲ ಭಾಗಗಳನ್ನು ಬಿಟ್ಟುಕೊಡಬೇಕಾಯಿತು. ಎರಡನೆ ಮಹಾಯುದ್ಧದಲ್ಲಿ ಅದು ರಶಿಯಾದ ಹೊರತು ಉಳಿದ ಮಿತ್ರರ ಮೇಲೆ ಯುದ್ಧ ಸಾರಿತು. ಅದಕ್ಕೂ ಅನುಕೂಲತೆಗಾಗಿ ರಶಿಯಾ ೧೯೪೪ರಲ್ಲಿ ಅದರ ಮೇಲೆ ಯುದ್ಧ ಸಾರಿತು. ರಶಿಯನ್ನರ ತಂತ್ರದಿಂದ ಅಲ್ಲಿ ಕಮ್ಯುನಿಸ್ಟ ಪ್ರಭಾವವುಳ್ಳ "ಪಿತೃಭೂಮಿ ಪಕ್ಷ" ಅಧಿಕಾರ ಕಸಿದುಕೊಂಡಿತು. ಸಪ್ಟೆಂಬರ ೧೯೪೬ರಲ್ಲಿ ಸಾರ್ವತ್ರಿಕ ಮತಗಣನೆ ನಡೆದಾಗ ಅರಸೊತ್ತಿಗೆಗೆ ಬೆಂಬಲ ದೊರಕದೆ ಅದು ಪ್ರಜಾರಾಜ್ಯವಾಯಿತು.

ಹಂಗೇರಿ

ತುರ್ಕಿ ಮತ್ತು ಆ ಮೇಲೆ ಆಸ್ಟ್ರೋ ಹಂಗೆರಿ ಸಾಮ್ರಾಜ್ಯದಲ್ಲಿ ಸೇರಿದ್ದ ಈ ಚಿಕ್ಕ ದೇಶವನ್ನು ಮೊದಲನೆ ಮಹಾಯುದ್ಧದ ನಂತರ ಸ್ವತಂತ್ರ ಮಾಡಿದಾಗ ಅರಸೊತ್ತಿಗೆ ಸ್ಥಾಪಿಸಲ್ಪಟ್ಟಿತು, ಆದರೆ ಅರಸನೇ ಇಲ್ಲದ ಅರಸೊತ್ತಿಗೆಯಾದ ಅದನ್ನು ಅಡ್ಮಿರಲ ಹೋರ್ತಿಯೆಂಬವನು ರೀಜಂಟನಾಗಿ ಆಳುತ್ತಿದ್ದನು. ಎರಡನೇ ಮಹಾಯುದ್ಧಾನಂತರದ (೧೯೪೫) ಚುನಾವಣೆಗಳಲ್ಲಿ ಕಮ್ಯುನಿಸ್ಟ ವಿರೋಧಿಗಳಿಗೆ ಅಲ್ಲಿ ಹೆಚ್ಚು ಸ್ಥಾನ ದೊರಕಿದರೂ ರಶಿಯನ್ ಆಕ್ರಮಣ ಸೇನೆಯ ತಂತ್ರದಿಂದ ಆ ಪಕ್ಷದ ಕೈಬಲಗುಂದುತ್ತಿದ್ದು ಕಮ್ಯುನಿಸ್ಟರು ಮೇಲ್ಗೈಯಾಗುತ್ತಿದ್ದಾರೆ. ಅಲ್ಲಿಯ ಅರಸೊತ್ತಿಗೆಗೆ ಭವಿಷ್ಯವೇ ಇದ್ದಂತಿಲ್ಲ.



ರಕ್ತ ಸುರಿದು ಅಪಾಯವಾಗಬಹುದೆಂಬ ಭಯದಿಂದ ಈ ವರೆಗೆ ಶಸ್ತ್ರಕ್ರಿಯೆ ಮಾಡಲಸಾಧ್ಯವಾಗಿದ್ದ ಪ್ರಕರಣಗಳನ್ನೂ ಶಸ್ತ್ರಚಿಕಿತ್ಸೆಗೆ ಒಳಪಡಿಸಲು ಹೊಸ ಶೋಧಗಳಿಂದ (ಇಂಗ್ಲಂಡಿನಲ್ಲಿ) ಸಾಧ್ಯವಾಗಿದೆ. ಮಾನವನ ದೇಹದಲ್ಲಿ ರಕ್ತಸ್ರಾವವನ್ನು ತಡೆಯುವ ರಕ್ತದ ಅಂಶಗಳನ್ನು ಬೇರ್ಪಡಿಸಿ ಅವುಗಳನ್ನು ಸೀಸೆಗಳಲ್ಲಿ ಹಾಕಿಡಲಾಗುವದು. ದೊಡ್ಡ ಶಸ್ತ್ರಕ್ರಿಯೆ ಆಗಿ ರಕ್ತಸ್ರಾವವಾದೊಡನೆ ಇವನ್ನು ಹಚ್ಚಿಬಿಟ್ಟರೆ ರಕ್ತಸ್ರಾವ ನಿಂತು ಹೋಗುವದು. ಚಿತ್ರದಲ್ಲಿ ಈ ಕ್ರಿಯೆಗೆ ಬೇಕಾದ ರಕ್ತಾಂಶಗಳ ಸೀಸೆಗಳನ್ನು ತೋರಿಸಲಾಗಿದೆ.

ಕಾಂಗ್ರೆಸ್ಸಿನ ವಿರುದ್ಧ ಬಂಡು ಹೂಡಬೇಡಿರಿ

ಬ್ರಿಟಿಶ ಯೋಜನೆಯ ಬಗ್ಗೆ ಗಾಂಧೀಜಿಯ ಹೇಳಿಕೆ

ಬ್ರಿಟಿಶರ ಹೊಸ ಹಿಂದೀ ಯೋಜನೆ ಪ್ರಸಿದ್ಧವಾದ ನಂತರ ತಾ ೪ ನೇ ದಿನ ಗಾಂಧೀಜಿಯವರು ಆ ಸಂಬಂಧದಲ್ಲಿ ದಿಲ್ಲಿಯಲ್ಲಿ ಪ್ರಾರ್ಥನೋತ್ತರ ಭಾಷಣದಲ್ಲಿ ಜನರಿಗೆ ಹೀಗೆ ಉಪದೇಶಿಸಿದರು.

"ಕಾಂಗ್ರೆಸ್ಸು ಬ್ರಿಟಿಶ ಸರಕಾರದ ಯೋಜನೆಯನ್ನು ಸ್ವೀಕರಿಸಿತೆಂದು ಅದರ ವಿರುದ್ಧ ಬಂಡೆಬ್ಬಿಸಬೇಡಿರಿ. ಕಾಂಗ್ರೆಸ್ಸು ಗತ್ಯಂತರವಿಲ್ಲದೆ ಈ ಪರಿಸ್ಥಿತಿಯನ್ನೊಪ್ಪಬೇಕಾಯಿತೆಂದು ಹೇಳಬಲ್ಲೆ. ಹಿಂದುಗಳಾಗಲಿ ಮುಸ್ಲಿಮರಾಗಲಿ ಏನನ್ನು ಕಳೆದುಕೊಂಡಿಲ್ಲವೆಂದು ಹೇಳಿ ನಿಮ್ಮ ಹೃದಯದ ನೋವನ್ನು ಕಡಿಮೆ ಮಾಡ ಬಯಸುತ್ತೇನೆ. ವಾಯಿಸರಾಯರು ಏನೇ ಮಾಡಿದರೂ ಜನಸಾಮಾನ್ಯರು ಒಡಂಬಡಿಕೆಯಿಂದ ಅದನ್ನು ಬದಲಿಸಬಲ್ಲರು.

ವಾಯಿಸರಾಯರು ಈ ದೇಶವನ್ನು ಸುವ್ಯವಸ್ಥೆಯಲ್ಲಿಯೆ ಬಿಟ್ಟು ಹೋಗಬೇಕೆಂದು ಪಟ್ಟ ಶ್ರಮವನ್ನು ಗಾಂಧೀಜಿ ಹೊಗಳಿದರು. ಜಿನ್ನಾ ಸಾಹೇಬರಿಗೆ ಅವರು ಕಳಕಳಿಯ ವಿನಂತಿ ಮಾಡಿಕೊಂಡು, "ಜಿನ್ನಾ ಸಾಹೇಬರಿಗೆ ಅವರು ಬೇಡಿದ್ದು ದೊರೆತಿರುವದರಿಂದ ಇನ್ನು ಅವರು ಕಾಂಗ್ರೆಸ್ಸನ್ನೂ ಇತರ ಪಕ್ಷಗಳನ್ನೂ ಸಭೆ ಸೇರಲು ಕರೆದು ಬ್ರಿಟಿಶರ ಆಶ್ರಯವಿಲ್ಲದೆ ಈಗಿರುವ ಸಮಸ್ಯೆಗಳಿಗೆ ಪರಿಹಾರವನ್ನು ಕಂಡು ಹಿಡಿಯಬೇಕು," ಎಂದರು.

ಅವಿಭಾಗವಾದ ಹಿಂದುಸ್ತಾನ ಒಂದಾದೀತೆಂಬ ದೃಢವಾದ ಆಸೆಯನ್ನೂ ಗಾಂಧೀಜಿ ವ್ಯಕ್ತಗೊಳಿಸಿದರು.

ಜಿನ್ನಾ ಸಾಹೇಬರಿಗೆ ರಾಜಾಜಿಯ "ಪಾಕಿಸ್ತಾನ"

(೧ನೇ ಪುಟದಿಂದ)

ಬೇರೆ ಬೇರೆ ಗವರ್ನರ ಜನರಲ್ಲರನ್ನು ನಿಯಮಿಸಲಾಗುವುದೆಂದೂ ಹಿಂದೀಪಕ್ಷಗಳ ಅಪೇಕ್ಷೆಯಾದರೆ ಸಂಯುಕ್ತರಾಷ್ಟ್ರ ಸಂಘದ ಪ್ರತಿನಿಧಿಗಳನ್ನು ಸೀಮಾ ಪರಿಶೀಲಕ ಸಮಿತಿಯಲ್ಲಿ ಕೆಲಸ ಮಾಡಲು ಆಮಂತ್ರಿಸಲಾಗುವದೆಂದು ಇಂಗ್ಲಂ



(ದಿವಂಗತ ಸಾದಡೆಯುವರು)

ದಿನ ಭಾರತ ಕಚೇರಿಯಲ್ಲಿ ನಡೆದ ಪತ್ರಿಕಾಕರ್ತರ ಪರಿಷತ್ತಿನಲ್ಲಿ ಭಾರತ ಮಂತ್ರಿಗಳಾದ ಲಾರ್ಡ ಲಿಸ್ಟೋವೆಲ್ಲರು ಹೇಳಿದರು.

ಸಮ್ಮಿಶ್ರ ಸರಕಾರ

ಸದ್ಯದಲ್ಲೇ ಬಂಗಾಲ ಪಂಜಾಬಗಳಲ್ಲಿ ಸಮ್ಮಿಶ್ರ ಸರಕಾರಗಳು ಸ್ಥಾಪನೆಯಾಗಬಹುದೆಂದೂ ಸಾರ್ವತ್ರಿಕ ಮತಗಣನೆಯು ವಾಯವ್ಯ ಗಡಿನಾಡಿನಲ್ಲಿ ಸೈನ್ಯಾಧಿಕಾರಿಗಳನ್ನು ನೇಮಿಸಲಾಗುವದೆಂದೂ ಜೂನ ೩ ರಲ್ಲಿ ಹೊಸದಿಲ್ಲಿಯಲ್ಲಿ ನಡೆದ ಪತ್ರಿಕೋದ್ಯೋಗಿಗಳ ಸಭೆಯಲ್ಲಿ ವಾಯಿಸರಾಯರು ಹೇಳಿದರು. ಸಾರ್ವತ್ರಿಕ ಮತಗಣನೆಗೆ ನಿಷ್ಪಕ್ಷಪಾತ ಜನರನ್ನು ಆರಿಸಲಾಗುವುದೆಂದು ಅವರು ಆಶ್ವಾಸನವಿತ್ತರು.

ಬೆಂಗಳೂರು-ಮೈಸೂರು

ಅಖಿಲ ಭಾರತ ಟೆಕ್ನಿಕಲ್ ಕೌನ್ಸಿಲ್ಲಿನ ಅಧ್ಯಕ್ಷರೂ ವಾಯಿಸರಾಯಿ ಕೌನ್ಸಿಲ್ಲಿನ ಹಿಂದಿನ ಸದಸ್ಯರೂ ಆದ ಶ್ರೀ ನಳಿನೀರಂಜನ್ ಸರ್ಕಾರರವರು ತಾ ೩೦-೫-೪೭ರಲ್ಲಿ ಮೈಸೂರಿನ ಚೇಂಬರ್ ಆಫ್ ಕಾಮರ್ಸಿನ ಸತ್ಕಾರ ಕೂಟದಲ್ಲಿ ಮಾತನಾಡುತ್ತ, ದೇಶದ ಕೈಗಾರಿಕೆಗಳ ಬೆಳವಣಿಗೆಗೆ ಉದ್ಯಮಿಗಳ ಸಹಕಾರ ಅವಶ್ಯಕವೆಂದೂ ಇದರಿಂದ ಆರ್ಥಿಕ ಅಭಿವೃದ್ಧಿಯು ಹೆಚ್ಚುವುದೆಂದೂ ಹೇಳಿ, ಎಲ್ಲರ ಸಹಕಾರವನ್ನು ಕೋರಿದರು.

ಬೆಂಗಳೂರಿನ ಅಲಸೂರಿನಲ್ಲಿ 'ಬಿ' ರಸ್ತೆಯಲ್ಲಿರುವ ೬ನೆಯ ಅಂಕದ ಮನೆಯ ಸ್ವಲ್ಪ ಭಾಗವನ್ನು ಕಲೆಕ್ಟರರ ಅಪ್ಪಣೆಯಿಲ್ಲದೆ ಬೇರೊಬ್ಬರಿಗೆ ಬಾಡಿಗೆಗೆ ಕೊಟ್ಟರೆಂಬ ಆಪಾದನೆಯ ಮೇಲೆ ಮನೆಯ ಮಾಲೀಕರಾದ ಶ್ರೀ ಜಿ. ಗೋವಿಂದಪ್ಪನವರಿಗೆ ೩೦೦ ರೂಪಾಯಿಗಳ ಜುಲ್ಮಾನೆ ತಪ್ಪಿದರೆ ೩ ತಿಂಗಳ ಶಿಕ್ಷೆ ಎಂದು ದಂಡಿನ ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟರು ವಿಧಿಸಿದರು.

ಶ್ರೀ ದಿವಾಕರರವರು ತಾ ೩೦-೫-೪೭ರಲ್ಲಿ ಮೈಸೂರು ಸಂಸ್ಥಾನದ ಲೇಬರ್ ಫೆಡರೇಶನ್ನಿನವರನ್ನುದ್ದೇಶಿಸಿ ಬೆಂಗಳೂರಲ್ಲಿ ಭಾಷಣ ಮಾಡಿದರು. ಸಂಸ್ಥಾನದ ಹಲವು ಲೇಬರ್ ಸಂಘಗಳ ಪ್ರತಿನಿಧಿಗಳು ಹಾಜರಿದ್ದರು. ಮೈಸೂರಿನ ಲೇಬರ್ ಸಂಘಗಳು ಮತ್ತು ಫೆಡರೇಶನ್ನುಗಳು ಇಂಡಿಯನ್ ನ್ಯಾಶನಲ್ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿಗೆ ಸೇರಬಹುದೆಂದು ಇ. ನ್ಯಾ. ಟ್ರೇ. ಯೂ. ಕಾಂಗ್ರೆಸ್ಸಿನ ವ್ಯವಸ್ಥಾಪಕರಲ್ಲೊಬ್ಬರಾದ ಶ್ರೀ ಮುಂಡೂರರು ಹೇಳಿದರು.

ಅಖಿಲ ಭಾರತ ನಿಮ್ನವರ್ಗದ ಲೀಗಿನ ಸಂಸ್ಥಾನ ಶಾಖೆಯ ಸಮಾರಂಭವನ್ನು ಮದ್ರಾಸಿನ ಗ್ರಾಮಾಭಿವೃದ್ಧಿ ಶಾಖಾ ಮಂತ್ರಿಗಳಾದ ಶ್ರೀ ಕೂರ್ಮಯ್ಯನವರು ತಾ ೩೦-೫-೪೭ರಲ್ಲಿ ಗೋಪಾಲಪುರದಲ್ಲಿ ನಡೆದ ಒಂದು ಸಭೆಯಲ್ಲಿ ನೆರವೇರಿಸಿದರು. ಅಖಿಲ ಭಾರತ ನಿಮ್ನವರ್ಗದ ಲೀಗಿನ ಕಾರ್ಯದರ್ಶಿಗಳಾದ ಡಾ. ಜಿಯಾರ್ ದಾಸ್‌ರವರು ಅಧ್ಯಕ್ಷತೆ ವಹಿಸಿದ್ದರು.

ಬೆಂಗಳೂರಿನ ಕಬ್ಬನ್ ಪೇಟೆಯಲ್ಲಿರುವ "ಬಡವರ ಬಳಗ"ದ ೩ನೆಯ ವಾರ್ಷಿಕೋತ್ಸವವನ್ನು ಮೇ ೨೮ರಲ್ಲಿ ಶ್ರೀ ಕೆ ಚಂಗಲರಾಯ ರೆಡ್ಡಿಯವರು ನೆರವೇರಿಸಿದರು.

ಸಂಸ್ಥಾನದಲ್ಲಿ ರಾಜ್ಯಾಂಗ ಸುಧಾರಣೆಗಳನ್ನು ತರುವ ಬಗ್ಗೆ ಸಂಸ್ಥಾನದ ರೈತಪಕ್ಷದ ಅಧ್ಯಕ್ಷರಾದ ಶ್ರೀ ಎ. ಸಿ. ಮಲ್ಲಯ್ಯ ಮತ್ತು ಕಾರ್ಯದರ್ಶಿಗಳಾದ ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣನವರು ದಿವಾನರನ್ನು ಮೇ ೨೯ರಲ್ಲಿ ಬೆಂಗಳೂರಲ್ಲಿ ಭೆಟ್ಟಿಯಾಗಿ ಮಾತುಕತೆ ನಡೆಸಿದರೆಂದು ಅಧಿಕೃತ ಪ್ರಕಟನೆ ಹೊರಬಿದ್ದಿದೆ.


ಭಾರತ ಸರಕಾರವು ಭಾರತದ ನಾಲ್ಕು ಪ್ರದೇಶಗಳಲ್ಲಿ ಸ್ಥಾಪಿಸಬೇಕೆಂದಿರುವ "ವಿವಿಧ ಕಲಾ ಶಿಕ್ಷಣ ಶಾಲೆ"ಗಳಲ್ಲಿ ಒಂದನ್ನು ಬೆಂಗಳೂರಲ್ಲಿ ಸ್ಥಾಪಿಸಬೇಕೆಂದು ನಿರ್ಣಯಿಸಿದರೆಂದು ಗೊತ್ತಾಗಿದೆ. ಅದನ್ನು ಹಾಲಹಳ್ಳಿಯಬಳಿ ಕಟ್ಟಲು ಅವಶ್ಯಕವಿರುವ ಯೋಜನೆ ಆಗಲೇ ಸಿದ್ಧವಾಗಿದೆಯೆಂದೂ ತಿಳಿದುಬಂದಿದೆ.

ಮೈಸೂರು ರೇಲ್ವೆ ಕೆಲಸಗಾರರು ತಮ್ಮ ಸಂಬಳ ಸಾರಿಗೆಗಳನ್ನು ಮೊದಲನೆಯ ದರ್ಜೆಯ ಕೆಲಸಗಾರರಿಗೆ ಕೊಡುತ್ತಿರುವಷ್ಟಕ್ಕೆ ಹೆಚ್ಚಿಸಬೇಕೆಂದೂ ತಾತ್ಕಾಲಿಕ ಪರಿಹಾರವಾಗಿ ಪ್ರತಿ ಕೆಲಸಗಾರನಿಗೆ ೧೦೦೦ ರೂಪಾಯಿಗಳನ್ನು ಕೊಡಬೇಕೆಂದೂ ಕೇಳಿದ್ದಲ್ಲದೆ ಕೆಲವು ಬೇಡಿಕೆಗಳನ್ನು ಮಂಡಿಸಿ ರೇಲ್ವೆ ಜನರಲ್ ಮ್ಯಾನೇಜರರಿಗೆ ನೋಟೀಸು ಕೊಟ್ಟಿದ್ದಾರೆಂದು ತಿಳಿದುಬಂದಿದೆ.

ಮೈಸೂರ ಸಂಸ್ಥಾನದ ಕಾಂಗ್ರೆಸ ಕಾರ್ಯಸಮಿತಿಯು ಮೇ ೨೫—೨೬—೨೭ ರಲ್ಲಿ ಬೆಂಗಳೂರಲ್ಲಿ ಸಭೆಸೇರಿ ಹೊರಗಿನ ಬಂಡವಳ ಸಂಸ್ಥಾನದೊಳಗೆ ಬರಬಹುದೆಂಬ ದಿವಾನರ ಮೇ ೨೬ರ ಭಾಷಣದಬಗ್ಗೆ ಅಸಮಾಧಾನವನ್ನು ವ್ಯಕ್ತಪಡಿಸುವ ಬಗ್ಗೆ, ಸಂಸ್ಥಾನದ ಪ್ರಜೆಗಳಿಗೆ ಸ್ವತಂತ್ರವಾಗಿ ಅಖಂಡಭಾರತ ಪ್ರಜಾಪ್ರಭುತ್ವದೊಡನೆ ಸಹಕರಿಸಲು ಅವಕಾಶವಿರುವಂತೆ ಮಾಡಬೇಕೆಂಬುದರ ಬಗ್ಗೆ ಗೊತ್ತುವಳಿಗಳನ್ನು ಪಾಸುಮಾಡಿತು.

ಮೈಸೂರ ಅರಮನೆ ಕಂಟ್ರಾಕ್ಟರರಾದ ಶ್ರೀ ಸಿ ಚೆಲುವಾಚಾರ್ಯರು ತಮ್ಮ ಮಗಳ ಲಗ್ನದ ಸಂತೋಷದ ಜ್ಞಾಪಕಾರ್ಥವಾಗಿ ಶ್ರೀ ವಿಶ್ವಕರ್ಮ ವಿದ್ಯಾರ್ಥಿ ನಿಲಯಕ್ಕೆ ೫೦ ರೂಪಾಯಿಗಳನ್ನು ಉದಾರವಾಗಿ ದಾನಕೊಟ್ಟರು.

ಮೈಸೂರಲ್ಲಿ ಜಿಲ್ಲಾ ಕಾಂಗ್ರೆಸ ಪಕ್ಷದಿಂದ ಚುನಾಯಿತರಾಗಿರುವವರ ಸಭೆಯು ಮೇ ೨೬ ರಲ್ಲಿ ಮೈಸೂರಲ್ಲಿ ಜರುಗಿ ಅಧಿಕಾರಿ ವರ್ಗದವರನ್ನು ಆರಿಸಲಾಯಿತು.



ಮುಂಬಯಿ ಶೇರ ಪೇಟೆ

ತಾ. ೭

ರಾಜಕೀಯ ವಾತಾವರಣದ ಅನಿಶ್ಚಿತತೆ ಮೊದಲಾದ ಕಾರಣಗಳಿಂದ ಬಹಳ ಇಳಿಮುಖವಾಗಿದ್ದ ಬೆಲೆಗಳು ಜೂನ ೩ ರ ವೈಸರಾಯರ ಯೋಜನೆಗೆ ಸಾದೂಸ್ನವಾಗಿ ಎಲ್ಲ ರಾಜಕೀಯ ಪಕ್ಷಗಳ ಸ್ವಾಗತ ದೊರೆತದ್ದರಿಂದ ಸುಧಾರಿಸಿದವು ಆದರೂ ಈ ಸ್ಥಿರತೆ ದೀರ್ಘ ಕಾಲ ಉಳಿಯಲಿಲ್ಲ. ಲಾಭದಾಕೆಯಿಂದ ಮಾರುವವರು ಹೆಚ್ಚಾಗಲು ಬೆಲೆ ತಿರುಗಿ ಸ್ಥಿಮಿತಕ್ಕೆ ಬಂತು. ಟಾಟಾ ಸ್ಟೀಲ ಡೆಫರ್ಡ ಪಾಲುಗಳು ೧೮೧೭-೮-ರಿಂದ ೨೦೪೦—೦—೦ ಕ್ಕೇರಿ ೧೯೦೭-೮-೦ಗೆ ಮರಳಿದವು. ಡಾಯಿಂಗ ೯೬೦—೦—೦ ರಿಂದ ೧೦೪೫—೦—೭ ಕ್ಕೇರಿ ೧೦೧೦—೦—೦ ಕ್ಕೂ ಫಿನ್ಲೆ ೨೮೮—೦—೦ ರಿಂದ ೩೦೩-೦-೦ ಕ್ಕೇರಿ ೨೯೪-೦-೦ ಕ್ಕೂ ಕೋಹಿನೂರು ೬೧೩-೦-೦ ರಿಂದ ೬೫೫-೦-೦ ಕ್ಕೇರಿ ೬೩೩—೦—೦ ಕ್ಕೂ ಸ್ವದೇಶಿ ೫೯೨.೦-೦ ರಿಂದ ೬೨೫-೦-೦ ಕ್ಕೇರಿ ೬೦೮-೦.೦ ಕ್ಕೂ ಗೋಕಾಕ ೨೮೬-೦-೦ ರಿಂದ ೩೦೦—೦—೦ ಕ್ಕೇರಿ ೨೯೪-೦-೦ ಕ್ಕೂ ಇಂಡಿಯನ ಅಯರ್ನ ಎಂಡ ಸ್ಟೀಲ ೨೪೫-೦-೦ ರಿಂದ ೨೬೯-೦-೦ ಕ್ಕೇರಿ ೨೬೦—೦—೦ ಕ್ಕೂ ಅಸೋಸಿಯೇಟೆಡ ಸಿಮೆಂಟ್ಸ ೧೬೭-೦-೦ ರಿಂದ ೧೭೩-೮-೦ ಕ್ಕೇರಿ ೧೬೯-೮-೦ ಕ್ಕೂ ಇಳಿದವು. ಬ್ಯಾಂಕುಗಳಲ್ಲಿ ಸೆಂಟ್ರಲ ೯೨—೮—೦ ರಿಂದ ೯೬-೦-೦ ಕ್ಕೇರಿ ೯೫-೮-೦ ಕ್ಕೂ ಇಂಪಿರಿಯಲ ಎ ಸಿ ೨೧೫೦-೦-೦ ರಿಂದ ೨೨೧೦-೦-೦ ಕ್ಕೇರಿ ೨೧೯೫-೦-೦ ಕ್ಕೂ ರಿಝರ್ವ ೧೧೮-೦-೦ ರಿಂದ ೧೨೨—೦— ಕ್ಕೂ ಬದಲಾಯಿಸಿದವು. ಸರಕಾರಿ ಸಾಲ ಪತ್ರಗಳಲ್ಲಿ ಟಿ ಪಿ ೧೦೦—೧೧—೦ ರಿಂದ ೧೦೦—೭— ಕ್ಕೇರಿತು.

ಚಿನ್ನ---ಬೆಳ್ಳಿ

ಶನಿವಾರ ಕಟ್ಟೆಯ ಬೆಲೆಗಳು ಬಿಗಿಯಾಗಿಯೆ ಇವೆ. ಚಿನ್ನ ಕೆಲವರ ಕೈಯಲ್ಲಿ ಕೊರತೆಯಿರುವದರಿಂದ ಅವರು ಮಾರಲು ಇಷ್ಟ ಪಡುವದಿಲ್ಲ ಚಿನ್ನ ತಯಾರಿ ೧೧೩-೮-೦ ಗೂ ಹೋಗಿ ೧೧೧-೮-೦ ಯಲ್ಲಿ ನಿಂತರೆ ಬೆಳ್ಳಿ ೧೬೨-೮-೦ ಗೂ ಹೋಗಿ ೧೬೮-೭-೦ ಕ್ಕೆ ಬಂತು.

ಅರಳೆ

ಅರಳೆ ಪೇಟೆಯಲ್ಲಿ ವಿಶೇಷ ಉತ್ಸಾಹವಿಲ್ಲ. ವ್ಯಾಪಾರವೆಲ್ಲ ಸೆಪ್ಟೆಂಬರ ವಾಯಿದೆಯಲ್ಲಿ ನಡೆಯುತ್ತಿದೆ. ಈ ವಾಯಿದೆ ಅರಳೆಯು ಮೇಲೆ ಕನಿಷ್ಠ ಪರಮಾವಧಿ ಬೆಲೆಯ ನಿಯಮ ಇಲ್ಲದ್ದರಿಂದ ಅದರ ಬೆಲೆ ೪೩೦-೦-೦ ರಿಂದ ಕೆಳಬಂದರೆ ಸರಕಾರ ಹೊಣೆಯಾಗುವದಿಲ್ಲ. ಅದು ೪೩೫-೬-೦ ರಿಂದ ೪೩೭-೬-೦ ಕ್ಕೆ ಹೋಗಿ ೪೩೫-೨-೦ ಕ್ಕೆ ಮರಳಿತು.

ಎಣ್ಣೆ ಕಾಳು

ಶೇಂಗಾ	೧೫೦-೦-೦
ಅಗಸಿ	೨೬-೧೨-೦
ಅಗಸಿ ಎಣ್ಣೆ	೧೮-೨-೦

ಸಾಂಗಲಿ ಪೇಟೆ

	ರೂ.
ಅರಿಷಣ ಹೇರು	೧೦೦-೧೦೬
ಮೆಣಸಿನಕಾಯಿ ಹೇರು ,,	೧೦೦-೧೮೦
ಶೇಂಗಾ ಖಂಡಿ	೧೨೪

ಶಿವಮೊಗ್ಗೆ

ಅಡಿಕೆ ದೇಶಾವರ ನಂ ೧ ಮಣ ೧ಕ್ಕೆ		೪೯-೫೧॥
,, ,,	೨	೪೭-೪೯
ರಾಜಾಅಲವು		೪೪-೪೮
ಕೊರಸಾಲು		೪೦-೪೪॥
ಬೆಟ್ಟೆ ವಂತಿ		೩೦-೩೩
ಬೆಟ್ಟೆ		೨೫-೩೦

ಅಡಿಕೆ ಪೇಟೆಯಲ್ಲಿ ಬೇಡಿಕೆ ಚೆನ್ನಾಗಿದೆ.

ಹುಬ್ಬಳ್ಳಿ

ಜಯವಂತ ಹತ್ತಿ	ನಂ. ೧	೨೫೫-೨೬೦
,,	ನಂ. ೨	೨೩೦-೨೪೦
,,	ನಂ. ೩	೨೦೦-೨೨೦
ಆಫಲಂಡ ಹತ್ತಿ		೨೪೦-೨೫೫
ಜಿನ ಹೊಸದು		೧೬೦-೧೭೦
ಜಿನ ಹಳೇದು		೧೭೦-೧೭೭
ಡಬಲರೋಲ		೧೫೫-೧೬೫
ಸಾಜಿನ		೧೫೫-೧೬೦

ದಕ್ಷಿಣ ಕನ್ನಡ

ಮೇ ೨೩ ರಲ್ಲಿ ಮಂಗಳೂರಿನ ಸರಕಾರೀ ಕಾಲೇಜಿನಲ್ಲಿ ಸೇರಿದ ಅಖಿಲ ಹಿಂದುಸ್ಥಾನ ದಂತವೈದ್ಯಸಂಘದ ದ. ಕ. ಶಾಖೆಯ ಆರಂಭೋತ್ಸವದ ಅಧ್ಯಕ್ಷಪೀಠದಿಂದ ಮದ್ರಾಸ ಸರಕಾರದ ಆರೋಗ್ಯಮಂತ್ರಿಗಳಾದ ಶ್ರೀ ಏ. ಬಿ. ಶೆಟ್ಟರು ಈಗ ಮದ್ರಾಸ ಪ್ರಾಂತದಲ್ಲಿ ಕೇವಲ ನಾಲ್ಕೇ ಆಸ್ಪತ್ರೆಗಳಲ್ಲಿ ದಂತಚಿಕಿತ್ಸಾ ಶಾಖೆಗಳಿವೆಯೆಂದೂ ಯುದ್ಧೋತ್ತರ ಪುನರ್ರಚನೆಯ ಯೋಜನೆಯಂತೆ ಪ್ರತಿಯೊಂದು ಜಿಲ್ಲಾ ಕೇಂದ್ರದಲ್ಲೂ ಒಂದೊಂದು ದಂತ ಚಿಕಿತ್ಸಾಶಾಖೆಯನ್ನು ತೆರೆಯಬೇಕಾಗಿದೆಯೆಂದೂ ಭಾಷಣ ಮಾಡಿದರು.

"ಮಲಬಾರ ಮತ್ತು ದ. ಕನ್ನಡಗಳ ಮೂಲಕ ಹಾಯ್ದು ಹೋಗುವಂತೆ ಒಂದು ರಾಷ್ಟ್ರೀಯ ರಾಜಮಾರ್ಗಬೇಕೆಂಬುದನ್ನು ಕೇಂದ್ರ ಸರಕಾರ ಒಪ್ಪದಿದ್ದರೂ ಪ್ರಾಂತಿಕ ಸರಕಾರವು ಇಲ್ಲಿ ಪ್ರಾಂತೀಯ ರಾಜಮಾರ್ಗ ನಿರ್ಮಾಣಕ್ಕಾಗಿ ಯೋಜನೆಯನ್ನು ತಯಾರಿಸುತ್ತಿತ್ತು. ಈ ತೀರದಲ್ಲಿ ಒಂದು ಜಿಲ್ಲಾ ಮಾರ್ಗವನ್ನು ತಯಾರಿಸುವುದೂ ವಿಚಾರ ಮಾಡಲಾಗುತ್ತಿದೆ"— ಎಂದು ಮುಂತಾಗಿ ಶ್ರೀ ಏ. ಬಿ. ಶೆಟ್ಟರು ಮೇ ೩೦ ರಲ್ಲಿ ದ. ಕ. ಜಮೀನುದಾರ ಸಂಘದವರಿತ್ತ ಮಾನಪತ್ರಕ್ಕೆ ಉತ್ತರಕೊಡುತ್ತ ಹೇಳಿದರು.

ಕಳೆದ ೨೫ ರಲ್ಲಿ ಕಾರ್ಕಳದ ನಕ್ರೆ ಗ್ರಾಮದ ಬಿಲ್ಲವರ ಸಭೆಯು ಶ್ರೀ ಎಸ್ ರಾಮಪ್ಪ ಸಾವಕಾರ ನರಸಿಂಹ ರಾಜಪುರ—ಇವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಈ ಸಮಾಜದವರು ಸಂಘಟಿತರಾಗುವ ಬಗ್ಗೆ ಸಂಘವೊಂದನ್ನು ಸ್ಥಾಪಿಸಲಾಯಿತು.

ಕುಂಬಳೆ ಫಿರ್ಕಾದ ಪೈತಿ-ಕುಂಬ್ಳಾಜೆ ಗ್ರಾಮದ ಯೋಕದ್ದದಲ್ಲಿ "ವಿದ್ಯಾವಿಲಾಸಿನೀ ವಾಚನ ಸಂಘ" ಎಂಬ ಸಂಸ್ಥೆಯು ಮೇ ೨೮ ರಲ್ಲಿ ಆ ಕೇಂದ್ರದ ಗ್ರಾಮಾಭಿವೃದ್ಧಿ ಶಾಖೆಯ ಅಧೀಸರರಿಂದ ತೆರೆಯಲ್ಪಟ್ಟಿತು.

ಮೇ ೨೭ ರಲ್ಲಿ ಕುಂದಾಪುರದಲ್ಲಿ "ತಾಲೂಕು ಕೋಆಪರೇಟಿವ್ ಯೂನಿಯನ್ನಿ"ನ ಸಾಧಾರಣ ಸಭೆಯು ಶ್ರೀ ಮಂಜುನಾಥ ಐತಾಳರ ಅಧ್ಯಕ್ಷತೆಯಲ್ಲಿ ಜರುಗಿ ಡೈರೆಕ್ಟರರ ಆಯ್ಕೆಯಾಯಿತು.

ಶ್ರೀ ಬಿ. ಎಸ್. ಭಾಸ್ಕರ ರೈಗಳ ಅಧ್ಯಕ್ಷತೆಯಲ್ಲಿ ಪೋಸ್ಟ್‌ಮೆನ ಮತ್ತು ಕೆಳದರ್ಜೆಯ ನೌಕರರ ಸಂಘದ ಸಭೆಯು ಮೇ ೨೫ ರಲ್ಲಿ ಕಾರ್ಕಳದ ಬಂಟ್ಸ್ ಹಾಸ್ಟೆಲಿನಲ್ಲಿ ಜರುಗಿ ಹಲವು ಕೇಳಿಕೆಗಳು ಸಭೆಯ ಮುಂದಿಡಲ್ಪಟ್ಟವು.

ಉಡುಪಿಯ ಲಕ್ಷ್ಮೀ ಥಿಯೇಟರಿನಲ್ಲಿ ಡಾ. ಯು. ಪಿ. ಮಲ್ಯ, ಎಂ ಎಲ್ ಎ ಅವರ ಅಧ್ಯಕ್ಷತೆಯಲ್ಲಿ ಜರುಗಿದ ಸಾರ್ವಜನಿಕ ಸಭೆಯಲ್ಲಿ ಮಾನ್ಯ ಮಂತ್ರಿಗಳಾದ ಏ. ಬಿ. ಶೆಟ್ಟರಿಗೆ ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿಯ ಪತಿಯಿಂದ ಮಾನಪತ್ರ ಅರ್ಪಿಸಲಾಯಿತು.

ಬೈಂದೂರು ಕೇಂದ್ರದಲ್ಲಿರುವ ಪ್ರಾಥಮಿಕ ಶಾಲಾ ಶಿಕ್ಷಕರ ಮತ್ತು ಊರ ಪ್ರಮುಖರ ಸಭೆಯೊಂದು ಕಳೆದ ತಾ.೨೦ ರಲ್ಲಿ ಶ್ರೀ ಬಿ. ಯೋಗೀಶ್ವರ ಹೊಳ್ಳರ ಅಧ್ಯಕ್ಷತೆಯಲ್ಲಿ ಜರುಗಿತು.

ದ. ಕ. ಜಿಲ್ಲಾ ವಾಣಿಜ್ಯ ನೌಕರರ ಪ್ರಥಮ ವರ್ಷದ ಮಹಾಸಭೆಯು ಮೇ ೧೮ ರಂದು ಮಂಗಳೂರಿನ ಕೆನರಾ ಹೈಸ್ಕೂಲಿನಲ್ಲಿ ಕೂಡಿತು.

ದ. ಕ. ಜಿಲ್ಲಾ ವೀರಶೈವ ಸುಧಾರಕ ಸಮಾಜವೆಂಬ ಸಂಘವೊಂದು ಮೇ ೧೬ ರಲ್ಲಿ ಮಂಗಳೂರಲ್ಲಿ ಸ್ಥಾಪಿಸಲ್ಪಟ್ಟಿತು.

ಮೇ ೨೯ ರಲ್ಲಿ ಮಂಗಳೂರಿನ ಕಾರ್ನಾಡು ಸದಾಶಿವರಾವ ರಸ್ತೆಯಲ್ಲಿ "ಬೆಂಗಳೂರು ಪ್ರೊವಿಡೆಂಟ್ ಇನ್ಶೂರೆನ್ಸ್ ಕಾರ್ಪೊರೇಶನ್ ಲಿಮಿಟೆಡ್" ದವರ ದ. ಕ. ಜಿಲ್ಲೆಯ ಶಾಖೆಯು ತೆರೆಯಲ್ಪಟ್ಟಿತು.

ಮೈಸೂರು ಪ್ರಜಾಪ್ರತಿನಿಧಿ ಸಭೆಯ ಕಾರ್ಯಕಲಾಪಗಳು

ಪ್ರಜಾ ಪ್ರತಿನಿಧಿ ಸಭೆಯ ಮುಂಗಡ ಪತ್ರಿಕೆಯ ಅಧಿವೇಶನ ಮೇ ೨೮ ರಲ್ಲಿ ಪ್ರಾರಂಭವಾಯಿತು. ಅಧ್ಯಕ್ಷರಾದ ದಿವಾನರು ಸಂಸ್ಥಾನವು ಬ್ರಿ. ಮಂತ್ರಿಮಂಡಲದ ಮೇ ೧೬ ಯೋಜನೆಯನ್ನು ಅನುಸರಿಸುವುದೆಂದು ತಮ್ಮ ಆರಂಭ ಭಾಷಣದಲ್ಲಿ ಹೇಳಿದರು. ಮತ್ತು ಮೈಸೂರಿನಲ್ಲಿ ಕೆಲವು ರಾಜ್ಯಾಂಗಸುಧಾರಣೆಗಳಾಗಲಿವೆಯೆಂಬುದಾಗಿಯೂ ಅವರು ಅಪ್ಪಣೆ ಕೊಡಿಸಿದರು.

೪೭—೪೮ ರಲ್ಲಿ ೧೦ ಕೋಟಿ ೧೬ ಲಕ್ಷ ರೂಪಾಯಿಗಳ ವರಮಾನ; ೧೦ ಕೋಟಿ ೧೩ ಲಕ್ಷ ವೆಚ್ಚ ಉಳಿತಾಯ ಮೂರು ಲಕ್ಷ. ಮುಂದಿನ ವರ್ಷ ವಿದ್ಯಾಪ್ರಸಾರಕ್ಕೆ ೪೦ ಲಕ್ಷ ಅಥವಾ ಒಟ್ಟು ವೆಚ್ಚದಲ್ಲಿ ಶೇಕಡ ೧೫ ರಷ್ಟು ವ್ಯಯವಾಗುವುದು. ವ್ಯವಸಾಯದ ಕಾಲೇಜಿನ ಅಭಿವೃದ್ಧಿಗೆ ೫ ಲಕ್ಷ ರೂ ಗಳನ್ನು ಕೊಡಲಾಗಿದೆ. ಜೋಗದ ವಿದ್ಯುದ್ಯೋಜನೆಯಲ್ಲಿ ೪ "ಜನರೇಟರ್ಸ್" ಸ್ಥಾಪಿಸಲು ೧೦೭ ಲಕ್ಷ ರೂ ಗಳನ್ನು ಕೊಡಲಾಗಿದೆ.

ಮುಂಗಡ ಪತ್ರವನ್ನು ಮೇಲಿನಂತೆ ಸಭೆಯ ಮುಂದಿಟ್ಟು ವೇತನ ಸಮಿತಿಯವರು ಮಾಡುವ ಸಲಹೆಗಳ ಪರಿಣಾಮವಾಗಿ ಆಗುವ ಅಧಿಕ ವೆಚ್ಚವನ್ನು ಆಯವ್ಯಯದ ಅಂದಾಜಿನಲ್ಲಿ ಸೇರಿಸಿಲ್ಲವೆಂದೂ ವಿವಿಧ ಸಮಿತಿಗಳಿಂದ ರಚಿತವಾದ ಯುದ್ಧೋತ್ತರ ಪುನರ್ರಚನೆಯ ಯೋಜನೆಗಳನ್ನು ಕಾರ್ಯಕ್ಕಿಳಿಸಲು ಬಹಳ ಹಣಬೇಕಾಗುವುದೆಂದೂ ಅದರ ಈಯೆಲ್ಲ ಖರ್ಚಿಗೆ ತಕ್ಕಂತೆ ಸರಕಾರದ ವರಮಾನಗಳನ್ನು ಹೆಚ್ಚಿಸಲು ಬೇರೆ ಬೇರೆ ಮಾರ್ಗಗಳನ್ನು ಹಿಡಿಯಲಾಗುವುದೆಂದೂ ದಿವಾನರು ವಿಶದೀಕರಿಸಿದರು. ಮಧ್ಯಾಹ್ನದ ಸಭೆಯಲ್ಲಿ ಘಟನಾಸಮಿತಿಗೆ ಪ್ರತಿನಿಧಿಗಳನ್ನು ಕಳುಹಿಸುವುದರ ಬಗ್ಗೆ ಸರಕಾರ ನಿಶ್ಚಿತ ಧೋರಣ ತಾಳಿದುದನ್ನೂ ಪ್ರ. ಪ್ರ. ಸಭೆಯ ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಕೆಂಗಲ್ ಹನುಮಂತರಾಯರನ್ನು ಬಿಡುಗಡೆ ಮಾಡದುದನ್ನೂ ಪ್ರತಿಭಟಿಸಲು ಕಾಂಗ್ರೆಸ್ ಪಕ್ಷದ ಸುಮಾರು ೩೪ ಸದಸ್ಯರು ಸಭಾತ್ಯಾಗ ಮಾಡಿದರು.

೨೯ ರಲ್ಲಿ ಶ್ರೀಮನ್ಮಹಾರಾಜರ ಘೋಷಣೆಯನ್ನು ಕಾರ್ಯರೂಪಕ್ಕೆ ತರದೆ ನಂಬಿಕೆಗರ್ಹವಲ್ಲದ ಮಂತ್ರಿಮಂಡಲವನ್ನಿಟ್ಟುಕೊಂಡು ಸರಕಾರದವರು ಮಸೂದೆಗಳನ್ನು ಮತ್ತೆ ಮತ್ತೆ ತರುವುದನ್ನು ವಿರೋಧಿಸಿ ಕಾಂಗ್ರೆಸ್ ಪಕ್ಷದವರು ಸಭಾತ್ಯಾಗ ಮಾಡಿದರು. ಸಂಸ್ಥಾನದಲ್ಲಿ ತೊಗರಿ ಬೇಳೆಯ ಅಭಾವದ ಬಗ್ಗೆ ಕಾಂಗ್ರೆಸ್ ಪಕ್ಷದವರು ತಂದಿದ್ದ ನಿಲುವಳಿಯೊಂದು ಚರ್ಚಿಸಲ್ಪಟ್ಟು ಒಂದು ತಿಂಗಳ ನಂತರ ಪರಿಸ್ಥಿತಿ ಸುಧಾರಿಸುವದೆಂದು ಆಹಾರ ಖಾತೆಯ ಕಾರ್ಯದರ್ಶಿಗಳಿಂದ ಉತ್ತರ ಸಿಕ್ಕಿತು.

೩೦ ರ ದಿನ ಕೋರಂ ಇಲ್ಲದೆ ಸಭೆ ೨ ಗಂಟೆಗಳ ಕಾಲಮುಂದುವರಿದು ಆ ಬಳಿಕ ಕೆಲವು ಮಸೂದೆಗಳು ಚರ್ಚಿಸಲ್ಪಟ್ಟವು. ವೃತ್ತ ಪತ್ರಿಕೆಗಳ ಮೇಲಿನ ಮಸೂದೆಯನ್ನು ವಿರೋಧಿಸಲು ಎಂದಿನಂತೆ ಕಾಂಗ್ರೆಸ್ ಸದಸ್ಯರು ಎದ್ದು ಹೋದರು.

೩೧ ರ ಅಧಿವೇಶನದಲ್ಲಿ ಅಧ್ಯಕ್ಷರು ಅಧ್ಯಕ್ಷಪೀಠವನ್ನೇರಲು ಅನರ್ಹರೆಂದು ಮಂತಾಗಿ ಶ್ರೀ ಬಿ. ಎನ್. ಗುಪ್ತರು ಹೇಳಿ ಅಧ್ಯಕ್ಷರ ಮತ್ತು ಸಭೆಯ ಗೌರವಕ್ಕೆ ಭಂಗ ತಂದಿರುವುದನ್ನು ಜೂನ್ ೨ ರಲ್ಲಿ ಅಧ್ಯಕ್ಷರ ಗಮನಕ್ಕೆ ತರಲು, ಮಹತ್ವದ ವಿಷಯವಿದ್ದುದರಿಂದ ಆ ಬಗ್ಗೆ ತಮ್ಮ ಅಭಿಪ್ರಾಯವನ್ನು ಹಿಂದಿನಿಂದ ತಿಳಿಸುವದಾಗಿ ಅವರು ಹೇಳಿದರು.

೫ ವರ್ಷದ ಮುಂಗಡ ಪತ್ರಿಕೆಯ ಅಧಿವೇಶನದ ನಡೆವಳಿಕೆಯ ಪುಸ್ತಕದಲ್ಲಿಯ ಒಂದು ಪದಿಯನ್ನು ತೆಗೆದು ಹಾಕಬೇಕೆಂದು ಕಳೆದ ದಸರಾ ಅಧಿವೇಶನದಲ್ಲಿ ಶ್ರೀ ಬಿ. ಎನ್. ಗುಪ್ತರು ತಂದಿದ್ದ ಹಕ್ಕುಬಾಧ್ಯತೆಯ ಸೂಚನೆಯನ್ನು ಪರಿಶೀಲಿಸಲು ನೇಮಕವಾಗಿದ್ದ ಸಮಿತಿ ಒಪ್ಪಿಸಿದ ವರದಿ ಜೂನ್ ೧ ರಲ್ಲಿ ಚರ್ಚಿಸಲ್ಪಟ್ಟು ಮತಗಣನೆಯಾಗಿ ಬಿದ್ದು ಹೋಯಿತು.

ತಾ. ೨ ರಲ್ಲಿ ಪ್ರಜಾ ಪ್ರತಿನಿಧಿ ಸಭೆಯ ಹಕ್ಕುಬಾಧ್ಯತೆಯ ಸಮಿತಿಗೆ ೮ ಜನ ಸದಸ್ಯರನ್ನಾರಿಸಲಾಯಿತು. ಕಾಯಿದೆ ಮಂತ್ರಿಗಳಾದ ಮಿ॥ ತರೀಫರು ಸಮಿತಿಯ ಅಧ್ಯಕ್ಷರಾದರು.

ಸರಕಾರೀ ನೋಕರಿಗಳಲ್ಲಿ ೧೦೦ ಕ್ಕೆ ೭೦ ರಷ್ಟು ಮುಸಲ್ಮಾನರನ್ನು ನೇಮಿಸಿಕೊಳ್ಳಬೇಕೆಂದು ಸಿಂಧ ಸರಕಾರದವರು ಗೊತ್ತುಪಡಿಸಿದ್ದನ್ನು ಮೈಸೂರಿನ ಲೀಗದ ಧುರೀಣರಾದ ಎಸ್. ಎಂ. ಪಾದಶಹಾ ಇವರು ಟೀಕಿಸುತ್ತ ಇದೊಂದು ಮಹಾಪರಾಧವೆಂದು ಅಭಿಪ್ರಾಯಪಟ್ಟಿರುವರು.

ಈವಾರದ ಕತೆ

“ಕಾಲು ಜಾರಿದ ಕ್ಷಣವೊಂದು”

ಬರೆದವರು— ಎಮ್. ಎಲ್, ವ್ಹಿ. ಜೇವೂರ, ಮುನಿವಳ್ಳಿ.

ನಾಲ್ಕು ವರುಷಗಳ ಮೇಲೆ ಹುನಗೆ ಮರಳಿದ್ದೆ. ೪೩ನೇ ಎಪ್ರಿಲ್‌ನಿಂದ ೪೭ನೇ ಎಪ್ರಿಲ್—ಅಖಂಡ ನಾಲ್ಕು ವರುಷಗಳು! ಸ್ಟ್ಯಾಂಡಿನಲ್ಲಿ ಮೋಟಾರು ನಿಂತಿತು. ಸುತ್ತ ನೋಡಿದೆ. ಊರು ಬದಲಾಯಿಸಿತ್ತು, ಹೊಳೆಯು ತುಂಬಿ ಬಂದಿತ್ತು; ಶ್ರೀನಿವಾಸನೂ ಶಿವಜಾತನೂ ಮೋಟಾರಿನೆಡೆಗೆ ಧಾವಿಸುತ್ತಿದ್ದರು. ನನ್ನ ಬರವನ್ನು ಕಾದಿದ್ದರವರು. ಇಳಿದೆ, ಶ್ರೀನಿವಾಸನು ಬ್ಯಾಗು, ಬೆಡ್ಡಿಂಗನ್ನು ಹುಡುಗನೊಬ್ಬನ ಕೈಯಲ್ಲಿ ಕೊಟ್ಟು ಮನೆಗೆ ಕಳುಹಿದ. ನನ್ನ ಸುತ್ತ ಚಾಕ್ರಿಯೊಂದು. ಏನು? ಎಲ್ಲಿದ್ದಿರಿ? ಸೊರಗಿರುವಿರಿ! ಕಪ್ಪಾಗಿದ್ದೀರಿ— ಇವುಗಳಿಂದ ಪಾರಾಗಿ ಮೂವರೂ ಮನೆಯತ್ತ ನಡೆದೆವು. ಸುಮಾರು ಇಪ್ಪತ್ತು ಸ್ಥಳಗಳಲ್ಲಿ ಕೇಳಿಕೆ— ಹೇಳಿಕೆಗಳಾದ ನಂತರ ನಮ್ಮ ಓಣಿಯು ಸಮೀಪಿಸಿತು. “ಅಯ್ಯ ಯಾವಾಗ ಬರೋಣಾತು ಅಳಿಯ ದೇವರು? —ಏ— ವಾಸಣ್ಣಾ ಶ್ರೀಶೈಲ ಬಂದಾನ ನೋಡು” ಎನ್ನುತ್ತ ಪುರೋಹಿತ ರಂಗಮ್ಮನವರು ವಾಸುವನ್ನು—ಅವರ ಅಳಿಯ ಕರೆದರು.

“ಇದೇ ಹೀಂಗತೆ ಮೋಟಾರನಿಂದ ಬಂದೆ ನೋಡ್ರಿ, ರಂಗವ್ವಾ, ವಾಸು ಯಾವಾಗ ಬಂದಾನ?” ಎಂದೆ.

ವಾಸುವು ಒಳಗಿನಿಂದ ಶರಟು ಹಾಕಿಕೊಳ್ಳುತ್ತ “ನಾನೂ ನಿನ್ನೇ ಬಂದೆ ನೋಡು ಶ್ರೀಶೈಲಾ” ಅಂತೂ ಒಮ್ಮೆ ಬಂದೆಪಾ—ನಾಲ್ಕು ವರ್ಷ ಆಯ್ತಲ್ಲ?” ಎನ್ನುತ್ತ ಸಂಗಡವೇ ಬಂದ. ನಮ್ಮಲ್ಲಿಯ ಕೆಲ ರೂಢಿಯಲ್ಲಿನ ಬೀಗತನ ಬಾಂಧವ್ಯದ ಅಂಕಿತನಾಮಗಳು ಪಟ್ಟಣಿಗರಿಗೆ ವಿಚಿತ್ರವೆನಿಸಿದರೂ ನಮಗೆ ಹಳ್ಳಿಯಲ್ಲಿ ಮೈಯುಂಡು ಬಿಟ್ಟಿವೆ. ನಿಜವಾಗಿ ನಮ್ಮ ಬಾಂಧವ್ಯ ಬೆಳೆಯದಿದ್ದರೂ—ಅಂದರೆ ಶರೀರ ಸಂಬಂಧಗಳು ಆಗದಿದ್ದರೂ—ಎಲ್ಲರೂ ಎಲ್ಲರಿಗೆ ಬಂಧುಗಳೇ, ಬೀಗರೇ. ಜಾತಿ ಧರ್ಮಗಳ ತಡೆ ಅಲ್ಲಿ ಬರಲಾರದು.

ವಾಸುವಿನ ಸಮಾಚಾರ ನನಗೆ ಗೊತ್ತಿರಲಿಲ್ಲ. ಅದನ್ನೇ ವಿಚಾರಿಸುತ್ತ ನಡೆದೆವು. ನಾಲ್ಕು ಮನೆಗಳನ್ನು ದಾಟಿ ನಮ್ಮ ಮನೆಯತ್ತ ಹೊರಳುವ ಸಣ್ಣ ಬೀದಿಗೆ ತಿರುಗಿದೆವು. ನನ್ನ ಎದೆ “ಧಸ್” ಎಂದಿತು. ೪ ವರುಷದ ಹಿಂದಿನ— ಅದೂ ಊರು ಬಿಡುವಾಗಿನ ಕಡೆಯ ಕ್ಷಣದಲ್ಲಿಯ ಚಿತ್ರಗಳು ನನ್ನ ಮುಂದೆ ವಿಕಟವಾಗಿ ಕುಣಿದವು. ಆವಳಿದೆಯೂ ನಡುಗಿರಬೇಕು. ಅಂತಲೇ ಅವಸರದಿಂದ ಅವಳು ಮಗುವನ್ನೆತ್ತಿಕೊಂಡು ಮನೆಯಲ್ಲಿ ಮಾಯವಾದಳು.

“ಪಾರಕ್ಕ ಇದ್ದಳಂತೆ. ಒಂದೂ ಬುಲೆಟನ್ನು ಪೋಲೀಸರ ಕೈಗೆ ಹತ್ತಲಿಲ್ಲಪಾ ಮಹಾರಾಯಾ! ಇಲ್ಲದಿದ್ರೆ ರಾಸ್ಕಲ್ಸ್ ನಮ್ಮ ಪ್ರೋಗ್ರಾಮನ್ನ ಹಾಳು ಮಾಡಿಬಿಡತಿದ್ರು—ನಿನ್ನ ಗುರುತನೂ ಹತ್ತಿಲ್ಲ ನೋಡು ಶ್ರೀಶೈಲಾ! ಯಾರೋ ಅಂತ ಅವಸರದಿಂದ ಹೋದಳು.” ಶಿವಜಾತನೆಂದ.

ನನ್ನ ಚಿತ್ತವು ಮರು ಮಾತಾಡುವ ಸ್ಥಿತಿಯಲ್ಲಿರಲಿಲ್ಲ! ೪ ವರುಷದ ಹಿಂದಿನ ಸೂಕ್ಷ್ಮ ಚಿತ್ರಗಳು ಮನಸಿನಲ್ಲಿ ಬಿರುಗಾಳಿ ಎಬ್ಬಿಸಿದ್ದವು. ನಾಚಿಕೆ ಜುಗುಪ್ಸೆಗಳಿಂದ ನನ್ನ ಎದೆಯು ಭಾರವಾಗತೊಡಗಿತ್ತು. ಮಿತ್ರರು ನನ್ನ ಆಕಸ್ಮಿಕ ಮೌನವನ್ನು ಎಣಿಸಲೇ ಇಲ್ಲ. ನಾಲ್ವರೂ ಮನೆ ಸೇರಿದೆವು. ಅಲ್ಲಿಯೊಂದು ದೊಡ್ಡ ಚಾಕ್ರಿ ಬಲಿಯಹತ್ತಿದ್ದಿತು. ಅವರ ಪ್ರಶ್ನೆ ಉದ್ಗಾರ ಕೇಳಿಕೊಂಡೆವು. ಗಂಡಸರಿಗಿಂತ ಹೆಂಗಸರಿಗೆ ಸಮಾಧಾನಕರ ಉತ್ತರ ಕೊಡುವದು ಭಯಂಕರವಾಗಿತ್ತು. ಅಂತೂ ನಾಲ್ವರೂ ಮಿತ್ರರೇ. ಅವರ ಪ್ರಶ್ನೆಗಳ ಸುರಿಮಳೆಗೆ ಸಂಕ್ಷಿಪ್ತ ‘ಉತ್ತರವಿಧಿ’ಯನ್ನು ನೆರವೇರಿಸಿದೆವು. ಶ್ರೀನಿವಾಸನು ಜಾಣಾಕ್ಷತೆಯಿಂದ ಚಾಕ್ರಿಯನ್ನು ಚದರಿಸಿದನು.

ನನ್ನ ತಲೆಯಲ್ಲಿ ಬೇರೆ ವಿಚಾರವೇ ಇಲ್ಲ “ಛೀ ಛೀ ಎಂಥಾ ಅಪರಾಧ... ಎಂತಹ ನೀಚತನ” ಇವೇ ವಿಚಾರಗಳ ತಾಕಲಾಟ.

ನಾಲ್ವರೂ ಮುಖ ತೊಳೆದೆವು. ತಂದೆಯವರು ಮಾತ್ರ ಗಂಭೀರತೆಯಿಂದಿದ್ದರು—ಅವ್ವನ ಕಣ್ಣಲ್ಲಿ ಹನಿಗಳು. ನಾಲ್ಕುವರುಷದ ನಂತರ ಇದ್ದ ಒಬ್ಬನೇ ಮಗನ ಮುಖವನ್ನು ನೋಡುವದು ಎಂತಹದೆಂಬುದನ್ನು ನೀವೆ ಚಿತ್ರಿಸಿಕೊಳ್ಳಿ. ನಾಲ್ವರಿಗೂ ಉಪಹಾರಬಂತು—ಉಪಹಾರ ಮುಗಿಯಿತು. ನನ್ನಲ್ಲಿ ಒಂದೇ ವಿಚಾರ “ಮನುಷ್ಯನು ಎಷ್ಟೇ ಸುಸಂಸ್ಕೃತನಾದರೂ ಒಮ್ಮೊಮ್ಮೆ ಜಾರಿ ಅಧಃಪತನದ ಪರಮಾವಧಿಗಿಳಿಯುವನಲ್ಲ! ಹಳ್ಳಿಯ ಪುಂಬರೂ-ಶಹರದ ಗುಂಡಾಗಳೂ ಮಾಡುವ ‘ರೇಪ್’, ‘ಕಿಡ್‌ನ್ಯಾಪ್’ ಕೇಸುಗಳಿಗೂ ಸುಶಿಕ್ಷಿತರೂ ಸಮಾಜದಲ್ಲಿ ಮೇಲ್ತರಗತಿಯವರೆನಿಸಿದವರೂ ಎಸಗುವ ಕೆರೆಯ ಮರೆಯಲ್ಲಿನ ಅಂಧ, ಪಾಶವೀವೃತ್ತಿಯ ‘ಜಾಲುಮೆಯ ಪ್ರೇಮ’ಗಳಿಗೂ ಭೇದವೇನು? ಎರಡಕ್ಕೂ ನೀಚತಾಮವೇ ಕಾರಣವಲ್ಲವೆ?! ಛೀ ನನ್ನ ಸ್ಮರಣ ಶಕ್ತಿಯು ಇಷ್ಟು ತೀಕ್ಷ್ಣವಿರದಾರದಾಗಿತ್ತು. ವಿಚಾರವು ಇಷ್ಟು ತೀವ್ರತೆಗೆ ಮುಟ್ಟದಾರದಾಗಿತ್ತು. ಇವೆರಡೂ ಹಾಳಾಗಿ ಹೋದರೆ ಈ ತಳಮಳದ ತಿಪ್ಪರಲಾಗವು ತಪ್ಪಬಹುದಲ್ಲವೆ......”

ಮಿತ್ರರು ‘ಸಂಜೆಯ ಮುಂದೆ ತಿರುಗಾಡಲು ಹೋಗೋಣ ಊಟ ಮಾಡಿ ವಿಶ್ರಾಂತಿಗೊಳ್ಳು’ ಎಂದು ಹೊರಟರು. ತಂದೆಯವರು ಪ್ರಶ್ನೆಗಳನ್ನು ಕೇಳಲು ಹಾತೊರೆಯುತ್ತಿದ್ದ ಅವ್ವನನ್ನು ಗದರಿಸಿ ವಿಶ್ರಾಂತಿಕೊಂಡಲಿ ಬಿಡು ಎಂದು ಸ್ನಾನಕ್ಕೆ ಹೋದರು. ನನಗೂ ಅಷ್ಟೇ ಬೇಕಾಗಿತ್ತು. ಲೋಡಿಗೆ ಅತುಕುಳಿತು ಕಾಲು ಚಾಚಿಬಿದ್ದುಕೊಂಡೆ.

“ಸುಟ್ಟಿತು ವಿದ್ಯೆಯು—ಅಷ್ಟು ದಿನಗಳವರೆಗಿದ್ದ ಸ್ಥೈರ್ಯ ಸದ್ವರ್ತನೆಗಳು ಒಂದೇ ಒಂದು ತಪ್ಪು ಹೆಜ್ಜೆಯಿಂದ ಅಳಿಸಿಹೋದವು. ಎಂಥ ಭಯಂಕರ ಕ್ಷಣವದು......”

ಬಾಗಿಲ ಬಳಿ ಹೆಣ್ಣುಮಗಳೊಬ್ಬಳು...... ಯಾ...ರು...! ಮುಖದಲ್ಲಿ ಅಸ್ಪಷ್ಟವಾಗಿ ಮೂಡಿದ ವಿಭೂತಿಯ ರೇಖೆಗಳು. ಮಧ್ಯದಲ್ಲಿ ಸುಂದರ ಕುಂಕುಮ ಬಿಂಬ... ಮಂದಸ್ಮಿತ ತುಂಬು ಗೌರಮುಖ... ಬಾಗಿಲ ಚೌಕಟ್ಟಿಗೆ ಆತು ನಿಂತಿದ್ದಾಳೆ. ಕಂಕುಳಲ್ಲಿ ಮಗುವು ಜೊಲ್ಲು ಸುರಿಸುತ್ತ ಚಪ್ಪಳೆ ಇಕ್ಕಿ ಅ... ಆ... ಮಾ... ಮೀ ಎಂದು ರಾಗಮಾಡುತ್ತಿದೆ. ಎಲ್ಲವೂ ನನ್ನನ್ನು ಅಣಕಿಸುತ್ತಿದ್ದವು... ಮೂರ್ಖಾ... ಅಹಾ! ಏನು ನಿನ್ನ ದೇಶಭಕ್ತಿ! ಸಾಹಿತ್ಯ ಪರಿಣತಿ!—ಸೋಗು ಹಾಕಿ ಸಮಾಜದ ಕುತ್ತಿಗೆಗೆ ರೇಶಿಮೆಯಿಂದ ಉರುಲು ಹಾಕುವವರೇ ನೀವೆಲ್ಲಾ!! ಮಹಾ ಸುಧಾರಕರೇ! ಜೇ. ಭಗಳೇ ನೀವು! ನಾಚಿಕೆಯಾಗಲಿಲ್ಲವೇ ನಿನಗೆ ಅಣ್ಣಾ ಎಂದು ಕೈಜೋಡಿಸಿ ಬೇಡುವ ಮುಗ್ಧ ಕನ್ನೆಯ ಮೇಲೆ ಪಶುವಿನಂತೆ ನುಗ್ಗಲು?...... ಅವಳು ನಿಮ್ಮಂತಹರಲ್ಲಿಟ್ಟ ಸ್ನೇಹ ವಿಶ್ವಾಸಕ್ಕೆ ಪ್ರತಿ ವಿಶ್ವಾಸವನ್ನು ಹೀಗೆ ತೋರುವಿರಲ್ಲವೇ? ದೇವರೆ ಸಮಯಕ್ಕೆ ಪೋಲೀಸರನ್ನು ಕಳುಹಿದ... ಅವಳ ಕೌಮಾರ್ಯವು ಇನ್ನೊಂದು ಕ್ಷಣದಲ್ಲಿ... ಚೂರು ಚೂರು... ನಿಮ್ಮಂತಹರನ್ನು ಗುಂಡಿಕ್ಕಿದರೂ......”

‘ಅಣ್ಣಾ’ ಎಂದು ಯಾರೋ ಕೂಗಿದಂತಾಯಿತು. ಥಟ್ಟನೆ ಕಣ್ಣು ತೆರೆದು ಎದ್ದು ಕುಳಿತೆ. ಯಾರವರು? ಎಂದು ಮುಂದಕ್ಕೆ ಮಾಡಿದ ಬಾಗಿಲವನ್ನು ಪೂರ್ಣ ತೆರೆದೆ...... ಅದೇ ರೂಪ. ೪-೫ ನಿಮಿಷಗಳ ಹಿಂದೆ ಕನಸಿನಲ್ಲಿ ಕಂಡ ಕನ್ನೆ.... ಅದೇ ಭಾವ ಅದೇ ಭಂಗಿ... ಅದೇ ಕೂಸು ಮಾತ್ರ ಕನಸಿನ ಇಮ್ಮಡಿ ಸುಂದರವಾಗಿತ್ತು. ಮಗು.

“ಅಣ್ಣಾ ಯಾವಾಗ ಬಂದ್ರಿ? ಅಕ್ಕಿ ಇಲ್ಲೇನ್ರಿ ಮನಿಯೊಳಗ?”

‘ನಾನು ಇಂದು ಮುಂಜಾನೆ ಬನ್ನೆವಾ...... ಪಾರಕ್ಕಾ ನಿನ್ನ ಗುರುತ ಸಿಗಲಿಲ್ಲ ನೋಡವಾ” ಎಂದೆ.

“ನನಗೂ ನಿಮ್ಮ ಗುರುತ ಹತ್ತಲಿಲ್ಲ ನೋಡ್ರಿ ಇಲ್ಲದಿದ್ರೆ ನಿಮ್ಮನ್ನ ಆವಾಗ ಮಾತಾಡಿಸಲಿದ್ದೆನಾ ಯಾರೋ ಅಂತ. ಎದ್ದು ಒಳಗೆ ಹೋದೆ.”

ಇಬ್ಬರೂ ಸುಳ್ಳಾಡಿದ್ದೆವೆಂಬುದನ್ನು ನಮ್ಮ ಮನಸ್ಸು ಅರಿತಿತ್ತು.

“ಹುಡುಗ ಚಂದ ಅಥವಾ ಏನ ಹೆಸರಿಟ್ಟೀರಿ?” ಎಂದೆ

“ಹುಡುಗ ಅಲ್ರೀ ಹುಡುಗಿ. ದಾಕ್ಷಾಯಣೀ ಅಂತ ಅವರೆಲ್ಲಾರೂ ಕರೀತಾರ. ಇಲ್ಲಿ ಮನಿಯೊಳಗ ಮಾತ್ರ ಅವರಮ್ಮನ ಹೆಸರೇ ನೀಲಕ್ಕ ಅಂತ ಕರೀತೇವಿ”

ಇವಳು ನನ್ನ ಮುಂದೆ ನಿಂತಾಕೆಯು—ಒಮ್ಮೆ ನನ್ನ ಕೈಯಲ್ಲಿ ಮೀನದಂತೆ ಚಡಪಡಿಸಿದ್ದಳು. ಆದರೂ ನಿಸ್ಸಂಕೋಚವಾಗಿ ಯಾವ ಅಳುಕೂ ಇಲ್ಲದೆ ಮಾತಾಡುತ್ತಿದ್ದಾಳೆ. ಅವಳಿಂದು ನನ್ನನ್ನು ಬಯ್ಯಬೇಕಾಗಿತ್ತು— ಶಪಿಸಬೇಕಾಗಿತ್ತು— ಥೂ ಎಂದು ಉಗುಳಬಹುದಾಗಿತ್ತು; ನಾನೇನು ಮಾಡಬಲ್ಲೆ— ! ನನ್ನ ಅಪರಾಧವು ಅಕ್ಷಮ್ಯವಾಗಿತ್ತು. ಅವಳ ಸ್ನೇಹಮಯ ಮಾತಿಗೆ ನಾನು ನಿರ್ಲಜ್ಜನಂತೆ ಅವಳೆದುರು ಮುಖವೆತ್ತಿ ಎಲ್ಲ ಮರೆತವನಂತೆ. ಏನೂ ಎಂದೂ ಆಗದಿದ್ದಂತೆ ನಟನೆಮಾಡುತ್ತಿದ್ದೇನೆ. ಒಳಗಿನ ಹೋರಾಟ ದೇವರಿಗೇ ಗೊತ್ತು.

“ಅಕ್ಕೀ ಇಲ್ಲವೇ?”

‘ಅಣ್ಣಾ’ ಎಂದು ಕೂಗಿದೆ. ಉತ್ತರ ಬರಲಿಲ್ಲ. “ಅಟಕಳೆ ಹಿತ್ತಲಕೊಳಗೆ ಹೂವಿಗೆ ಹೋಗಿರಬೇಕು. ಇಲ್ಲು, ಕರಿತೀನಿ” ಎಂದು ಹೊಸ್ತಿಲ ಸಮೀಪಬಂದೆ, ತೀರ ಸಮೀಪದಿಂದ ನೋಡಿದೆ, ಈಗ ಅವಳನ್ನು ಅವಳ ನಿಲವು ಮೊದಲಿಗಿಂತ ಮೋಹಕವಾಗಿದ್ದಿತು. ಮುಖದಲ್ಲಿ ಬಾಲಭಾವವು ಮಾಯವಾಗಿತ್ತು. ಈಗ ಅವಳುಮುತೈದೆಯಲ್ಲವೇ! ಕಂಕುಳಲ್ಲಿ ಹಾಲುಗಲ್ಲದ ಉಂಗುರುಗೂದಲಿನ ‘ಬೇಬಿ.” ನನ್ನ ದಗ್ಧ ಹೃದಯವು ಢವಗುಟ್ಟಿತು. ನನ್ನನ್ನು ನಾನೇ ಮರೆತೆ. ಕೈಗಳೆರಡನ್ನೂ ಜೋಡಿಸಿದೆ. “ಪಾರಕ್ಕಾ ನನ್ನನ್ನು ಕ್ಷಮಿಸು” ಎಂದೆ ನಾಚಿಕೆಯಿಂದ ನಾನು ಅರ್ಧ ಸತ್ತಂತಾಗಿದ್ದೆ.

“ಯಾರು? ಪಾರಕ್ಕಾ?” ಎನ್ನುತ್ತ ಅವ್ವನು ಹೊಟ್ಟೆಯನ್ನು ಹಿಡಿದುಕೊಂಡು ಮುಂದಾಗಿಲಿನಿಂದ ಬಂದಳು. ನಾನು ಒಳಗೆ ಸರಿದೆ. ಪಾರ್ವತಿಯ ಕಣ್ಣು ತುಂಬಲವಾಗಿದ್ದಂತೆ ತೋರಿತು.

‘ಸಿರಸಣ್ಣ ಭೆಟ್ಟಿ ಆದ ಇಲ್ಲವಾ ಪಾರಕ್ಕಾ?”

“ಹೂ ಅಕ್ಕೀ. ಅವರ ಗೂಡ ಮಾತಾಡುತ ನಿಂತಿದ್ದೆ ನೋಡಿ; ದಾಕ್ಷಾಯಣೀ ಹೆಸರು ಹೇಳತ ನಿಂತಿದ್ದೆ’ ಎಂದಳು ಪಾರ್ವತಿ ಮತ್ತೆ ಮೊದಲಿನಂತೆ ಮುಖವು ಅರಳಿದ್ದಿತು.

“ಕೈಯೊಳಗೆ ಏನ ಅದು ಕಾಟನೊಳಗ?” ಅವ್ವ ಕೇಳಿದಳು. “ಸಿರಸಣ್ಣ ಬಂದಾನಂತ ಅವ್ವ ಏನೇನೋ ಕೊಟ್ಟ ಕಳಿಸ್ಯಾಳ ನೋಡವಾ ಏನೇನದಾವೋ ನೀನನೋಡು” ಎಂದು ನಗುತ್ತ ‘ಬಾ” ಎಂದು ಅವ್ವನ ಕೂಡ ಒಳಗೆ ನಡೆದಳು.

೦—೦—೦—೦—೦

ನಾಲ್ಕು ವರುಷದ ಹಿಂದಿನ ಸಂಗತಿ. ನಾನು ಇಂಟರಿನಲ್ಲಿದ್ದೆ. ಅಗಸ್ಟ ಚಳವಳಿಯು ಉಗ್ರವಾಗುತ್ತ ನಡೆದಿದ್ದಿತು. ಪ್ರಿನ್ಸಿಪಾಲರು ನನ್ನನ್ನು ಕರೆದು “ನೀನು ನಮ್ಮ ಕಾಲೇಜಿನಲ್ಲಿ ಒಣಗೊಂದಲ ಹಾಕಿ ನಮಗೆ ತೊಂದರೆ ಕೊಡುವದಕ್ಕಿಂತ ಕಾಲೇಜು ಬಿಟ್ಟು ಊರಿಗೆ ಹೋಗಿ ಹಾಳು ಭಾವಿ ಬಿದ್ದುಕೋ” ಎಂದು ಅಪ್ಪಣೆ ಕೊಡಿಸಿದ್ದರು. ಪ್ರಿನ್ಸಿಪಾಲರ ಮಾತು ಒಪ್ಪಿಗೆಯಾಗಿ ಊರಿಗೆ ಬಂದು ಸಂಘಟಿಸಿ ವಿಧಾಯಕ ಕಾರ್ಯವನ್ನು ಆರಂಭಿಸಿದ್ದೆ. ಪಾರ್ವತಿಯು ನಮ್ಮ ಮನೆಯ ಮುಂದೇ ಇರುವ ಓರ್ವ ಮಾಸ್ತರರ ಮಗಳು. ತುಂಬು ಜವ್ವನೆ, ೭ನೇ ಇಯತ್ತೆಯ ಪರೀಕ್ಷೆಗೆ ಆ ಸಲ ಕೂಡುವವಳು. ಮಾಸ್ತರರ ಮನೆಯವರಿಗೂ ನಮಗೂ ಬಹಳ ನಿಕಟಬಾಂಧವ್ಯ ಬೆಳೆದು ಬಂದಿತ್ತು. ಪಾರ್ವತಿಯು ನಿಸ್ಸಂಕೋಚವಾಗಿ ನಮ್ಮಲ್ಲಿ ಬಂದುಹೋಗುತ್ತಿದ್ದಳು. ತಂದೆಯವರಿಗೆ ಸಮೀಪದ ಹಳ್ಳಿಗೆ ವರ್ಗವಾಗಿದ್ದರಿಂದ ಪಾರ್ವತಿಯು ಯಾವಾಗಲಾದರೂ ಪಾಠ ಹೇಳಿಸಿಕೊಳ್ಳಲು ಬರುತ್ತಿದ್ದಳು.

೧೯೪೩ ನೇ ಎಪ್ರಿಲ್ ೬ ನೇ ತಾರೀಕು—ನಾನು ಊರನ್ನು ಬಿಟ್ಟದಿನ ಅಂತೇ ಇನ್ನೊಂದು ನೆನಪಿದೆ—ರಾಮದುರ್ಗದಲ್ಲಿ ಓರ್ವ ಮಹಾಶಯನಲ್ಲಿ ಒಂದೆರಡು ‘ರಾಯಫಲ್’ ಮತ್ತು ಒಂದು ಅಮೇರಿಕನ್ ಪಿಸ್ತೂಲ್ ಇದ್ದ ಸಂಗತಿ ತಿಳಿದಿತ್ತು.

ನಾವು ಇಂಥ ದಿವಸ ಬರುವೆವು ತಯಾರಿರಬೇಕು. ಎಂದು ಅಲ್ಲಿಯ ಕಾರ್ಯಕರ್ತರಿಗೆ ಪತ್ರ ಬರೆಯುತ್ತಿದ್ದೆ. ಕೋಣೆಯ ಬಾಗಿಲಿಗೆ ಒಳಗಿನಿಂದ ಚಿಲಕವಿತ್ತು.

“ಅಣ್ಣಾ ಬಾಗಿಲ ತಗಿರಿ ಸ್ವಲ್ಪ” ಪಾರ್ವತಿಯ ಧ್ವನಿ. “ಪಾರಕ್ಕಾ, ಅವ್ವ ಇದೇ ಈಗ ಗುಡಿಗೆ ಎಡೆ ತಕ್ಕೊಂಡ ಹೋದಳ ನೋಡು” ಎಂದು ಕೆಲಸ ನಿಲ್ಲಿಸುವ ಮನಸ್ಸಿಲ್ಲದೆ ಒಳಗಿನಿಂದಲೇ ಹೇಳಿದೆ.

“ಇಲ್ಲ...... ಅಣ್ಣಾ ಈ ಕವಿತಾ ಅರ್ಥ ಅಷ್ಟು ಹೇಳಬೇಕರಿ......”

“ಪಾರಕ್ಕಾ ನನಗ ಬಹಳ ಕೆಲಸ ಅದ...... ನಾನೂ ಈಗ ಬರ್ತೇನ್ನಡಿ...... ಯಾಕೋ ಇಂದ ಸೂಟ ಅದಲಾ! ಅಪ್ಪ ಇಲ್ಲೇನು?” ಉತ್ತರವೇ ಬರಲಿಲ್ಲ, ಪಾರ್ವತಿ ಮೌನಿದಿದ್ದಳು. ಬಹಳ ಮಹತ್ವದ ಕೆಲಸವಿದ್ದುದರಿಂದ ಹೋಗಲಿ ಎಂದು ಮತ್ತೆ ಬರೆಯಲಾರಂಭಿಸಿದೆ.

“ಕರ ತಳ ಮೊಂದ ರೊಳ್ ಮಣಿ ಕಮಂಡಲು ನಾಳ ಸಮೇತ ಮತ್ತ ಕೇಸರ ಫಲದಂತಿರ್ದುದು......” ತರಂಗ ತರಂಗವಾಗಿ ಪಾರ್ವತಿಯ ಇನಿದನಿಯು ಕಿವಿಯಲ್ಲಿ ಮೊಳಗಲಾರಂಭಿಸಿತು.

ಪಾರ್ವತಿಯ ಕವಿತೆಗೆ ನಾನು ಮರುಳನಾಗಿದ್ದೆ. ಅವಳಿಗೆ ಅದು ಗೊತ್ತು. ಅಂತೇ ರಾಮಬಾಣ ಪ್ರಯೋಗಿಸಿದ್ದಳು. ಪತ್ರವನ್ನು ಮುಚ್ಚಿಟ್ಟು ಬಾಗಿಲು ತೆಗೆದೆ. ಪಾರ್ವತಿ ಹೊರಟಿದ್ದಳು.

“ಪಾರಕ್ಕಾ ಬಾ ಇಲ್ಲಿ? ಯಾವ ಕೌತಾ “ನೋಡೋಣ?” ಎಂದೆ. ಪಾರ್ವತಿ ಹುಸಿ ಮುನಿಸಿನಿಂದ ಬಾಗಿಲು ದಾಟಿದ್ದಳು “ನಿಮಗ ಬ... ಹಾ... ಳ... ಕೆಲಸ ಅದ ಮಾಡ್ರಿ” ಎನ್ನುತ್ತ ನಡೆದಿದ್ದಳು. ಏ—ಪಾರಕ್ಕಾ—ಬಾ. ಇಲ್ಲಿ. ತಪ್ಪಾ ತು. ದಾರವಾ... ಗಲ್ಲಾ ಗಲ್ಲಾ ಬಡಕೊಳ್ಳಾ? ನೋಡು...ದ...” ಎಂದೆ “ಹಾಂ ಹಾಂಗಾದ್ರ ಬರತೇನ್ರಿ” ಎಂದು ತಿರುಗಿದಳವಳು. ಮನುಷ್ಯನ ಜೀವನದಲ್ಲಿ ಕೆಲ ನಿಮಿಷಗಳು ಅತಿ ಭಯಂಕರವಿರುತ್ತವೆಂಬುದು ಅಂದೇ ನನಗೆ ಮನವರಿಕೆಯಾದದ್ದು. ಅವಳು ಹೋಗುವಾಗಲೂ ಅವಳನ್ನು ನಿಟ್ಟಿಸಿದ್ದೆ. ಬರುವಾಗಲೂ ನಿಟ್ಟಿಸುತ್ತಿದ್ದೆ. My god! ಅಂದಿನ ಆ ಮನೋಭಾವನೆಯು ನನ್ನಲ್ಲೆಂದಿಗೂ ಪಾರ್ವತಿಯನ್ನು ನೋಡಿದಾಗ ಹಾಯ್ದಿರಲಿಲ್ಲ. ಅವಳಲ್ಲಿಯೋ ಅಥವಾ ನನ್ನ ಕಣ್ಣುಗಳಲ್ಲಿಯೋ ಅಂದು ಒಂದು ಮೋಹಕತೆ, ಆಕರ್ಷಣವಿತ್ತು. ಅವಳ ಸಮೀಪ, ಅತಿಸಮೀಪ—ಅಂತರವೆಳ್ಳಷ್ಟೂ ಇರದಂತೆ ಕೂಡಿಸಿಕೊಳ್ಳಲು ಮನಸ್ಸು ಹಾತೊರೆಯುತ್ತಿತ್ತು. ಹೋಗುವಾಗ ಬರುವಾಗ ಸಹಜವಾಗಿ ನಿಟ್ಟಿಸಿದ ಕಟಿ, ಜಘನಗಳು, ಮೈ, ಕೈ, ಗಲ್ಲ, ಎದೆ ಸೀರೆಯ ನಿರಿಗೆಗಳು ನನ್ನನ್ನು ಬಹಳ ದೂರ ಒಯ್ದಿದ್ದವು. ಮನಸ್ಸು ಯಾವದೋ ಮಾರ್ಗದಲ್ಲಿ ಹುಚ್ಚೆದ್ದು ಹೊರಟಿತ್ತು, ಕುಣಿಕಪ್ಪಿತ್ತು. ಅವಳುಬಂದೊಡನೆ ಕವಿತೆಯನ್ನು ಅದ ಕರಾರಿನಿಂದ ಅರ್ಥ ಹೇಳಬೇಕೆಂದೂ ನೆನಸಿದ್ದೆ. ಆದರೆ ಅವೆಲ್ಲವೂ ಈಗ ಮರೆತಿತ್ತು. ಪಾರ್ವತಿಯು ನನ್ನ ಬೆನ್ನ ಹಿಂದೇ ಬಂದ ಎದುರು ಕುಳಿತಳು. ಅವರಲ್ಲಿ ಯಾವ ಅಸ್ವಾಭಾವಿಕತೆಯಾಗಲಿ, ನಾವೀನ್ಯತೆಯಾಗಲಿ, ಇರಲಿಲ್ಲ. ಏಕೆಂದರೆ ಇದೇ ತೆರನಾಗಿ ಪಾರ್ವತಿ ಎಷ್ಟೋ ಸಲ ಅಲ್ಲಿ ಬಂದು ಕುಳಿತದ್ದುಂಟು.

ಆದರೆ ನನ್ನಲ್ಲಿ ಇಂದು ಅನಿರೀಕ್ಷಿತ ಗುದ್ದಾಟ. ಅದನ್ನು ಸ್ತ್ರೀಮಿತಕ್ಕೆ ತರಲು ಒದ್ದಾಟ, ನನ್ನಲ್ಲಿಯ ಮಾರ್ಪಾಟನ್ನು ಪಾರ್ವತಿ ಅರಿಯಳು.

ಏಳನೇ ಪುಸ್ತಕದ ಪಾನುಗಳನ್ನು ತೆಗೆದು “ಇದ... ನೋಡ್ರಿ ಇಲ್ಲಿ ತನಕ ಆಗ್ಯದ... ಈ ಮುಂದಿನ ಪದ್ಯ ಹೇಳ್ರಿ.” ಪುಸ್ತಕ ಕೈಯಲ್ಲಿ ತೆಗೆದುಕೊಂಡೆ, ನಾಗಚಂದ್ರನ ಕರ್ನಾಟಕ ಕಾದಂಬರಿಯಲ್ಲಿನ ಮಹಾಶ್ವೇತೆಯ ವೃತ್ತಾಂತವದು.

‘ನವಯೌವನದೊಳ್ ಗುಣದೋಷವಿಚಾರ ಮುಖನಿತು ಮಾಡಲೀಯದ ಭಾವೋದ್ರೇಕದಿಂ ಪರವಶೆಯಾದೆಮಂ ನವಕುಸುಮಾಸವದೆ ಸೊಕ್ಕಿದಳಿಯ ತೆರದಿಂ”

ಪುಸ್ತಕದಲ್ಲಿ ತಲೆಹಾಕಿ ಎಷ್ಟಿತ್ತು ಕುಳಿತೆನೆಂಬುದು. ನನಗರಿವಿರಲಿಲ್ಲ. ಕಡಿವಾಣ ಹರಿದುಕೊಂಡ ಕುದುರೆಯಂತೆ ಮನಸ್ಸು ಕೊತ್ತಳದು ಕೆಯಲಾರಂಭಿಸಿತ್ತು. ಅರಿಸಿ ಹಾಕಿದ ಪದ್ಯಗಳಲ್ಲಿ ಈ ಪದ್ಯವು ಕಡೆಯದಾಗಿತ್ತು. ಅದರ ಮುಂದಿನ ಪದ್ಯವೊಂದು ನನ್ನ ತಲೆಯಲ್ಲಿ ಕುಣಿಯಲಾರಂಭಿಸಿತ್ತು.

“ಪಲಬರ್ ಕಾಂತೆಯರೊಲ್ದು ಪೋದರೊಳರೆಂತುಂ ಕಾಂತರೊಳ್ ಬೇಟವಗ್ಗಳಿಸಲ್ ಕಾಣದೆ ಲಜ್ಜೆಗೆಟ್ಟರೊಳರೆಂತೀ...” ಮುಂತಾಗಿ.

ಪಾರ್ವತಿಯು ಫೌಂಟನ್‌ಪೆನ್ನಿನಿಂದ ಏನೋ ಗೀಚುತ್ತಿದ್ದಳು. ಮುಖದಲ್ಲಿ ಬೇರೆ ಯಾವ ಹೊಸ ಭಾವನೆ ಇಲ್ಲ—ಅದೇ ವಿದ್ಯಾರ್ಥಿಯ ಮುಗ್ಧ ಭಾವ—ಮುಗ್ಧತೆ.. ಅವಳ ಬೆಡಗು ನನ್ನ ಕಣ್ಣುಗಳಲ್ಲಿ ಬಲಿಯುತ್ತಿದ್ದಿತು. ಮನಸ್ಸು ಕಲ್ಲಾಗಿಗೊಳ್ಳಲಾರಂಭಿಸಿತ್ತು. ಹಣೆಯಲ್ಲಿ ಬೆವರು ಬಂದಂತೆ ಭಾಸವಾಯಿತು.

ಪಾರ್ವತಿಯು ಇದೇ ಪದ್ಯವನ್ನೇ ತಂದದ್ದೇಕೆ? ಇಷ್ಟು ಒಪ್ಪು ವೈಯಾರವೇಕೆ? ಶಾಂತ ಮನಸ್ಸಿನಿಂದ ವಿಚಾರಿಸಿದ್ದರೆ ಈ ಯಾವ ಶಂಕೆಗಳಿಗೂ ಆಧಾರವೇ ಇರಲಿಲ್ಲ. ಆದರೆ ನಾನು ಹಲ್ಲಿಯನ್ನು ನುಂಗಿರಬಹುದೇ? ಎಂಬ ಸಂಶಯಕ್ಕೊಳಗಾದ ಒಕ್ಕಲಿಗನಂತಾಗಿದ್ದೆ. ನಾನು ಅಮಲಿನಲ್ಲಿದ್ದುದರಿಂದ ಸಂಶಯವು ಬಲಿಯಿತು. ಬಲಿತು “ನಿಸ್ಸಂದೇಹ” ವಾಯಿತು.

ಮರುಕ್ಷಣವೇ ಬಾಗಿಲು ಬಂದಾಯಿತು. ಪಾರ್ವತಿ ನನ್ನ ಬಾಹುಗಳಲ್ಲಿ ಬಿಗಿಯಾಗಿದ್ದಳು. “ಪಾರೂ...... ಪಾರೂ......” ಎಂದು ಪಶುವಿನಂತೆ ಪಿಸುಗುಟುತ್ತಿದ್ದುದು ಈಗ ನನ್ನ ಸ್ಮರಣೆಗೆ ಬಂದರೆ ನನ್ನಲ್ಲಿ ನನಗೇ ಅತೀವ ಜುಗುಪ್ಸೆಯುಂಟಾಗುತ್ತದೆ. ಪಾರ್ವತಿಯು ಮೀನಿನಂತೆ ಒದ್ದಾಡುತ್ತಿದ್ದಳು. ಮುಖವು ಬೆದರಿತ್ತು.


“ಅಣ್ಣಾ......” ನನ್ನ ಪ್ರಜ್ಞೆಯು ತೀರಾ ಕೈತಪ್ಪಿತ್ತು. ನಾನು ಅಡ್ಡಹಾದಿಯಿಂದ ದೂರ ಹೋಗಿ ಕೊಳ್ಳಕ್ಕೆ ಕೆಯಲು ಹವಣಿಸುತ್ತಿದ್ದೆ. ಪಾರ್ವತಿಯು ಬಲವಾಗಿ ನನ್ನ ಗಪ್ಪಕ್ಕೆ ಕೈ ಹಚ್ಚಿ ಮೇಲೆ ನೂಗಿಸುತ್ತಿದ್ದಾಳೆ.

“ಏ ಶ್ರೀಶೈಲಾ...... ಶ್ರೀಶೈಲಾ...... ಬಾಗಿಲಾ ತಗಿಯೋ...... ಏ ಸತ್ತಿಯೋ ಮಲಗಿಯೋ...... ಫೂಲ್...... ಪೋಲೀಸರು ಬಂದಾರ... ಲಗೂ ಬಾಗಲಾ ತಗಿ......”

ಎಲ್ಲವೂ ತಣ್ಣಗಾಗಿತ್ತು.

ಪಾರ್ವತಿ ನಡುಕಿ ತಪ್ಪಿಸಿ ಬಾಗಿಲು ತೆರೆದಳು. ಶಿವಜಾತನು ಒಳಗೆ ಬಂದ. ನಮ್ಮ ಅವಸ್ಥೆ ಕಂಡ; ಮರುಕ್ಷಣವೇ ತತ್ತರಿಸಿದಂತಾದನು “ಹೊ

(೧೬ ನೇ ಪುಟ ನೋಡಿರಿ)



ಜ್ಯೋತಿಷಿ—ಕೃಷ್ಣಶಾಸ್ತ್ರಿ ಘಳಿ, ಭವಿಷ್ಯಕಥನ ಕಾರ್ಯಾಲಯ, ಖಡೇಬಜಾರ ಬೆಳಗಾವಿ

ಜೂನ ೯ ರಿಂದ ೧೫ ರ ವರೆಗೆ

ಮೇಷ

[illegible] ತಾ. ೯, ೧೦, ೧೧, ೧೫ ಅನುಕೂಲ.

ವೃಷಭ

[illegible] ತಾ. ೯, ೧೦, ೧೧ ಅನುಕೂಲ.

ಮಿಥುನ

[illegible] ತಾ. ೧೧, ೧೩, ೧೫ ಅನುಕೂಲ.

ಕರ್ಕ

[illegible] ತಾ. ೯, ೧೪, ೧೫ ಅನುಕೂಲ.

ಸಿಂಹ

[illegible] ತಾ. ೧೦, ೧೧, ೧೫ ಅನುಕೂಲ.

ಕನ್ಯಾ

[illegible]

ತುಲಾ

ಪ್ರಕೃತಿ ಸಾಧಾರಣವೆ. ಸ್ತ್ರೀ ಸಹ ಪ್ರತಿಯೊಬ್ಬರ ಗೂಡ ಮೇಲಿಂದ ಮೇಲೆ ತಿಕ್ಕಾಟವೇಳುವ ಪ್ರಸಂಗ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಬಹಳ ಉತ್ತಮ. ಆದರೆ ಆ ಮಾನದಿಂದ ಲಾಭ ಕಡಿಮೆ [illegible] ಲಾಭದ ಯೋಗ. ವಿಶೇಷ ಪ್ರಬಲ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆ ಪ್ರವಾಸಾದಿ ಕೆಲಸ ಹಿತವು. [illegible] ತೊಂದರೆ ಕಡಿಮೆ ತಾ. ೧೦, ೧೧, ೧೫ ಅನುಕೂಲ.

ವೃಶ್ಚಿಕ

ಪ್ರಕೃತಿ ನಿರೋಗಿಯಾಗಿದ್ದರೂ ಅದು ಕೆಟ್ಟದೆಂಬವಾಗಿ ತಪ್ಪು ತಿಳುವಳಿಕೆ. ಎಲ್ಲ ವಿಷಯಗಳಲ್ಲಿ [illegible] ಸುಖ ಸಾಧಾರಣವೆ, ಆದರೆ ಸ್ತ್ರೀ ಸುಖ ಉತ್ತಮ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಉತ್ತಮ. ಆದರೆ ಪ್ರತಿಷ್ಠೆ ಸ್ವಲ್ಪ ಕಡಿಮೆಯಾಗುವದು [illegible] ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಯಶಸ್ಸು ಆದರೆ ವೆಚ್ಚ ಮತ್ತು ತೊಂದರೆಯೂ ಅದೇ ಪ್ರಮಾಣದಲ್ಲಿ ಪ್ರವಾಸಾದಿ ಕೆಲಸ ಮುಖ್ಯವು. [illegible] ತೊಂದರೆ ಕಡಿಮೆ ತಾ. ೯, ೧೩, ೧೪ ಅನುಕೂಲ.

ಧನು

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಉತ್ತಮ. [illegible] ತಾ. ೯, ೧೨, ೧೧, ೧೫ ಅನುಕೂಲ.

ಮಕರ

[illegible] ತಾ. ೧೧, ೧೨, ೧೩ ಅನುಕೂಲ.

ಕುಂಭ

[illegible] ತಾ. ೧೨, ೧೪, ೧೫ ಅನುಕೂಲ.

ಮೀನ

[illegible] ತಾ. ೯, ೧೪, ೧೫ ಅನುಕೂಲ.

[illegible]

[illegible]

ಸಾಮ್ರಾಜ್ಯಹೀನ ಬ್ರಿಟನ್ನು ದುರ್ಬಲವಾಗಲಾರದು

(೧ ನೇ ಪುಟದಿಂದ ಮುಂದುವರಿದುದು)

ಭಾರತ ಮತ್ತು ಬ್ರಹ್ಮದೇಶ

ಅಟ್ಲಿ ಮತ್ತು ಅವರ ಸಹೋದ್ಯೋಗಿಗಳು ಭಾರತ ಮತ್ತು ಬ್ರಹ್ಮದೇಶಗಳ ವಿಷಯದಲ್ಲಿ ನಿಜವಾದ ಸಾಮ್ರಾಜ್ಯವಾದಿಗಳಂತೆ ನಡೆದುಕೊಂಡಿದ್ದಾರೆ ಅವರು ತೆಗೆದುಕೊಂಡ ಮಾರ್ಗದಿಂದ ಹಿಂದುಸ್ಥಾನದಲ್ಲಿ ಅಂತಃಕಲಹ ಪ್ರಾರಂಭವಾದೀತೆಂಬುದೇನೋ ನಿಜವಾದ ಸಂಗತಿ; ಆದರೆ ಮುಸ್ಲಿಂ ಲೀಗಿನ ಜಿನ್ನಾ ಮತ್ತು ಅವರ ಅನುಯಾಯಿಗಳು ತಮ್ಮ ಹಟಮಾರಿತನದಿಂದ ಭಾರತದ ಮೇಲೆ ಬ್ರಿಟಿಶರ ಅಧಿಕಾರವಿರುವಂತೆ ಮಾಡಲು ಇಂದಿನ ಬ್ರಿಟಿಶ ಸರಕಾರವನ್ನು ಯಾವ ಕಾರಣದಿಂದಲೂ ಒತ್ತಾಯ ಪಡಿಸಲಾರರು. ಇಂದು ಭಾರತವು ಬ್ರಿಟಿಶರ ಅಧಿಕಾರವನ್ನು ಎಷ್ಟರ ವರೆಗೆ ಸಹಿಸಬಲ್ಲದೆಂದರೆ ಅದನ್ನು ಬಲಾತ್ಕಾರದಿಂದ ಮಾತ್ರ ಭಾರತೀಯರ ಮೇಲೆ ಹೇರಲು ಸಾಧ್ಯ; ಮತ್ತಾವರೀತಿಯಿಂದಲೂ ಸಾಧ್ಯವಿಲ್ಲ. ಅಮೇರಿಕೆಯ ಮತ್ತು ಐರ್ಲಂಡಿನ ಕ್ರಾಂತಿಗಳಿಂದ ಚರ್ಚಿಲ್ಲರು ಯಾವ ಪಾಠವನ್ನೂ ಕಲಿತಿಲ್ಲ ಪರಕೀಯವಾದ ಬ್ರಿಟನ್ನಿನ ಅಧಿಕಾರವನ್ನು [illegible] ಭಾರತ ಮತ್ತು ಬ್ರಹ್ಮದೇಶಗಳಲ್ಲಿ ಹೇರಗೊಡುವದರಲ್ಲಿ ಯಾವ ಸಾಮ್ರಾಜ್ಯವಾದಿಸರಕಾರವೂ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳಲಾರದು. ಯುದ್ಧಾದಿಕ್ರಾಂತಿ ಮಾರ್ಗಗಳಿಂದ ಪಡೆದ ಬಳಿಕ ಇದುವುದಕ್ಕಿಂತ ಸಮ್ಮತಿಯ ಮೇರೆಗೆ ಶಾಂತಿ ಮಾರ್ಗದಿಂದ ಸ್ವಾತಂತ್ರ್ಯವನ್ನು ಪಡೆದ ಈ ದೇಶಗಳು ನಮ್ಮೊಡನೆ ಹೆಚ್ಚು ಸ್ನೇಹಸೌಹಾರ್ದದಿಂದ ನಡೆದುಕೊಳ್ಳುವವು. ಬ್ರಿಟನ್ನಿನ ಔದಾರ್ಯಕ್ಕೆ ದಕ್ಷಿಣ ಆಫ್ರಿಕದಲ್ಲಿ ಸರಿಯಾದ ಪ್ರತಿಫಲ ದೊರೆಯಿತು. ಕೊಟ್ಟ ಮಾತನ್ನು ತಪ್ಪದೆ ನಡೆಸಿಕೊಟ್ಟದ್ದಕ್ಕೆ ಬ್ರಿಟನ್ನಿನ ಯುದ್ಧದಲ್ಲಿ ಅಮೇರಿಕೆಗೂ ಕಡಿಮೆ ಲಾಭವಾಗಲಿಲ್ಲ. ಸ್ವಾತಂತ್ರ್ಯ ದೊರೆತ ಬಳಿಕ ಭಾರತ ಮತ್ತು ಬ್ರಹ್ಮದೇಶಗಳು ಸಂಯುಕ್ತ ರಾಷ್ಟ್ರಸಂಘದ ಪದ್ಧತಿಯೊಳಗೆ ಪರಸ್ಪರ ಸಹಾಯಕ ಒಪ್ಪಂದವನ್ನು ಮಾಡಿಕೊಂಡು ತಮ್ಮ ಹೊಸ ಸ್ಥಾನವನ್ನು ಕಾಪಾಡಿಕೊಳ್ಳುವವೆಂದು ನಂಬುತ್ತೇನೆ. ಹಿಂದುಸ್ಥಾನ ಬ್ರಹ್ಮದೇಶಗಳನ್ನು ಬಿಡಲು ಬ್ರಿಟನ್ನು ನಿಶ್ಚಯಿಸಿದುದರಿಂದ ನಮ್ಮಲ್ಲಿ ಸೌಹಾರ್ದ ನೆಲೆಸಿದ್ದಂತಾಯಿತು! ಬ್ರಿಟನ್ನಿಗೆ ಬೇಕಾಗಿರುವ ಈ ಕಾಲದಲ್ಲಿ ಅಲ್ಲಿಯ ಜನಬಲ ಅಲ್ಲಿಯೇ ಉಳಿದಂತಾಯಿತು: ಮತ್ತು ರಾಬರ್ಟ್ ಕ್ಲೈವನ ಕಾಲದಿಂದ ನಡೆದು ಬಂದ ಹೆಚ್ಚು ವೆಚ್ಚದಿಂದ ನಮ್ಮಲ್ಲಿಯ ಕೆಲವೇ ಜನ ತಮ್ಮ ಐಶ್ವರ್ಯವನ್ನು ಬೆಳೆಸುವ ಲಾಭವಿಲ್ಲದ ಆಡಳಿತದಿಂದ ಮುಕ್ತವಾಗಿ ಸರ್ವಹಿತವಾಗುವ ಸನ್ಮಾರ್ಗವನ್ನು ಅವಲಂಬಿಸಿದಂತಾಯಿತು. ಆದುದರಿಂದ ಈ ಹೆಜ್ಜೆಯು ಬ್ರಿಟನ್ನನ್ನು ಬಲಶಾಲಿಯಾಗಿ ಮಾಡುವುದಲ್ಲದೆ ದುರ್ಬಲಗೊಳಿಸಲಾರದೆಂದು ಖಂಡಿತವಾಗಿ ಹೇಳಬಲ್ಲೆ. ಭಾರತದಲ್ಲಿ ಉದ್ಯೋಗೀಕರಣ ಹೆಚ್ಚಾಗುವುದರಿಂದ ನಮಗೆ ಅದೊಂದು ಹೊಸಪೇಟೆಯಾಗಬಲ್ಲುದು; ಅಲ್ಲದೆ ಆತ್ಮರಕ್ಷಣೆಗೆ ಅದು ಸಮರ್ಥವಾಗುವುದರಿಂದ ನಾವು ಸೈನ್ಯಕ್ಕಾಗಿ ಮಾಡಬೇಕಾಗಿರುವ ಖರ್ಚು ಕಡಿಮೆಯಾಗುವದು. ಎಲ್ಲದಕ್ಕಿಂತ ಹೆಚ್ಚಾಗಿ ದೂರ ಪೂರ್ವದಲ್ಲಿ ಎಲ್ಲರ ಪ್ರೀತಿಗೂ ನಾವು ಪಾತ್ರರಾಗುತ್ತೇವೆ.

ಉತ್ತರ ಕನ್ನಡದ ಕೆಲವು ಸಮಸ್ಯೆಗಳು

(೨ ನೇ ಪುಟದಿಂದ ಮುಂದುವರಿದುದು)

ಯ ಮೂಲೆಗೆ ಸೇರಿಸಲಾಯಿತು. ಇತ್ತೀಚೆಗೆ ಮಾತ್ರ ಮತ್ತೆ ಉತ್ತರ ಕನ್ನಡದಲ್ಲಿ ರೈಲು ತರುವದನ್ನು ಕುರಿತು ಸಂಶೋಧನೆಗೆ ಪ್ರಾರಂಭವಾಯಿತು. ಒಂದು ರೇಲ್ವೆ ಕಂಪನಿಯವರು ಕೆಲಸ ಕೈಕೊಳ್ಳಬಹುದಾದರೂ ಸುದ್ದಿ ವೃತ್ತಪತ್ರಿಕೆಗಳಲ್ಲಿ ಪ್ರಕಟವಾಯಿತು. ಇನ್ನು ಕೆಲವು ದಿನಗಳಲ್ಲಿ ಆ ಸುದಿನಗಳನ್ನು ಕಂಡೇವೆಂದು ಹಾರೈಸುತ್ತಿದ್ದಾಗ ಕಾರವಾರ ಅಳನಾವರ ರಸ್ತೆಯು, ಕಾರವಾರ-ಹುಬ್ಬಳ್ಳಿ ರಸ್ತೆಯು ಎಂಬ ವಾದಗ್ರಸ್ತ ವಿಚಾರವನ್ನು ಸರಕಾರದ ಮುಂದಿಟ್ಟು ಯಾವ ದಾರಿಯೂ ಒಂದು ದಾರಿಯಿಂದ ಜೀವನಕ್ಕೆ ಬರುವದಾದುದನ್ನು ತಪ್ಪಿಸಿ ಕಾಲಹರಣದಲ್ಲಿ ಕೆಲ ಹಿರಿಯರು ಮಾರ್ಗಮಾಡಿಕೊಟ್ಟಿದ್ದಾರೆ.

ಇಲ್ಲಿ ಉತ್ತರ ಕನ್ನಡ ಜಿಲ್ಲೆಯ ಕೆಲವೇ ಸಮಸ್ಯೆಗಳನ್ನು ಬರೆದಿರುವೆ. ಎಡಬಿಡದೆ ಯತ್ನಿಸಿದ್ದೇನೆ. ಸಾಧ್ಯವಾದರೆ ಉಳಿದ ಇನ್ನೂ ನೂರಾರು ವಿಚಾರಗಳನ್ನು ಬರೆಯಬೇಕೆಂದಿದೆ; ಆದರೆ ಒಂದು ಮಾತು ಮಾತ್ರ ನಿಜ: ಏಕೀಕೃತ ಕರ್ನಾಟಕದ ಸರ್ವತೋಮುಖ ಏಳ್ಗೆಗೆ ಉತ್ತರಕನ್ನಡದ ಅಭಿವೃದ್ಧಿ ಯಾದ ಹೊರತು ಗತ್ಯಂತರವಿಲ್ಲ. ಅದನ್ನು ಹೀಗೆಯೇ ಕೊಳೆ ಸುಗೊಟ್ಟರೆ ಬೇಕಂದೇ ಕರ್ನಾಟಕವು ತನ್ನ ಹಾನಿಯನ್ನು ಮಾಡಿಕೊಂಡಂತಾಗುವದು.

ಈ ವಾರದ ಕತೆ

"ಕಾಲು ಜಾರಿದ ಕ್ಷಣವೊಂದು"

(೧೫ ನೇ ಪುಟದಿಂದ ಮುಂದುವರಿದುದು)

ಪಾರಕ್ಕಾ ನೀವಿನಮೂಡಕ್ಟ್ರೀ ಇಲ್ಲಿ? ಪೋಲೀಸರು ನಿನ್ನೆ ಹಿಡಿಯೂರಿಗ್ಲಿ ಇಷ್ಟ್ ಹೆದರೀರಿ...... ಐ ಫೀಲ್ ಸೀ ಇನ್ನು ಜಾಗಾ ಬಿಡು. ಹೊಯ್ ಕೊಂಡರ್ ಹಾಂಗ ಕುಂತಾನ... ರುಮಾಲ್ ಸುತ್ತು; ಜಾಕೀಟ ಬ್ಯಾಡಾ. ಹಿಂದಿದ್ದೀ ಹಂಗ ಹಿತ್ತಲದಿಂದ ಹೊರಬೀಳು.. ಹೂ ಏಳು......"

ನಾನು ದಿಕ್ಕುಗಾಣದಾಗಿದ್ದೆ. ಪೋಲೀಸರಿಗಲ್ಲ "ಪಾರಕ್ಕನಿಗೆ, ಇದರ ಅರ್ಥ ಬೇಕಿತ್ತು ಇದೆ ಮತ್ತು ಬುಲೆಟಿನ್ನ ಎಲ್ಲಾ ಇಲ್ಲೇ ಅದ ಅಂತ ಕದ ಹಾಕಿದ್ದೆ."

"ಸುಟ್ಟುಕೋ ನಿನ್ನ ಕವಿತಾ ಏಳು ಮೊದಲು... ಹಾಂ ಬುಲೆಟಿನ್ ಅಂದಿಅಲ್ಲ? ರೈಟ್! ಪಾರಕ್ಕ, ಈ ಕಾಗದಾ ನಿನ್ನ ಪುಸ್ತಕಾ ತಗೊಂಡು ಹಿಂಗ ತುಳಸೀಕಟ್ಟೀಹತ್ತರ ಹಾದು ಮನಿಗೆ ಹೋಗು ಹಂ?"

ಎಲ್ಲ ಬುಲೆಟಿನನ್ನು, ಕಾಗದ ಪತ್ರಗಳನ್ನು ಆರಿಸಿ ಪಾರ್ವತಿಯು ಕೈಯಲ್ಲಿಟ್ಟೆ. ಪಾರ್ವತಿಯು ಹೋಗಿ ಬಿಟ್ಟಳು.

ಮಬ್ಬು ಹರಿದಿತ್ತು. ವಿವೇಕವು ಮರಳಿತ್ತು. ಮನಸ್ಸು ಪಶ್ಚಾತ್ತಾಪಗೊಂಡಿತ್ತು. ಪೋಲೀಸರು ಹಿಡಿಯುವರು ಎಂಬ ಕಲ್ಪನೆಯೇ ನನ್ನಲ್ಲಿ ಸುಳಿಯುತ್ತಿರಲಿಲ್ಲ. ಛೇ... ವಿಚಾರ...

ಶಿವಜಾತನು ರಟ್ಟೆ ಹಿಡಿದು ಎಳೆದೊಯ್ದ. ನಾನು ನನ್ನ ಸ್ವಾಧೀನದಲ್ಲಿಯೇ ಇರಲಿಲ್ಲ. ಸ್ವಭಾವ ಬಲದಿಂದಲೇ ನಾನು ಅಂದು ಪಾರಾದದ್ದು. ಶಿವಜಾತನಿಗೆ ನಾನು ಮೊದಲಿನ ಶ್ರೀಶೈಲನಾಗಿ ಉಳಿದಿರಲಿಲ್ಲ ಎಂಬುದು ತಿಳಿದಿತ್ತೋ ಇಲ್ಲವೋ ಹೇಳಲಾರೆ ಯಾಕಂದರೆ ಅವನು ತನಗೆ ವಿಷಯವೊಂದು ತಿಳಿದಿದೆಯೆಂದು ಯಾರಿಗೂ ತಿಳಿಯಗೊಡುವವನಲ್ಲ!

ಬೆಳಗಾವಿಗೆ ಹೋದ ನನ್ನ ಮೇಲೆ ದರೋಡೆ ಶಿಂದೀ ಮೋಟಾರು ಸುಟ್ಟದ್ದು, ಹಳಿ ಉಟಾಯಿಸಿದ್ದು, ಸುಮಾರು ೫—೬ ಭಯಂಕರ ಕೇಸುಗಳ ಆರೋಪಗಳಿದ್ದವು.

ಬೆಳಗಾಂವಿಯಲ್ಲಿಯೂ ತೊಂದರೆಗಾರಂಭವಾಯಿತು. ನಟ್ಟಗೆ ಪುಣೆಗೆ ಹೋದೆ. ಕಾಂಗ್ರೆಸ್ ಪ್ರಥಮ ಚಿಕಿತ್ಸಾದಳದಲ್ಲಿ ತರಬೇತಿ ಹೊಂದಿದವರ ಅವಶ್ಯಕತೆ ಬಹಳವಿತ್ತು. ಅದರಲ್ಲಿ ಸಮಾವೇಶವಾದೆ. ಅಂದು— ಊರ ಬಿಟ್ಟದಿನ ೪೩ ನೇ ಎಪ್ರಿಲ್ ೬ ನೇ ತಾರೀಖು—ಇಂದು—ಊರಿಗೆ ಮರಳಿದ ದಿನ—೪೭ ನೇ ಎಪ್ರಿಲ್ ೧೯.

ಪಾರ್ವತಿಯು ನಾಳೆ ಪತಿರಾಯನಲ್ಲಿಗೆ ಹೊರಡುತ್ತಾಳೆ. ಪತಿರಾಯನೇ 'ಖುದ್ದ' ಬಂದಿದ್ದಾನೆ. ಅವಳ ಗಂಡನು ನನ್ನ ಕ್ಲಾಸ್‌ಮೇಟ್ ..ಎಂದು ಇಂದು ಆತನನ್ನು ನೋಡಿದಾಗ ತಿಳಿಯಿತು!